ಮಂಗಳವಾರ, ಅಕ್ಟೋಬರ್ 29, 2024 | ₹ 7.00 |
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಅರವಳಿಕೆಗಳ ಆವಿಷ್ಕಾರದಿಂದ ವೈದ್ಯಕೀಯ ಜಗತ್ತಿನಲ್ಲಿ ಕ್ರಾಂತಿಯೇ ನಡೆದಿದೆ



ಆಳ–ಅಗಲ
ಪ್ರಾದೇಶಿಕ ಮಾಧ್ಯಮ: ತರಾತುರಿ ಬೇಕೇ? 4
70 ವರ್ಷ ದಾಟಿದ ಎಲ್ಲರಿಗೂ ಇಂದಿನಿಂದ 'ಆಯುಷ್ಮಾನ್'
ಉಪಚುನಾವಣೆ: ಹವಾ ಎತ್ತ ಕಡೆ? 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,005	24,339	₹82,240 (ಬೆಂಗಳೂರು)	₹1.02ಲಕ್ಷ (ಬೆಂಗಳೂರು)	84.07

ಓದುಗರ ಗಮನಕ್ಕೆ
ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ.

ಜಾತಿಗಣತಿ ಬಗ್ಗೆ ಇನ್ನೂ ಆಗಿಲ್ಲ ತೀರ್ಮಾನ, 2026ರಲ್ಲಿ ಮಾಹಿತಿ ಬಹಿರಂಗ

2025ರ ಶುರುವಲ್ಲಿ ಜನಗಣತಿ?

ನವದೆಹಲಿ (ಪಿಟಿಐ): ಹತ್ತು ವರ್ಷಗಳಿಗೆ ಒಮ್ಮೆ ನಡೆಯುವ ಜನಗಣತಿ ಹಾಗೂ ರಾಷ್ಟ್ರೀಯ ಜನಸಂಖ್ಯಾ ನೋಂದಣಿಯ (ಎನ್‌ಪಿಆರ್) ಪರಿಷ್ಕರಣೆಯು 2025ರ ಆರಂಭದಲ್ಲಿ ಶುರುವಾಗುವ ನಿರೀಕ್ಷೆ ಇದೆ. ಜನಗಣತಿ ಮೂಲಕ ಲಭ್ಯವಾಗುವ ದತ್ತಾಂಶವನ್ನು 2026ರ ಒಳಗೆ ಬಹಿರಂಗಪಡಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಜನಗಣತಿಯನ್ನು 1951ರಿಂದ ಪ್ರತಿ ಹತ್ತು ವರ್ಷಗಳಿಗೆ ಒಮ್ಮೆ ನಡೆಸುತ್ತಾ ಬರಲಾಗಿದೆ. ಇದರ ಪ್ರಕಾರ, ಜನಗಣತಿಯು 2021ರಲ್ಲಿ ನಡೆಯಬೇಕಿತ್ತು. ಆದರೆ, ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ಆ ವರ್ಷ ಜನಗಣತಿ ನಡೆಯಲಿಲ್ಲ. ಈಗ 2025ರಲ್ಲಿ ಇದು ನಡೆದರೆ, ಮುಂದಿನ ದಶವಾರ್ಷಿಕ ಜನಗಣತಿಯ ವರ್ಷಗಳಲ್ಲಿ ಬದಲಾವಣೆ ಆಗಲಿದೆ ಎಂದು ಮೂಲಗಳು ವಿವರಿಸಿವೆ.

ಜನಗಣತಿಯ ಜೊತೆಯಲ್ಲೇ ಜಾತಿ ಜನಗಣತಿಯನ್ನೂ ನಡೆಸಬೇಕೇ ಎಂಬ ಬಗ್ಗೆ ಇನ್ನೂ ತೀರ್ಮಾನ ಆಗಿಲ್ಲ ಎಂದು ಗೊತ್ತಾಗಿದೆ. ಜನಗಣತಿ ಯಾವಾಗ ನಡೆಯಲಿದೆ ಎಂಬ ಬಗ್ಗೆ ಇದುವರೆಗೆ ಅಧಿಕೃತವಾದ ಘೋಷಣೆ ಹೊರಬಿದ್ದಿಲ್ಲ.

'ಜನಗಣತಿ ಹಾಗೂ ಎನ್‌ಪಿಆರ್ ಕೆಲಸಗಳು ಮುಂದಿನ ವರ್ಷದ ಆರಂಭದಲ್ಲಿ ಶುರುವಾಗುವ ಸಾಧ್ಯತೆ ಹೆಚ್ಚಿದೆ. ದತ್ತಾಂಶವನ್ನು 2026ಕ್ಕೆ ಮೊದಲು ಪ್ರಕಟಿಸಲಾಗುತ್ತದೆ. ಇದರೊಂದಿಗೆ, ದಶವಾರ್ಷಿಕ ಜನಗಣತಿ ನಡೆಯುವ ವರ್ಷ ಕೂಡ ಮುಂದೆ ಬದಲಾವಣೆ ಕಾಣಲಿದೆ. ಅಂದರೆ 2025–2035, 2035–2045 ಮತ್ತು ಇದೇ ರೀತಿಯಲ್ಲಿ ಹತ್ತು ವರ್ಷಗಳಿಗೆ ಒಮ್ಮೆ ಜನಗಣತಿ ಮುಂದಿನ ದಶಕಗಳಲ್ಲಿ ನಡೆಯಲಿದೆ' ಎಂದು ಉನ್ನತ ಮೂಲಗಳು ಹೇಳಿವೆ.

ಜನಗಣತಿ ಸಂದರ್ಭದಲ್ಲಿ ಜನರಿಂದ ಅಗತ್ಯ ಮಾಹಿತಿ ಪಡೆಯಲು ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರ ಕಚೇರಿಯು 31 ಪ್ರಶ್ನೆಗಳನ್ನು ಸಿದ್ಧಪಡಿಸಿದೆ. ಹಿಂದಿನ ಜನಗಣತಿಗಳ ಸಂದರ್ಭದಲ್ಲಿ ಕೇಳಿದ ಮಾದರಿಯಲ್ಲೇ,



ಕುಟುಂಬದ ಯಜಮಾನನು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾನೆಯೇ, ಇತರ ಸದಸ್ಯರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿದವರೇ ಎಂಬ ಪಶ್ನೆ ಇರಲಿದೆ.

ದೇಶದಲ್ಲಿ ಜಾತಿ ಜನಗಣತಿ ನಡೆಸಬೇಕು, ಆಗ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಜನಸಂಖ್ಯೆ ಖಚಿತವಾಗಿ ಗೊತ್ತಾಗುತ್ತದೆ ಎಂದು ಕಾಂಗ್ರೆಸ್, ಆರ್‌ಜೆಡಿ ಸೇರಿದಂತೆ ಕೆಲವು ರಾಜಕೀಯ ಪಕ್ಷಗಳು ಒತ್ತಾಯಿಸುತ್ತಿವೆ.

ಜನಗಣತಿ ದತ್ತಾಂಶ ಪ್ರಕಟವಾದ ನಂತರ, ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಗೆ ಸರ್ಕಾರವು 2026ರಲ್ಲಿ ಮುಂದಾಗಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಸಂವಿಧಾನದ 82ನೆಯ ವಿಧಿಯು, '2026ರ ನಂತರದ ಮೊದಲ ಜನಗಣತಿಯ ಅಗತ್ಯ ಅಂಕಿ–ಅಂಶಗಳು ಪ್ರಕಟವಾಗುವವರೆಗೆ ಲೋಕಸಭೆಯ ಕ್ಷೇತ್ರಗಳ ಪುನರ್ ವಿಂಗಡಣೆಯ ಅಗತ್ಯ ಇರುವುದಿಲ್ಲ' ಎಂದು ಹೇಳಿದೆ. ಅಂದರೆ, 2025ರಲ್ಲಿ ಜನಗಣತಿ ನಡೆದರೆ, ಅದರ ದತ್ತಾಂಶ 2026ರಲ್ಲಿ ಪ್ರಕಟವಾದರೆ, 2025ರ ಜನಗಣತಿ ಆಧಾರದಲ್ಲಿ ಕ್ಷೇತ್ರಗಳ ಮರುವಿಂಗಡಣೆ ಮಾಡಲು ಆಗುವುದಿಲ್ಲ. ಮಾಡಲೇಬೇಕು ಎಂದಾದರೆ, 82ನೆಯ ವಿಧಿಗೆ ತಿದ್ದುಪಡಿ ತರಬೇಕಾಗುತ್ತದೆ.

'ಹೀಗಾಗಿ, ಕ್ಷೇತ್ರಗಳ ಮರುವಿಂಗಡಣೆ ವಿಚಾರವಾಗಿ ಯಾವುದೇ ತೀರ್ಮಾನ ತೆಗೆದುಕೊಳ್ಳುವ ಮೊದಲು ಈ ಎಲ್ಲ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ' ಎಂದು ಮೂಲವೊಂದು ವಿವರಿಸಿದೆ.

ಸಮೀಕ್ಷೆಯಲ್ಲಿ ಕೇಳುವ ಪ್ರಶ್ನೆಗಳಲ್ಲಿ ಇವು ಇರಬಹುದು...

- ಮನೆಯಲ್ಲಿ ಸಾಮಾನ್ಯವಾಗಿ ಎಷ್ಟು ಜನ ಇರುತ್ತಾರೆ?
- ಮನೆಯ ಮುಖ್ಯಸ್ಥರು ಮಹಿಳೆಯೇ?
- ಮನೆಯಲ್ಲಿ ವಾಸಿಸುವ ದಂಪತಿಗಳ ಸಂಖ್ಯೆ ಎಷ್ಟು?
- ಕುಟುಂಬವು ದೂರವಾಣಿ, ಇಂಟರ್ನೆಟ್ ಸಂಪರ್ಕ ಹೊಂದಿದೆಯೇ? ಸ್ಮಾರ್ಟ್‌ಫೋನ್ ಅಥವಾ ಮೊಬೈಲ್ ಫೋನ್ ಇದೆಯೇ?
- ಕುಟುಂಬದಲ್ಲಿ ಸೈಕಲ್, ದ್ವಿಚಕ್ರವಾಹನ, ಕಾರು, ಜೀಪು ಅಥವಾ ವ್ಯಾನ್ ಇದೆಯೇ?
- ಮನೆಯಲ್ಲಿ ಬಳಕೆ ಮಾಡುವ ಧಾನ್ಯ ಯಾವುದು?
- ಕುಡಿಯುವ ನೀರಿನ ಮೂಲ ಯಾವುದು?
- ಮನೆಯಲ್ಲಿ ಶೌಚಾಲಯ ಇದೆಯೇ, ಇದ್ದರೆ ಅದು ಯಾವ ಬಗೆಯದು?
- ಮನೆಗೆ ಎಲ್‌ಪಿಜಿ ಸಂಪರ್ಕ ಇದೆಯೇ?

ಸರ್ವಪಕ್ಷ ಸಭೆಗೆ ಕಾಂಗ್ರೆಸ್ ಆಗ್ರಹ

'ಮುಂದಿನ ಜನಗಣತಿಯು ಜಾತಿವಾರು ವಿವರವಾದ ಗಣತಿಯನ್ನು ಒಳಗೊಂಡಿರುತ್ತದೆಯೇ ಹಾಗೂ ಲೋಕಸಭಾ ಕ್ಷೇತ್ರಗಳ ಪುನರ್‌ವಿಂಗಡಣೆಗೆ ಜನಗಣತಿಯನ್ನು ಪೂರಕವಾಗಿ ಬಳಸಲಾಗುತ್ತದೆಯೇ ಎಂಬುದು ಸ್ಪಷ್ಟವಾಗಬೇಕಿದೆ. ಹೀಗಾಗಿ ಈ ಕುರಿತು ಸರ್ವಪಕ್ಷ ಸಭೆ ಕರೆಯಬೇಕು' ಎಂದು ಕಾಂಗ್ರೆಸ್ ಸೋಮವಾರ ಆಗ್ರಹಿಸಿದೆ.

ಈ ಎರಡೂ ವಿಷಯಗಳಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಯಾವುದೇ ಸ್ಪಷ್ಟ ಮಾಹಿತಿ ದೊರೆತಿಲ್ಲ. ಹೀಗಾಗಿ ಅದರ ಬಗ್ಗೆ ಸ್ಪಷ್ಟನೆ ನೀಡಲು ಸರ್ವ ಪಕ್ಷಗಳ ಸಭೆ ಕರೆಯಬೇಕಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಒತ್ತಾಯಿಸಿದ್ದಾರೆ.

'ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರ ಅಧಿಕಾರಾವಧಿಯನ್ನು ಸರ್ಕಾರ ವಿಸ್ತರಿಸಿದೆ. ಇದನ್ನು ಗಮನಿಸಿದರೆ, 2021ರಿಂದ ನನೆಗುದಿಗೆ ಬಿದ್ದಿದ್ದ ಜನಗಣತಿ ಕಾರ್ಯ ಸದ್ಯದಲ್ಲಿಯೇ ಆರಂಭವಾಗುವ ಸಾಧ್ಯತೆಗಳಿವೆ ಎಂಬುದು ತಿಳಿದುಬರುತ್ತದೆ' ಎಂದು ಅವರು ಹೇಳಿದ್ದಾರೆ.

ರಿಜಿಸ್ಟ್ರಾರ್ ಜನರಲ್ ಕೇಂದ್ರ ನಿಯೋಜನೆ ಅವಧಿ ವಿಸ್ತರಣೆ

ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತ ಮೃತ್ಯುಂಜಯ್ ಕುಮಾರ್ ನಾರಾಯಣ್ ಅವರ ಕೇಂದ್ರ ನಿಯೋಜನೆಯನ್ನು 2026ರ ಆಗಸ್ಟ್ 4ರವರೆಗೆ ವಿಸ್ತರಿಸಿ ಸರ್ಕಾರ ಅಧಿಸೂಚನೆ ಹೊರಡಿಸಿದೆ. ನಾರಾಯಣ್ ಅವರು ಉತ್ತರ ಪ್ರದೇಶ ಕೇಡರ್‌ನ 1995ರ ತಂಡದ ಐಎಎಸ್ ಅಧಿಕಾರಿ. 2020ರಿಂದ ಗೃಹ ಸಚಿವಾಲಯದ ಅಡಿಯಲ್ಲಿ ಪ್ರಮುಖ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ನೇಮಕಾತಿ ಅರ್ಜಿಗೂ ಆಧಾರ್ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ನೇಮಕಾತಿಗಳಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸುವ ಎಲ್ಲ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಇನ್ನು ಮುಂದೆ ಮೊಬೈಲ್ ನಂಬರ್ ಇರುವ ಆಧಾರ್ ಕಾರ್ಡ್ ಲಗತ್ತಿಸುವುದು ಕಡ್ಡಾಯ.

ಪರೀಕ್ಷಾ ಅಕ್ರಮ ತಡೆಯಲು ಕೃತಕ ಬುದ್ಧಿಮತ್ತೆ ಅಳವಡಿಕೆ, ಸಿ.ಟಿ.ಟಿ.ವಿ ಕ್ಯಾಮೆರಾ ಕಣ್ಗಾವಲು ಮತ್ತಿತರ ಸುಧಾರಣಾ ಕ್ರಮಗಳನ್ನು ಕೈಗೊಂಡಿರುವ ಕೆಇಎ, ಈಗ ಅಭ್ಯರ್ಥಿಗಳಿಗೆ ಆಧಾರ್ ಕಡ್ಡಾಯ ಮಾಡಲು ಅನುಮತಿ ಕೋರಿ ಇ-ಆಡಳಿತ ಇಲಾಖೆಗೆ ಪ್ರಸ್ತಾವ ಸಲ್ಲಿಸಿದೆ.

ಹೆಚ್ಚಿನ ವಿದ್ಯಾರ್ಥಿಗಳು ಸೈಬರ್ ಕೆಫೆಗಳಿಗೆ ತೆರಳಿ ನೇಮಕಾತಿ ಪರೀಕ್ಷೆ ಅಥವಾ ಸಿಇಟಿಗೆ ಅರ್ಜಿ ಸಲ್ಲಿಸುತ್ತಾರೆ. ಅರ್ಜಿ ಭರ್ತಿ ಮಾಡುವವರು ಒಂದೇ ಮೊಬೈಲ್ ಸಂಖ್ಯೆ ಬಳಸುತ್ತಾರೆ. ಈ ಸಂಖ್ಯೆಗಳು ಸೈಬರ್ ಕೆಫೆ ಮಾಲೀಕರು ಅಥವಾ ಮಧ್ಯವರ್ತಿಗಳಿಗೆ ಸೇರಿರುತ್ತವೆ. ಒಟಿಪಿ ಪಡೆಯುವ ಅವರು ಅರ್ಜಿಗಳನ್ನು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ. ಇದನ್ನು ತಪ್ಪಿಸಲು ಆಧಾರ್ ಬಳಕೆಯ ಚಿಂತನೆ ಮಾಡಲಾಗಿದೆ ಎಂದು ಕೆಇಎ ಅಧಿಕಾರಿಗಳು ಹೇಳಿದ್ದಾರೆ.

ಉಗ್ರನ ಹತ್ಯೆ

ಜಮ್ಮು (ಪಿಟಿಐ): ಇಲ್ಲಿನ ಅಖನೂರ್ ವಲಯದಲ್ಲಿ ಸೇನೆ ಹಾಗೂ ಪೊಲೀಸರು ಸೋಮವಾರ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಒಬ್ಬ ಉಗ್ರನನ್ನು ಹೊಡೆದುರುಳಿಸಲಾಗಿದೆ.

ಶಸ್ತ್ರಧಾರಿ ಉಗ್ರನೊಬ್ಬನ ಮೃತದೇಹ ದೊರಕಿದ್ದು, ಕಾರ್ಯಾಚರಣೆ ಮುಂದುವರಿದಿದೆ ಎಂದು ಸೇನೆ ತಿಳಿಸಿದೆ.

ಇದಕ್ಕೂ ಮುನ್ನ, ಸೇನಾಪಡೆಗೆ ಸೇರಿದ ಆಂಬುಲೆನ್ಸ್ ಮೇಲೆ ಉಗ್ರರು ಸೋಮವಾರ ಮುಂಜಾನೆ ದಾಳಿ ನಡೆಸಿದ್ದರು. ಈ ವೇಳೆ ಸೇನೆ ಹಾಗೂ ಉಗ್ರರ ನಡುವೆ ಗುಂಡಿನ ಚಕಮಕಿ ನಡೆದಿತ್ತು.



ದೀವಳಿ ಉತ್ತರ ಪ್ರದೇಶದ ಅಯೋಧ್ಯೆಯ ರಾಮ್ ಕೀ ಪೈಡಿಯಲ್ಲಿ ದೀಪಾವಳಿಯ ಸಂದರ್ಭದಲ್ಲಿ ದೀಪಗಳನ್ನು ಬೆಳಗಲು ಮಾಡಿರುವ ಸಿದ್ಧತೆಗಳ ಪಕ್ಷಿನೋಟ ಪಿಟಿಐ ಚಿತ್ರ

ಎಂಟು ವಿದ್ಯಾರ್ಥಿಗಳ ಪೋಷಕರಿಂದ ಹಣ ಪಡೆದು ಮೋಸ

₹6.38 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಸೀಟು ಕೊಡಿಸುವ ಆಮಿಷವೊಡ್ಡಿ ಎಂಟು ವಿದ್ಯಾರ್ಥಿಗಳ ಪೋಷಕರಿಂದ ₹6.38 ಕೋಟಿ ಪಡೆದು ವಂಚನೆ ನಡೆಸಿರುವ ಆರೋಪದ ಅಡಿ ಚೆನ್ನೈನ ಮಹಿಳೆ ಅನ್ನಾ ಜಾಕಬ್ ವಿರುದ್ಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಇಲ್ಲಿನ ವಿಬ್‌ಗಯಾರ್ ಶಾಲೆಯಲ್ಲಿ ಶಿಕ್ಷಕಿ ಆಗಿರುವ ದೀಪ್ತಿ ಕೆ. ಸಿಂಹ ಅವರು ದೂರು ನೀಡಿದ್ದರು.

'ದೀಪ್ತಿ ಅವರು ಶಿಕ್ಷಕಿ ಕೆಲಸದ ಜತೆಗೆ ಮನೆಪಾಠ ಸಹ ಮಾಡುತ್ತಿದ್ದರು. ವಸುಂಧರಾ ಎಂಬವರ ಮೂಲಕ ಅನ್ನಾ ಜಾಕಬ್ ಅವರ ಪರಿಚಯವಾಗಿತ್ತು. ಬೆಂಗಳೂರಿನ ಕೋರಮಂಗಲದ ಸೇಂಟ್ ಜಾನ್ ಮೆಡಿಕಲ್ ಕಾಲೇಜು ಹಾಗೂ ವೆಲ್ಲೂರಿನ ಸಿಎಂಸಿ ಮೆಡಿಕಲ್ ಕಾಲೇಜುಗಳಲ್ಲಿ ಟ್ರಸ್ಟಿ ಆಗಿರುವುದಾಗಿ ಆರೋಪಿ ಪರಿಚಯ ಮಾಡಿಕೊಂಡಿದ್ದರು. ಎರಡೂ ಕಾಲೇಜುಗಳಲ್ಲಿ ಎಂಬಿಬಿಎಸ್ ಹಾಗೂ ಎಂ.ಡಿಗೆ ಪೇಮೆಂಟ್ ಸೀಟುಗಳಿದ್ದು ಅವುಗಳನ್ನು ಕೊಡಿಸುವುದಾಗಿ ಹೇಳಿದ್ದರು. ಪರಿಚಯಸ್ಥ ವಿದ್ಯಾರ್ಥಿಗಳಿದ್ದರೆ ಕಳುಹಿಸುವಂತೆಯೂ ಕೋರಿದ್ದರು. ದೀಪ್ತಿ ಅವರು ಈ ವಿಚಾರವನ್ನು ವಿದ್ಯಾರ್ಥಿಗಳ ಕೆಲವು ಪೋಷಕರಿಗೆ ತಿಳಿಸಿದ್ದರು. ನಂತರ ಆರೋಪಿ ಹಾಗೂ ಎಂಟು ವಿದ್ಯಾರ್ಥಿಗಳ ಪೋಷಕರು, ಹೋಟೆಲ್‌ವೊಂದರಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದರು. ಹಣ ಕೊಟ್ಟರೆ ಸೀಟು ಕೊಡಿಸುವುದಾಗಿ ಆಶ್ವಾಸನೆ ನೀಡಿದ್ದರು' ಎಂದು ಸಿಸಿಬಿ ಪೊಲೀಸರು ತಿಳಿಸಿದರು.

'ಮಾತುಕತೆಯ ಬಳಿಕ ಐದು ವಿದ್ಯಾರ್ಥಿಗಳು ದೀಪ್ತಿ ಅವರ ಬ್ಯಾಂಕ್ ಖಾತೆಗೆ ಹಣ ಹಾಕಿದ್ದರು. ಆ ಹಣವನ್ನು ದೀಪ್ತಿ ಅವರು ಚೆನ್ನೈನ ಬ್ಯಾಂಕ್‌ವೊಂದರಲ್ಲಿ ಆರೋಪಿ ಹೆಸರಿನಲ್ಲಿದ್ದ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.


'ಮೆಡಿಕಲ್ ಕಾಲೇಜಿಗೆ ಸೇರ್ಪಡೆ ಕಾಲಾವಧಿ ಮುಕ್ತಾಯವಾದರೂ ಮಕ್ಕಳಿಗೆ ಸೀಟು ಕೊಡಿಸಿರಲಿಲ್ಲ. ಆರೋಪಿ ಯಾವುದೇ ಕಾಲೇಜಿನಲ್ಲಿ ಟ್ರಸ್ಟಿ ಅಲ್ಲ ಎಂಬುದು ಹಣ ನೀಡಿದ್ದವರಿಗೆ ಗೊತ್ತಾಗಿತ್ತು. ನಂತರ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

ಹೈದರಾಬಾದ್‌ನಲ್ಲೂ ವಂಚನೆ: 'ಹೈದರಾಬಾದ್‌ನ ಮುನಾವರ್ ಅವರ ಪುತ್ರನಿಗೂ ಮೆಡಿಕಲ್ ಸೀಟು ಕೊಡಿಸುವುದಾಗಿ ಹೇಳಿ ಅನ್ನಾ ಜಾಕಬ್ ವಂಚನೆ ನಡೆಸಿದ್ದಾರೆ' ಎಂದು ಗೊತ್ತಾಗಿದೆ.

ಎಂ.ಡಿ ಸೀಟ್‌ಗೆ ₹1.50 ಕೋಟಿ

'ವಿದ್ಯಾರ್ಥಿಗಳ ಪೋಷಕರಾದ ಸುಪ್ರಿಯಾ ರಾಯ್, ವರಪ್ರಸಾದ್ ರೆಡ್ಡಿ ಅವರು ಎಂ.ಡಿ ಸೀಟಿಗೆ ₹1.50 ಕೋಟಿ, ಸಂತೋಷ್ ₹70 ಲಕ್ಷ, ಅನಂತರೆಡ್ಡಿ ₹75 ಲಕ್ಷ, ಸಾಧನಾ ದೇಸಾಯಿ ₹50 ಲಕ್ಷ, ಅಂಕಿತಾ ₹75 ಲಕ್ಷ ಹಾಗೂ ಎಂಬಿಬಿಎಸ್ ಸೀಟ್‌ಗಾಗಿ ಶ್ರೀಧರ್ ₹50 ಲಕ್ಷ ಹಾಗೂ ಅನುರಾಧಾ ₹18 ಲಕ್ಷ ನೀಡಿದ್ದರು' ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಕ್ಷೇಮ ಕುಶಲ





ಅರಿವಳಿಕೆಯ ಅರಿವು

ಡಾ. ಶ್ರೀನಿವಾಸ ಹರಪನಹಳ್ಳಿ

ಆಧುನಿಕ ವೈದ್ಯಕೀಯ ಕ್ಷೇತ್ರದಲ್ಲಿ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಉಪಯುಕ್ತವಾಗಿರುವ ಒಂದು ವೈದ್ಯಶಾಸ್ತ್ರವೆಂದರೆ ಅರಿವಳಿಕೆ ಶಾಸ್ತ್ರ. ಯಾವುದೇ ಒಂದು ಸಣ್ಣ ಶಸ್ತ್ರಚಿಕಿತ್ಸೆಯೂ ಅರಿವಳಿಕೆಯ ಔಷಧವಿಲ್ಲದೇ ನೆರವೇರದು. ರೋಗಿಗಳೂ 'ಅನಸ್ತೇಷಿಯಾ ಕೊಟ್ಟೇ ಆಪರೇಷನ್ ಮಾಡುತ್ತೀರಲ್ಲ ಡಾಕ್ಟ್ರೇ' ಎಂದು ಕೇಳುತ್ತಾರೆ. ರೋಗಿಯ ರೋಗಶಮನಕ್ಕೆ ಶಸ್ತ್ರಚಿಕಿತ್ಸೆ ಎಷ್ಟು ಮುಖ್ಯವೋ ಶಸ್ತ್ರಚಿಕಿತ್ಸೆ ವೇಳೆ ನೋವಾಗದಂತೆ ನೋಡಿಕೊಳ್ಳುವುದೂ ಅಷ್ಟೇ ಮುಖ್ಯ. ಶಸ್ತ್ರಚಿಕಿತ್ಸೆಯ ವೇಳೆ ನೋವಿನ ಸಂವೇದನೆ ರೋಗಿಗೆ ಕೊಂಚವೂ ಆಗದಷ್ಟು ನೋಡಿಕೊಳ್ಳುವಲ್ಲೇ ಅರಿವಳಿಕೆಯ ಮಹತ್ವ ಅಡಗಿದೆ.

ವೈದ್ಯಕೀಯ ವಿಜ್ಞಾನದ ಅನೇಕ ಶಾಸ್ತ್ರಗಳನ್ನು ಅವಲೋಕಿಸಿದರೆ 'ಅರಿವಳಿಕೆಶಾಸ್ತ್ರ' ಕೊಂಚ ಹೊಸದೇ. ಅದರಲ್ಲೂ ಆಧುನಿಕ ಅರಿವಳಿಕೆಶಾಸ್ತ್ರಕ್ಕೆ ಸುಮಾರು ಒಂದೂ ಮುಕ್ಕಾಲು ಶತಮಾನದ ಇತಿಹಾಸವಷ್ಟೇ ಇದೆ. ಬೇರೆಲ್ಲಾ ಕ್ಷೇತ್ರಗಳಲ್ಲಿ 17-18ನೇ ಶತಮಾನಗಳಲ್ಲಿ ನಡೆದ ಅನೇಕ ಸಂಶೋಧನೆಗಳು ಮತ್ತು ಆವಿಷ್ಕಾರಗಳು ರೋಗವನ್ನು ಅರಿತುಕೊಳ್ಳಲು, ಹಾಗೂ ಔಷಧಗಳ ಮೂಲಕ ಚಿಕಿತ್ಸೆ ನೀಡಲು ಸಹಾಯಮಾಡಿದರೆ ನೋವುರಹಿತ ಶಸ್ತ್ರಚಿಕಿತ್ಸೆ 19ನೇ ಶತಮಾನದ ಮಧ್ಯಭಾಗದವರೆಗೆ ಇನ್ನೂ ಮರೀಚಿಕೆಯೇ ಆಗಿತ್ತು. ಅದುವರೆಗೆ ಶಸ್ತ್ರಚಿಕಿತ್ಸೆ ನಡೆಸುವ ಮುನ್ನ ರೋಗಿಗೆ ಅಫೀಮು ತಿನ್ನಿಸಿ ಅಥವಾ ಸಂಪೂರ್ಣ ಅಮಲು ಬರುವಷ್ಟು ಸುರಾಪಾನ ಮಾಡಿಸಿ ನಂತರ ಅಂಗಚ್ಛೇದದಂತಹ ಪ್ರಕ್ರಿಯೆಗಳನ್ನು ಕೈಗೊಳ್ಳುತ್ತಿದ್ದರು. ಇದು ಅವೈಜಾನಿಕವಾಗಿದ್ದು ಎಷ್ಟೋ ಬಾರಿ ರೋಗಿಗಳು ಶಸ್ತ್ರಚಿಕಿತ್ಸೆಯ ಸಂದರ್ಭದಲ್ಲೇ ಪ್ರಾಣಬಿಡುತ್ತಿದ್ದರು. ಇದಕ್ಕೂ ಮುಂಚೆ ಮರದ ಕೊರಡಿನಿಂದ ರೋಗಿಯ ತಲೆಗೆ ಬಲವಾದ ಪೆಟ್ಟು ಕೊಟ್ಟು ಪ್ರಜ್ಞೆಯನ್ನು ತಪ್ಪಿಸಿ ಶಸ್ತ್ರಚಿಕಿತ್ಸೆಯನ್ನು ಮಾಡುತ್ತಿದ್ದರು. ಅನೇಕ ಬಾರಿ ಪೆಟ್ಟಿನಿಂದ ಪ್ರಜ್ಞೆ ತಪ್ಪಿದ್ದ ರೋಗಿಗಳು ಶಸ್ತ್ರಚಿಕಿತ್ಸೆಯ ಅನಂತರ ಮರಳಿ ಪ್ರಜ್ಞಾವಸ್ಥೆಗೆ ಬರುತ್ತಲೇ ಇರಲಿಲ್ಲ!

ಆದರೆ 1946ರ ಅಕ್ಟೋಬರ್ 16ರಂದು ಅಮೆರಿಕದ ಮೆಸಾಚುಸೆಟ್ಸ್ ಜನರಲ್ ಆಸ್ಪತ್ರೆಯಲ್ಲಿ ನಡೆದ ಒಂದು ಪ್ರಾತ್ಯಕ್ಷಿಕೆ ಶಸ್ತ್ರಚಿಕಿತ್ಸೆಯನ್ನು ನೋವಿಲ್ಲದೇ ಸುರಕ್ಷಿತವಾಗಿ ಮಾಡಬಹುದೆಂದು ತೋರಿಸಿಕೊಟ್ಟಿತು. ಅಂದು ಡಬ್ಲ್ಯೂಟಿಜಿ ಮಾರ್ಟನ್ ಎಂಬ ದಂತವೈದ್ಯ 'ಈಥರ್' ಎಂಬ ರಾಸಾಯನಿಕದ ಹನಿಗಳನ್ನು (ಅಬ್ಬಾಟ್ ಎಂಬ) ರೋಗಿಗೆ ಉಸಿರಾಟದ ಮೂಲಕ ಕೊಟ್ಟು ರೋಗಿಯು ಪ್ರಜ್ಞೆ ತಪ್ಪುವಂತೆ ಮಾಡಿದ. ನಂತರ (ವಾರೆನ್ ಎಂಬ) ಶಸ್ತ್ರಚಿಕಿತ್ಸಕ ರೋಗಿಯ ಕುತ್ತಿಗೆಯ ಮೇಲಿನ ಗಂಟೊಂದನ್ನು ಛೇದಿಸಿ ತೆಗೆದ. ಶಸ್ತ್ರಚಿಕಿತ್ಸೆಯ ನಂತರ ರೋಗಿಯು ಎಚ್ಚರವಾಗಿ ಕಣ್ತೆರೆದು ತನಗೆ ಯಾವುದೇ ತರಹದ ನೋವಿನ ಸಂವೇದನೆ ಆಗಲಿಲ್ಲ ಎಂದ. ಆಗ ಅಲ್ಲಿ ನೆರೆದಿದ್ದ ವೈದ್ಯಸಮುದಾಯವೆಲ್ಲ ಸಂತಸದಿಂದ 'ಇದು ಕಣ್ಕಟ್ಟಲ್ಲ ಅದ್ಭುತ ಸಂಶೋಧನೆ' ಎಂದು ಕೊಂಡಾಡಿತು. ಡಾ. ಮಾರ್ಟನ್ ಅಂದು ಬಳಸಿದ ಈಥರ್ ಅರಿವಳಿಕೆ ಜಗತ್ತಿನ ಪ್ರಪ್ರಥಮ ಅಧಿಕೃತ ಅರಿವಳಿಕೆಯಾಗಿ ಇತಿಹಾಸದಲ್ಲಿ ದಾಖಲಾಗಿದೆ. ಶಸ್ತ್ರಚಿಕಿತ್ಸೆ ನಡೆದ ಆಸ್ಪತ್ರೆಯ ಪ್ರಾಂಗಣ ಈಗ 'ಈಥರ್ ಡೋಮ್' ಎಂದೇ ಪ್ರಸಿದ್ಧಿಯಾಗಿದೆ. ಅದರಂತೆ ಪ್ರತಿವರ್ಷ ಅಕ್ಟೋಬರ್ 16ರಂದು ಜಗತ್ತಿನಾದ್ಯಂತ ವೈದ್ಯರು 'ವಿಶ್ವ ಅರಿವಳಿಕೆಯ ದಿನ'ವನ್ನು ಆಚರಿಸುತ್ತಾರೆ.

ಈಥರ್ ಪ್ರಸಿದ್ಧಿಯಾದ ಕೆಲವು ವರ್ಷಗಳ ನಂತರ ಜಾನ್ ಸ್ನೋ ಎಂಬ ರಾಜವೈದ್ಯ 'ಕ್ಲೋರೊಫಾರ್ಮ್' ಅನ್ನು ಬಳಸುವ ಮೂಲಕ ವಿಕ್ಟೋರಿಯಾ ರಾಣಿಗೆ ನೋವುರಹಿತ ಹೆರಿಗೆಯನ್ನು ಮಾಡಿಸಿದ. ಅಂದಿನಿಂದ 20ನೇ ಶತಮಾನದ ಮಧ್ಯಭಾಗದವರೆಗೂ ಈಥರ್ ಮತ್ತು ಕ್ಲೋರೊಫಾರ್ಮ್ ಅರಿವಳಿಕೆಗಳು ಶಸ್ತ್ರಚಿಕಿತ್ಸೆಯ ಅವಿಭಾಜ್ಯ ಅಂಗಗಳಾಗಿದ್ದವು. 19ನೇ ಶತಮಾನದ ಕೊನೆಗೆ ಆಗಸ್ಟ್ ಬಯರ್ ಎಂಬಾತ ಬೆನ್ನುಹುರಿಯ ದ್ರವದಲ್ಲಿ 'ಲಿಗ್ನೋಕೈನ್' ಎಂಬ ಅರಿವಳಿಕೆ ಔಷಧವನ್ನು ನೀಡುವ ಮೂಲಕ 'ಸ್ಪೈನಲ್' ಅರಿವಳಿಕೆಗೆ ನಾಂದಿ ಹಾಡಿದ. ಇಂದಿಗೂ ಸ್ಪೈನಲ್ ಅರಿವಳಿಕೆ ಅತ್ಯಂತ ಸುರಕ್ಷಿತ ವಿಧಾನವಾಗಿದ್ದು ಜಗತ್ತಿನಾದ್ಯಂತ ವ್ಯಾಪಕವಾಗಿ ಬಳಕೆಯಾಗುತ್ತಿದೆ.

20ನೇ ಶತಮಾನದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಅಗಾಧ ಸುಧಾರಣೆ ಕಂಡುಬಂದಿತು. ಅದರಂತೆ ಅರಿವಳಿಕೆಶಾಸ್ತ್ರ ಕೂಡ ಸುಧಾರಣೆ ಹೊಂದುತ್ತ ಬಂದು ಈಗ ಅತ್ಯಾಧುನಿಕ ಯಂತ್ರೋಪಕರಣಗಳು, ಶಕ್ತಿಯುತ ಔಷಧಗಳನ್ನು ಹೊಂದಿ ರೋಗಿಗಳಿಗೆ ಮತ್ತು ಶಸ್ತ್ರಚಿಕಿತ್ಸಕರಿಗೆ ಒಂದು ವರದಾನವಾಗಿದೆ. ವಿಶ್ವದಾದ್ಯಂತ ಲಕ್ಷಾಂತರ ಕ್ಲಿಷ್ಟಕರ ಶಸ್ತ್ರಚಿಕಿತ್ಸೆಗಳು ಸುರಕ್ಷಿತವಾಗಿ ನಡೆಯಲು ಅರಿವಳಿಕೆಯೂ ಮುಖ್ಯ ಕಾರಣವೆಂದರೆ ತಪ್ಪಾಗಲಾರದು. ಇಂದು ಪ್ರತಿಯೊಂದು ಶಸ್ತ್ರಚಿಕಿತ್ಸೆ ಹಾಗೂ ಪ್ರತಿಯೊಂದು ರೋಗಿಗೂ ಸೂಕ್ತವಾಗುವ ರೀತಿಯಲ್ಲಿ ನೀಡಬಲ್ಲ ಅನೇಕ ಅರಿವಳಿಕೆಯ ವಿಧಾನಗಳಿವೆ. ಚರ್ಮದ ಮೇಲಿನ ಚಿಕ್ಕ-ಪುಟ್ಟ ಗಡ್ಡೆಗಳ ಚಿಕಿತ್ಸೆಗೆ ಸ್ಥಾನೀಯ ಅರಿವಳಿಕೆ ಸಾಕಾದರೆ, ಸೊಂಟ, ಕಾಲುಗಳ ಶಸ್ತ್ರಚಿಕಿತ್ಸೆಗೆ ಬೆನ್ನುಹುರಿಯಲ್ಲಿ ಇಂಜೆಕ್ಷನ್ ನೀಡುವ ಮೂಲಕ ಅರಿವಳಿಕೆಯನ್ನು ನೀಡಲಾಗುತ್ತದೆ. ಅದರಂತೆ ಮಿದುಳು, ಹೃದಯ, ಶ್ವಾಸಕೋಶ ಅಥವಾ ಯಕೃತ್ತಿನ ಶಸ್ತ್ರಚಿಕಿತ್ಸೆಗೆ ಸಂಪೂರ್ಣ ಪ್ರಜ್ಞೆಯನ್ನು ತಪ್ಪಿಸುವ ಮೂಲಕ 'ಜನರಲ್ ಅನಸ್ತೇಷಿಯಾ'ವನ್ನು ನೀಡಲಾಗುತ್ತದೆ.

ಅರಿವಳಿಕೆ ನೀಡುವ ಮುನ್ನ ತಜ್ಞರು ರೋಗಿಗಳ ದೇಹಸ್ಥಿತಿಯ ಸಮಗ್ರ ಮಾಹಿತಿಯನ್ನು ಪಡೆದುಕೊಂಡು ಅವರಿಗೆ ಸೂಕ್ತವಾದ ಅರಿವಳಿಕೆಯ ವಿಧಾನವನ್ನು ನಿರ್ಧರಿಸುತ್ತಾರೆ. ಆದ್ದರಿಂದ ಶಸ್ತ್ರಚಿಕಿತ್ಸೆಗೆ ಒಳಗಾಗುವ ರೋಗಿಗಳು ತಮಗೆ ಬಿ.ಪಿ, ಮಧುಮೇಹ, ಆಸ್ತಮಾ ಅಥವಾ ಹೃದಯಸಂಬಂಧಿ ಕಾಯಿಲೆಗಳಿದ್ದರೆ ಅದರ ವಿವರಗಳನ್ನು ವೈದ್ಯರಿಗೆ ತಿಳಿಸುವುದು ಬಹುಮುಖ್ಯ. ಅಲ್ಲದೇ ಈ ಹಿಂದೆ ಅರಿವಳಿಕೆಯನ್ನು ತೆಗೆದುಕೊಂಡಿದ್ದರೆ ಅದನ್ನೂ ತಿಳಿಸುವುದು ಅವಶ್ಯಕ.

ಇಂದು ಅರಿವಳಿಕೆತಜ್ಞರ ಕೆಲಸ ಕೇವಲ ಶಸ್ತ್ರಚಿಕಿತ್ಸೆಗೆ ಮಾತ್ರ ಸೀಮಿತವಾಗಿಲ್ಲ. ಅವರು ತುರ್ತುಚಿಕಿತ್ಸೆ, ಮತ್ತು ತೀವ್ರನಿಗಾ ಘಟಕಗಳನ್ನೂ ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ನೋವುರಹಿತ ಹೆರಿಗೆ, ಕ್ಯಾನ್ಸರ್ ನೋವುನಿವಾರಣೆ ಇವಕ್ಕೂ ಕೂಡ ಅರಿವಳಿಕೆತಜ್ಞರು ಸಹಾಯ ಮಾಡಬಲ್ಲರು. ❖

- ಅರಿವಳಿಕೆಗೂ ಮುನ್ನ ನಾಲ್ಕಾರು ಗಂಟೆಗಳ ಕಾಲ ಏನನ್ನೂ ಸೇವಿಸಿರಬಾರದು.
- ಶಸ್ತ್ರಚಿಕಿತ್ಸೆ ಮುಗಿದ ನಂತರ ಸಾಮಾನ್ಯವಾಗಿ ಮತ್ತೆ ಸುಮಾರು ಮೂರ್ನಾಲ್ಕು ಗಂಟೆಗಳ ಕಾಲ ಏನನ್ನೂ ಸೇವಿಸಬಾರದು.
- ಅರಿವಳಿಕೆ ನಂತರ ಒಂದೆರಡು ಗಂಟೆ ಕೊಂಚ ಮಂಪರು, ಉಬ್ಬಳಿಕೆ ಸಾಮಾನ್ಯ.
- ಅರಿವಳಿಕೆ ವಿಧಾನಗಳು ರೋಗ ಹಾಗೂ ರೋಗಿಯ ದೇಹಸ್ಥಿತಿಯ ಮೇಲೆ ನಿರ್ಧರಿಸಲ್ಪಡುತ್ತವೆ.
- ಸುರಕ್ಷಿತ ಅರಿವಳಿಕೆಯಿಂದ ಯಾವುದೇ ದೀರ್ಘಕಾಲೀನ ಅರೋಗ್ಯಸಮಸ್ಯೆಗಳು ಉಂಟಾಗುವುದಿಲ್ಲ.

ರುಚಿಯಲ್ಲಿ ಆರೋಗ್ಯ ಆರೋಗ್ಯದಲ್ಲಿ ರುಚಿ

ಡಾ. ಬ್ರಹ್ಮಾನಂದ ನಾಯಕ

ನನ್ನ ಅಜ್ಜಿ ಹೇಳುತ್ತಿದ್ದಳು, 'ಊಟ ಅಂದ್ರೆ ಜೀವನದ ಹಬ್ಬ'. ಈ ಮಾತು ನನ್ನ ವೈದ್ಯಕೀಯ ದೃಷ್ಟಿಕೋನವನ್ನೇ ಬದಲಿಸಿತು. ನಾನು ಮಧುಮೇಹರೋಗಿಗಳಿಗೆ ಹೇಳುತ್ತೇನೆ: 'ನಿಮ್ಮ ಆಹಾರ ಒಂದು ಜೀವಂತ ಕಲಾಕೃತಿ. ಪಾಲಕ್ ಸೊಪ್ಪು ನಿಮ್ಮ ರಕ್ತದಲ್ಲಿ ಸಮತೋಲನ ಕಾಯುತ್ತದೆ, ದಾಳಿಂಬೆ ನಿಮ್ಮ ಕೋಶಗಳನ್ನು ಕಾಪಾಡುತ್ತದೆ, ಜೋಳ ನಿಮ್ಮಲ್ಲಿ ಚೈತನ್ಯವನ್ನು ತುಂಬುತ್ತದೆ.'

'ಇದನ್ನು ತಿನ್ನಬೇಡಿ' ಎಂದು ಹೇಳುವ ಬದಲು, 'ಈ ಆಹಾರಗಳು ನಿಮಗೆ ಉತ್ತಮ' ಎಂದು ಹೇಳುವುದೇ ಒಳಿತು. ಪ್ರತಿ ಊಟವನ್ನು ಒಂದು ಸಣ್ಣ ಹಬ್ಬವನ್ನಾಗಿ ಮಾಡಿ - ಜಾಗೃತಿಯಿಂದ, ಕೃತಜ್ಞತೆಯಿಂದ, ಪ್ರೀತಿಯಿಂದ. ಮಧುಮೇಹ ನಿಮ್ಮನ್ನು ನಿರ್ಬಂಧಿಸುವುದಿಲ್ಲ; ಅದು ನಿಮ್ಮನ್ನು ಹೊಸ ರುಚಿಗಳ, ಹೊಸ ಆರೋಗ್ಯದ ಲೋಕಕ್ಕೆ ಕರೆದೊಯ್ಯುತ್ತದೆ. ನಾನು ನಿಮಗೆ ಕೇವಲ ವಿಜ್ಞಾನ ಮತ್ತು ಸಲಹೆಗಳನ್ನು ಮಾತ್ರವಲ್ಲ, ಹೊಸ ರುಚಿಗಳ ಬಗ್ಗೆಯೂ ತಿಳಿಸುತ್ತೇನೆ. ಮಧುಮೇಹದೊಂದಿಗೆ ಬದುಕುವುದು ಕೂಡ ಸ್ವಾದಿಷ್ಟ ಪ್ರಯಾಣವಾಗಬಹುದು!

ನಮ್ಮ ಸ್ವಾದಿಷ್ಟ ಪಯಣದಲ್ಲಿ ಮೊದಲ ನಿಲುಗಡೆ ತರಕಾರಿಗಳು: ಇವು ನಮ್ಮ ಅಜ್ಜಿ-ಅಜ್ಜಂದಿರು ಎಂದಿಗೂ ತಪ್ಪಿಸದ ಆರೋಗ್ಯದ ಖಜಾನೆ. ಇವುಗಳನ್ನು ನಿಮ್ಮ ತಟ್ಟೆಯ ಆಪ್ತ ಸ್ನೇಹಿತರಂತೆ ಭಾವಿಸಿ. ಪಾಲಕ್, ಮೆಂತ್ಯ ಮತ್ತು ದಂಟಿನ ಸೊಪ್ಪುಗಳು ಕೇವಲ ರುಚಿಕರವಲ್ಲ; ಅವು ನಿಮ್ಮ ದೇಹಕ್ಕೆ ಶಕ್ತಿಯ ಚಿಲುಮೆ.

ನಂತರ ಸಂಪೂರ್ಣ ಧಾನ್ಯಗಳು. ಕಂದು ಅಕ್ಕಿ, ರಾಗಿ, ಜೋಳ, ಸಜ್ಜೆ - ಇವು ನಮ್ಮ ದೇಶದ ಹಳ್ಳಿಗಳಲ್ಲಿ ಶತಮಾನಗಳಿಂದ ಬೆಳೆಯುತ್ತಿರುವ ಆರೋಗ್ಯದ ಭಂಡಾರ.

ಪ್ರೊಟೀನ್‌ಗಳು ನಮ್ಮ ದೇಹದ ಬಿಲ್ಡಿಂಗ್ ಬ್ಲಾಕ್‌ಗಳು. ನಮ್ಮ ದೈನಂದಿನ ದಾಲ್, ಹುರಿಗಡಲೆ, ಮೊಟ್ಟೆ ಅಥವಾ ಮೀನು - ಇವೆಲ್ಲವೂ ಉತ್ತಮ ಪ್ರೊಟೀನ್ ಮೂಲಗಳು. ಇವು ನಿಮ್ಮನ್ನು ದೀರ್ಘ ಸಮಯದವರೆಗೆ ಹಸಿವಿಲ್ಲದೆ ಇರಿಸುತ್ತವೆ. ಏಕೆಂದರೆ ಪ್ರೊಟೀನ್‌ಗಳು ಜೀರ್ಣಕ್ರಿಯೆಗೆ ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತವೆ. ಇದರಿಂದ ನಿಮ್ಮ ರಕ್ತದಲ್ಲಿ ಸಕ್ಕರೆಯ ಮಟ್ಟವೂ ನಿಧಾನವಾಗಿ ಏರುತ್ತದೆ. ಇದು ಮಧುಮೇಹ ನಿಯಂತ್ರಣಕ್ಕೆ ಸಹಾಯಕ.

ಹಣ್ಣುಗಳು ನಮ್ಮ ಪ್ರಕೃತಿ ತಾಯಿಯ ಕೊಡುಗೆ. ಅವುಗಳಲ್ಲಿ ಸಕ್ಕರೆ ಇದ್ದರೂ, ಅದರೊಂದಿಗೆ ನಾರು, ವಿಟಮಿನ್‌ಗಳು ಮತ್ತು ಆ್ಯಂಟಿ–ಆಕ್ಸಿಡೆಂಟ್‌ಗಳ ಖಜಾನೆಯೂ ಇದೆ. ಬೆರ್ರಿಗಳು, ಸೇಬು, ಪೇರಲೆ - ಇವೆಲ್ಲವೂ ನಿಮ್ಮ ಸ್ನೇಹಿತರು. ನಮ್ಮ ದೇಶೀಯ ಹಣ್ಣುಗಳಾದ ಸೀತಾಫಲ, ಜಾಮೂನು (ನೇರಳೆ), ಅಂಜೂರ ಕೂಡ ಉತ್ತಮ ಆಯ್ಕೆಗಳು.

ಕೊಬ್ಬುಗಳ ಬಗ್ಗೆ ನಮ್ಮ ಅಜ್ಜಿ ಹೇಳುತ್ತಿದ್ದಳು: 'ಒಳ್ಳೆಯದನ್ನು ತಿನ್ನು, ಆದರೆ ಸ್ವಲ್ಪ ಸ್ವಲ್ಪ ತಿನ್ನು.' ಅದೇ ನಿಯಮ ಇಲ್ಲಿಯೂ ಅನ್ವಯಿಸುತ್ತದೆ. ಬೀಜಗಳು, ಕಾಳುಗಳು, ನೆಲ್ಲಿಕಾಯಿ, ತೆಂಗಿನಕಾಯಿ - ಇವೆಲ್ಲವೂ ನಿಮ್ಮ ಹೃದಯಕ್ಕೆ ಒಳ್ಳೆಯದು.

ಸಂಜೆಯ ಉಪಾಹಾರಗಳು ನಿಷೇಧವಲ್ಲ; ಬದಲಿಗೆ, ಹುರಿದ ಕಡಲೆ, ಸುಗಂಧಿತ ಶುಂಠಿ ಚಹಾ, ಮೆಂತ್ಯಇಡ್ಲಿ, ರಾಗಿರೊಟ್ಟಿ, ಅವರೆಕಾಳು ಸುಂಡಾಲ್, ಸಬ್ಜಾ ಬೀಜದ ಶರಬತ್ತು, ನವಣೆ ದೋಸೆ, ಕೋಸಂಬರಿ, ಹುರಿಗಡಲೆ ಉಸ್ಲಿ, ಸ್ಟೀವಿಯಾ ಸೇರಿಸಿ ತಯಾರಿಸಿದ ಸಬ್ಬಕ್ಕಿ ಪಾಯಸ, ಮೆಕ್ಕೆಜೋಳದ ರೊಟ್ಟಿ - ಇವೆಲ್ಲವೂ ನಿಮ್ಮ ದೇಹದ ಇಂಧನಮೂಲಗಳು.

ನೆನಪಿರಲಿ, ಮಧುಮೇಹವನ್ನು ನಿಯಂತ್ರಿಸುವುದು ಎಂದರೆ ನಿಮ್ಮ ಆಹಾರದ ಆನಂದವನ್ನು ಕಳೆದುಕೊಳ್ಳುವುದಲ್ಲ. ಅದು ನಿಮ್ಮ ದೇಹ ಮತ್ತು ಮನಸ್ಸನ್ನು ಆಲಿಸುವ, ಅದಕ್ಕೆ ಪ್ರತಿಕ್ರಿಯಿಸುವ ಒಂದು ಹೊಸ ಮಾರ್ಗ.

ಊಟ ಮಾಡುವುದು ಕೂಡ ಒಂದು ಕಲೆ. ಕೇವಲ ಏನು ತಿನ್ನುತ್ತೀರಿ ಎಂಬುದಷ್ಟೇ ಅಲ್ಲ, ಹೇಗೆ ತಿನ್ನುತ್ತೀರಿ ಎಂಬುದೂ ಮುಖ್ಯ. ಮೊದಲು ನಾರಿನಂಶ ಮತ್ತು ಪ್ರೊಟೀನ್ ಸೇವಿಸುವುದು (ಸಲಾಡ್, ಕಾಳು ಪಲ್ಯ), ನಂತರ ಪಿಷ್ಟಪದಾರ್ಥಗಳನ್ನು ತಿನ್ನುವುದು (ರೊಟ್ಟಿ-ದಾಲ್). ಈ ಕ್ರಮ ಊಟದ ನಂತರದ ರಕ್ತದ ಸಕ್ಕರೆ ಏರಿಕೆಯನ್ನು ಶೇ 73ರಷ್ಟು ಕಡಿಮೆ ಮಾಡುತ್ತದೆ.

ನಮ್ಮ ಹಿರಿಯರು ಸದಾ ಹೇಳುತ್ತಿದ್ದರು: 'ನಮ್ಮ ಮನೆಯ ಔಷಧ ನಮ್ಮ ಅಡುಗೆಮನೆಯಲ್ಲಿದೆ.' ಅದು ನಿಜ! ಹಾಗಲಕಾಯಿ, ಮೆಂತ್ಯ, ಅರಿಶಿನ - ಇವೆಲ್ಲವೂ ನಮ್ಮ ದೈನಂದಿನ ಊಟದಲ್ಲಿರುವ ಆರೋಗ್ಯದ ಖಜಾನೆಗಳು. ಇವುಗಳ ನಿಯಮಿತ ಸೇವನೆ ಮಧುಮೇಹಿಗಳಲ್ಲಿ ರಕ್ತದ ಸಕ್ಕರೆಯ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ: ಹಾಗಲಕಾಯಿ ಇನ್ಸುಲಿನ್ ಸೂಕ್ಷ್ಮತೆಯನ್ನು ಹೆಚ್ಚಿಸುತ್ತದೆ, ಮೆಂತ್ಯ ರಕ್ತದ ಸಕ್ಕರೆ ಮಟ್ಟವನ್ನು ಕಡಿಮೆ ಮಾಡುತ್ತದೆ, ಮತ್ತು ಅರಿಶಿನ ಉರಿಯೂತವನ್ನು ಕಡಿಮೆ ಮಾಡುತ್ತದೆ.

ಮಧುಮೇಹದ ನಿಯಂತ್ರಣ ಎಂದರೆ ನಮ್ಮ ಜೀವನದ ಸಂತೋಷಗಳನ್ನು ತ್ಯಜಿಸುವುದಲ್ಲ. ಅದು ನಮ್ಮ ಆಹಾರ, ನಮ್ಮ ಆರೋಗ್ಯ, ಮತ್ತು ನಮ್ಮ ಸಂತೋಷ - ಈ ಮೂರನ್ನೂ ಸಮತೋಲನಗೊಳಿಸುವ ಕಲೆ.

ನಿಮ್ಮ ತಟ್ಟೆ ಒಂದು ಪ್ರೇಮಪತ್ರ. ಪ್ರತಿ ತುತ್ತು ಒಂದು ಅಕ್ಷರ. ಹಸಿರುಸೊಪ್ಪುಗಳು ಕವನಗಳು. ರಾಗಿ-ಜೋಳ ಕಥೆಗಳು. ಬೇಳೆ-ಕಡಲೆ ನುಡಿಮುತ್ತುಗಳು. ನಿಮ್ಮ ದೇಹ ಓದುತ್ತದೆ, ಕೇಳುತ್ತದೆ, ಮಾತನಾಡುತ್ತದೆ. ಆಲಿಸಿ, ಪ್ರತಿಸ್ಪಂದಿಸಿ. ಆಹಾರವನ್ನು ಕಂಡು ಭಯಪಡಬೇಡಿ; ಅದರ ಶಕ್ತಿಯನ್ನು ಅನುಭವಿಸಿ, ರುಚಿಯನ್ನು ಆಚರಿಸಿ.

ಇದು ಬರೀ ಮಧುಮೇಹದ ಕುರಿತಲ್ಲ, ಜೀವನದ ಕುರಿತು. ಹೊಸ ರುಚಿಗಳು, ಹೊಸ ಆನಂದ, ಹೊಸ ನೀವು. ಸಕ್ಕರೆಯನ್ನು ನಿಯಂತ್ರಿಸಿ; ಆದರೆ ಜೀವನದ ಮಾಧುರ್ಯವನ್ನು ಕಳೆದುಕೊಳ್ಳಬೇಡಿ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ – ಗಣಿತ

ಅಧ್ಯಾಯ–10 ವೃತ್ತಗಳು

ಈ ಪಾಠದಲ್ಲಿ ಬರುವ ಸಮಸ್ಯೆಗಳನ್ನು ಬಿಡಿಸಲು ಈ ಕೆಳಗಿನ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡಿರಿ

* ವೃತ್ತ ಎಂದರೆ ಒಂದು ಸಮತಲದಲ್ಲಿ ಸ್ಥಿರ ಬಿಂದು (ವೃತ್ತ ಕೇಂದ್ರ)ವಿನಿಂದ, ಸ್ಥಿರ ಅಂತರದಲ್ಲಿ(ತ್ರಿಜ್ಯ)ರುವ ಬಿಂದುಗಳ ಸಮೂಹ
* ವೃತ್ತವನ್ನು ಒಂದೇ ಒಂದು ಬಿಂದುವಿನಲ್ಲಿ ಛೇದಿಸುವ ರೇಖೆಯನ್ನು ಸ್ಪರ್ಶಕ ಎಂದು ಕರೆಯುವರು
* ಸ್ಪರ್ಶಕ ಎಂದರೆ ಆಂಗ್ಲ ಭಾಷೆಯಲ್ಲಿ 'Tangent'. F ಪದವು ಲಾಟಿನ್ ಭಾಷೆಯ 'tangere' ಎಂಬ ಪದದಿಂದ ಬಂದಿದೆ. ಇದರ ಅರ್ಥ 'ಸ್ಪರ್ಶಿಸು' ಎಂದಾಗಿದೆ. ಇದನ್ನು ಡ್ಯಾನಿಷ್‌ನ ಗಣಿತಜ್ಞ ಥಾಮಸ್ ಫಿನೆಕೆ 1583.ರಲ್ಲಿ ಪ್ರಥಮವಾಗಿ ಪರಿಚಯಿಸಿದರು.


ಪ್ರಮೇಯ 10.1

ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು, ಸ್ಪರ್ಶ ಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ.

ಸಾಧನೆ: ನಮಗೆ ನೀಡಿದ ವೃತ್ತದಲ್ಲಿ O ವೃತ್ತಕೇಂದ್ರ ಮತ್ತು P ಬಿಂದುವಿನಲ್ಲಿ XY ಒಂದು ಸ್ಪರ್ಶಕವಾಗಿದೆ.

ನಾವು, OP ಯು XY ಗೆ ಲಂಬವಾಗಿದೆ ಎಂದು ಸಾಧಿಸಬೇಕಿದೆ.

ರಚನೆ:– Pಯನ್ನು ಹೊರತುಪಡಿಸಿ, XY ಮೇಲೆ ಮತ್ತೊಂದು ಬಿಂದು Q ತೆಗೆದುಕೊಳ್ಳಿ ಮತ್ತು OQ ಸೇರಿಸಿ. (ಚಿತ್ರ ನೋಡಿ).



Q ಬಿಂದುವು ವೃತ್ತದ ಹೊರಭಾಗದಲ್ಲಿರಬೇಕು. (ಏಕೆ? Q ಬಿಂದುವು ವೃತ್ತದ ಒಳಭಾಗದಲ್ಲಿದ್ದರೆ, XY ವೃತ್ತಕ್ಕೆ ಛೇದಕವಾಗಿರುತ್ತದೆಯೇ ಹೊರತು ವೃತ್ತಕ್ಕೆ ಸ್ಪರ್ಶಕವಾಗಿರುವುದಿಲ್ಲ). ಆದ್ದರಿಂದ, OQ ಇದು ವೃತ್ತದ ತ್ರಿಜ್ಯ OP ಗಿಂತ ಉದ್ದವಾಗಿದೆ ಅಂದರೆ, $OQ > OP$

P ಬಿಂದುವನ್ನು ಹೊರತುಪಡಿಸಿ, XY ಮೇಲಿನ ಎಲ್ಲಾ ಬಿಂದುಗಳಿಗೂ ಇದು ಅನ್ವಯಿಸುವುದರಿಂದ O ಬಿಂದುವಿನಿಂದ XY ನ ಮೇಲೆನ ಇತರೆ ಬಿಂದುಗಳಿಗಿರುವ ದೂರಕ್ಕಿಂತ OP ಯು ಕನಿಷ್ಠ ಉದ್ದವನ್ನು ಹೊಂದಿದೆ. ಆದ್ದರಿಂದ OP ಯು XY ಗೆ ಲಂಬವಾಗಿದೆ (ಪ್ರಮೇಯ A1.2 ರಲ್ಲಿತೋರಿಸಿರುವಂತೆ).

ಗಮನಿಸಿ:

1. ಮೇಲಿನ ಪ್ರಮೇಯದಿಂದ, ವೃತ್ತದ ಮೇಲಿನ ಯಾವುದೇ ಒಂದು ಬಿಂದುವಿನಲ್ಲಿ ಒಂದೇ ಒಂದು ಸ್ಪರ್ಶಕವನ್ನು ಎಳೆಯಬಹುದೆಂದು ತೀರ್ಮಾನಿಸಬಹುದು.
2. ಸ್ಪರ್ಶ ಬಿಂದುವಿನಲ್ಲಿ ತ್ರಿಜ್ಯವನ್ನು ಹೊಂದಿರುವ ರೇಖೆಯನ್ನು ಕೆಲವು ಸಲ ಒಂದು ಬಿಂದುವಿನ ವೃತ್ತದ 'ಲಂಬಕ' ಎಂದು ಕರೆಯುತ್ತೇವೆ.

ಅಭ್ಯಾಸ 10.1

1) ವೃತ್ತವು ಹೊಂದಿರಬಹುದಾದ ಸ್ಪರ್ಶಕಗಳ ಸಂಖ್ಯೆ ಎಷ್ಟು?

ಉತ್ತರ:– ವೃತ್ತ ಪರಿಧಿಯ ಮೇಲಿನ ಬಿಂದುವಿನಲ್ಲಿ ಒಂದೇ ಸ್ಪರ್ಶಕ ರಚಿಸಲು ಸಾಧ್ಯವಿದೆ

2. ಬಿಟ್ಟ ಸ್ಥಳ ತುಂಬಿರಿ:

i) ವೃತ್ತವನ್ನು ಸ್ಪರ್ಶಕವೊಂದು ಛೇದಿಸುವ ಬಿಂದುಗಳ ಸಂಖ್ಯೆ ______

ಉತ್ತರ;– ಒಂದು

ii) ವೃತ್ತವನ್ನು ಎರಡು ಬಿಂದುಗಳಲ್ಲಿ ಛೇದಿಸುವ ರೇಖೆಯೇ ______

ಉತ್ತರ:– ವೃತ್ತಸ್ಪರ್ಶಕ

iii) ಒಂದು ವೃತ್ತವು ಹೊಂದಿರಬಹುದಾದ ಸಮಾಂತರ ಸ್ಪರ್ಶಕಗಳ ಗರಿಷ್ಠ ಸಂಖ್ಯೆ ______

ಉತ್ತರ:– ಎರಡು

iv) ಒಂದು ವೃತ್ತ ಸ್ಪರ್ಶಕ ಮತ್ತು ಒಂದು ವೃತ್ತ ಹೊಂದಿರುವ ಸಾಮಾನ್ಯ ಬಿಂದುವೇ ______

ಉತ್ತರ:– ಸ್ಪರ್ಶ ಬಿಂದು


3) 5 cm ತ್ರಿಜ್ಯವಿರುವ ವೃತ್ತಕ್ಕೆ P ಬಿಂದುವಿನಲ್ಲಿ ಎಳೆದ ಸ್ಪರ್ಶಕ PQ. ಇದು ವೃತ್ತಕೇಂದ್ರ O ದಿಂದ ಎಳೆದ ರೇಖೆಯನ್ನು Q ಬಿಂದುವಿನಲ್ಲಿ ಸಂಧಿಸುತ್ತದೆ. OQ = 12 cm ಆದರೆ PQ ಉದ್ದವು..........

a) 12 cm b) 13 cm
c) 8.5 cm d) $\sqrt{119}$ cm

ಉತ್ತರ:–(ಡಿ) $\sqrt{119}$ cm

ವಿವರಣೆ:– OPಯು ಕೇಂದ್ರದಿಂದ ಸ್ಪರ್ಶಬಿಂದುವಿಗೆ ಎಳೆದ ತ್ರಿಜ್ಯವಾಗಿದೆ.

$OP \perp PQ$ ಇದೆ.




ಈಗ ΔOPQದಲ್ಲಿ $\angle P = 90^0$

ಪೈಥಾಗೋರಸ್ ಪ್ರಮೇಯದ ಪ್ರಕಾರ

$$OQ^2 = OP^2 + PQ^2$$
$$(12)^2 = 5^2 + PQ^2$$
$$PQ^2 = 144 - 25 \Rightarrow PQ^2 = 119$$
$$PQ = \sqrt{119} \text{ cm}$$

4) ವೃತ್ತವನ್ನು ರಚಿಸಿ. ಆ ವೃತ್ತಕ್ಕೆ ಸಮಾಂತರವಾಗಿರುವಂತೆ ವೃತ್ತಕ್ಕೆ ಸ್ಪರ್ಶಕ ಮತ್ತು ಛೇಧಕವನ್ನು ಎಳೆಯಿರಿ..

ಉತ್ತರ:–



* AB ಸ್ಪರ್ಶಕಕ್ಕೆ ಸಮಾಂತರವಾಗಿದೆ XY
* XY ವೃತ್ತಕ್ಕೆ ಛೇದಕ ರೇಖೆಯಾಗಿದೆ

(ಮುಂದುವರಿಯುವುದು.....)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC: PHYSICS

CURRENT ELECTRICITY

29. What do you understand by a potential divider circuit? Explain it with the help of an example.

Ans:- (...........Contd)

By using a rheostat, e.m.f. E of a battery can be reduced to a value V by sliding the contact over the body of the resistor.

Let R be the total resistance of the rheostat and X be the resistance of a portion of the rheostat then derived voltage.

$$V = \frac{E}{R}X$$

30. Two cells of e.m.f. E_1 and E_2 are connected together in two ways shown here



The balance points in a given potentiometer experiment for these two combinations of cells are found to be at 35.1 cm and 70.2 cm respectively. Calculate the ratio of the e.m.f.s of the two cells.

Ans:- $\frac{E_1 + E_2}{|E_2 - E_1|} = \frac{l_1}{l_2}$

$$= \frac{35.1}{70.2} = \frac{1}{2}$$

$$\Rightarrow 2E_1 + 2E_2 = |E_2 - E_1|$$
$$\Rightarrow |3E_1| = |E_2|$$
$$\Rightarrow \frac{|E_1|}{|E_2|} = \frac{1}{3}$$

****

MOVING CHARGES AND MAGNETISM

1. What is meant by Magnetic effect of an electric current?

Ans:- When current flows through a conductor a magnetic field is set up in the region surrounding the conductor. This effect is known as the magnetic effect of an electric current.

2. Define Magnetic flux and what is flux density?

Ans:- The number of magnetic field lines passing through a surface in a direction normal to the surface is called the magnetic flux through the surface.

Magnetic flux per unit area of a surface surrounding a given point is called the magnetic flux density B at that point.

3. State Maxwell's right hand cork screw rule.

Ans:- Maxwell's right hand cork screw rule -



If a right-handed cork screw is turned such that its tip advances in the direction of the current in the conductor, then the direction in which the head of the screw is turned gives the direction of the magnetic field around the conductor.

4. State right hand clasp rule.

Ans:- Right hand clasp rule -



If a straight conductor carrying current is held in the right hand with thumb pointing in the direction of flow of current, then the direction in which the other fingers encircle the conductor, gives the direction of the magnetic field

5. Why are four readings taken in any experiment with a TG?

Ans:- Four readings are taken in any experiment with a TG because –

(1) The point of pivot of the magnetic needle in the compass box may not coincide with the centre of the circular scale. To compensate for this error, both ends of the pointer are read and readings θ_1 and θ_2 are taken.

(2) The plane of the circular coil may not lie exactly in the magnetic meridian. To compensate for this error, current through the coil of the TG is reversed using a commutator and readings θ_3 and θ_4 are taken.

7. Why do we set the coil of tangent galvanometer in the magnetic meridian? How is accuracy of the adjustment tested?

Ans:- A tangent galvanometer is based on the tangent law. The magnet in the magnetometer box has to be placed in two uniform mutually perpendicular magnetic fields. So that the magnetic fields produced on passing current through the coil of the galvanometer is perpendicular to the horizontal component of the earth's magnetic field, the coil is set in magnetic meridian.

The accuracy in setting of the galvanometer can be tested by rotating the coil through exactly 900 and then passing current through it. In case, the setting was accurate, the galvanometer will not show any deflection on passing the current.

8. Write a note on moving coil galvanometer.

Ans:- Moving coil galvanometer - is a device used to detect or measure small electric current flowing in the electric current.

Principle – It is based on the fact that when a current carrying loop or coil is placed in the uniform magnetic field, it experiences a torque.

(Contd........)

ಮಂಗಳವಾರ, ಅಕ್ಟೋಬರ್ 29, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 300 | ಪುಟ 24

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹೊಂಬೆಳಕು

ಮೊರಾದಾಬಾದ್‌ನಲ್ಲಿ ದೀಪಾವಳಿ ಹಬ್ಬದ ಅಂಗವಾಗಿ ವಿದ್ಯಾರ್ಥಿಗಳು ದೀಪ ಬೆಳಗುತ್ತಾ ಫೋಟೊಗೆ ಪೋಸ್ ನೀಡಿದರು



ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವ • 3 ತಿಂಗಳಲ್ಲಿ ವರದಿ ಸಲ್ಲಿಕೆ

ಒಳಮೀಸಲು: ಮತ್ತೆ ಆಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿ ಮಾಡುವ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಆಯೋಗ ರಚಿಸಲು ಸರ್ಕಾರ ತೀರ್ಮಾನಿಸಿದೆ.

ಒಳಮೀಸಲಾತಿ ಅನುಷ್ಠಾನಗೊಳಿಸುವ ಬಗ್ಗೆ ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಯಿತು.

ಬಳಿಕ, ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ, ವರದಿ ನೀಡಲು ಆಯೋಗಕ್ಕೆ ಮೂರು ತಿಂಗಳು ಅವಕಾಶ ನೀಡಲಾಗಿದೆ. ವರದಿಯ ಶಿಫಾರಸುಗಳನ್ನು ಸರ್ಕಾರ ಜಾರಿ ಮಾಡಲಿದೆ ಎಂದು ವಿವರಿಸಿದರು.

ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಮಾತನಾಡಿ, ಒಳ ಮೀಸಲಾತಿ ಪ್ರಮಾಣ ನಿರ್ಧರಿಸಲು ಸಮುದಾಯಗಳ ಜನಸಂಖ್ಯೆಯ ಪರಿಶೀಲನಾರ್ಹ ದತ್ತಾಂಶ ಎಲ್ಲಿಂದ ಪಡೆಯಬೇಕು ಮತ್ತು ಆದಿ ಕರ್ನಾಟಕ, ಆದಿ ದ್ರಾವಿಡ ಹೆಸರಿನ ಗೊಂದಲಗಳನ್ನು ಬಗೆಹರಿಸುವ ವಿಚಾರವನ್ನು ಆಯೋಗಕ್ಕೆ ನಿಗದಿಪಡಿಸುವ ಷರತ್ತುಗಳು ಮತ್ತು ನಿಯಮಗಳಲ್ಲಿಯೇ ನಮೂದಿಸಲಾಗು-ವುದು ಎಂದು ಹೇಳಿದರು.

'ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು 2022ರಲ್ಲಿ ಬಿಜೆಪಿ ಸರ್ಕಾರವೇ ತಿರಸ್ಕರಿಸಿತ್ತು. ನಮ್ಮ ಸರ್ಕಾರವೇ ಹಿಂದೆ ನಡೆಸಿದ್ದ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ಇನ್ನೂ ಅಂಗೀಕರಿಸಿಲ್ಲ. ಈ ಸಮೀಕ್ಷಾ ವರದಿಯಲ್ಲಿರುವ ವಿವಿಧ ಜಾತಿಗಳ ಜನಸಂಖ್ಯೆಯ ದತ್ತಾಂಶ ಗೊತ್ತಾಗಿಲ್ಲ. ಹೀಗಾಗಿ ದತ್ತಾಂಶವನ್ನು ಎಲ್ಲಿಂದ ಪಡೆಯಬೇಕು ಎನ್ನುವ ವಿಚಾರವನ್ನು ಆಯೋಗಕ್ಕೆ ಬಿಡುತ್ತೇವೆ' ಎಂದು ಅವರು ವಿವರಿಸಿದರು.

8ನೇ ಪುಟ ನೋಡಿ

ವರದಿ ಸಲ್ಲಿಕೆವರೆಗೆ ನೇಮಕಾತಿ ಬಂದ್

'ಇವತ್ತಿನಿಂದ ವರದಿ ಸಲ್ಲಿಕೆ ಆಗುವವರೆಗೆ ಸರ್ಕಾರ ಯಾವುದೇ ಹೊಸ ನೇಮಕಾತಿ ಮಾಡುವುದಿಲ್ಲ. ಅಧಿಸೂಚನೆಗಳನ್ನೂ ಹೊರಡಿಸುವುದಿಲ್ಲ. ಈಗಾಗಲೇ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿ ಇದ್ದರೆ ಮುಂದುವರಿಯಲಿದೆ' ಎಂದು ಸಚಿವ ಎಚ್‌.ಕೆ. ಪಾಟೀಲ ತಿಳಿಸಿದರು.

'ಹೊಸ ನೇಮಕಾತಿಗಳು ಏನೇ ಇದ್ದರೂ ವರದಿ ಸಲ್ಲಿಕೆ ಆದ ಬಳಿಕವೇ ಕೈಗೆತ್ತಿಕೊಳ್ಳಲಾಗುವುದು' ಎಂದು ಸ್ಪಷ್ಟಪಡಿಸಿದರು.

ಸಂಪುಟದ ತೀರ್ಮಾನಗಳು

- ರಾಯಚೂರು ವಿಶ್ವವಿದ್ಯಾಲಯಕ್ಕೆ 'ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ' ಎಂದು ಮರುನಾಮಕರಣ
- ಮಹಾನಗರ ಪಾಲಿಕೆಯಾಗಿ ಹಾಸನ ನಗರ ಸಭೆ ಮೇಲ್ದರ್ಜೆಗೆ
- ವಿಶ್ವೇಶ್ವರಯ್ಯ ತಾಂತ್ರಿಕ ವಿದ್ಯಾಲಯದ ಆವರಣದಲ್ಲಿ ಜಿಟಿಟಿಸಿ ಬಹುಕೌಶಲ ಅಭಿವೃದ್ಧಿ ಕೇಂದ್ರ ಸ್ಥಾಪನೆಗೆ ₹35 ಕೋಟಿ
- ಬೆಂಗಳೂರು–ಬೀದರ್–ಬೆಂಗಳೂರು ಮಾರ್ಗವಾಗಿ ವಿಮಾನ ಕಾರ್ಯಾಚರಣೆಗೆ ಒಪ್ಪಿಗೆ

ಆಯೋಗ ರಚನೆ ತೀರ್ಮಾನ ಕುಂಟು ನೆಪವಲ್ಲ, ಕಾಲಹರಣ ಮಾಡುವ ಮತ್ತು ಒಳ ಮೀಸಲಾತಿ ಅನುಷ್ಠಾನವನ್ನು ಮುಂದಕ್ಕೆ ಹಾಕುವ ತಂತ್ರವೂ ಅಲ್ಲ


ಡಾ.ಎಚ್‌.ಸಿ.ಮಹದೇವಪ್ಪ ಸಮಾಜಕಲ್ಯಾಣ ಸಚಿವರು

ಎಡ– ಬಲ ನಾವು ಅಣ್ಣ–ತಮ್ಮಂದಿರಂತೆ ಒಟ್ಟಿಗೆ ಇದ್ದೇವೆ. ಮೂರು ತಿಂಗಳಲ್ಲಿ ಪರಿಹಾರ ಸಿಗುತ್ತದೆ. ಎಲ್ಲರೂ ಸರ್ಕಾರದ ಜತೆ ಗಟ್ಟಿಯಾಗಿ ನಿಲ್ಲಬೇಕು

ಕೆ.ಎಚ್‌.ಮುನಿಯಪ್ಪ, ಆಹಾರ ಸಚಿವ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಭೂಮಿ ಕಳೆದುಕೊಂಡವರ ಬದಲು ಅನ್ಯರಿಗೆ ಹಣ

• ಚಂದ್ರಕಾಂತ ಮಸಾನಿ

ರಾಯಚೂರು: ರಾಷ್ಟ್ರೀಯ ಹೆದ್ದಾರಿ 748 ಎ ಬೆಳಗಾವಿ–ರಾಯಚೂರು ಹೆದ್ದಾರಿ ವಿಸ್ತರಣೆಯಲ್ಲಿ ಭೂಮಿ ಕಳೆದುಕೊಂಡವರ ಬದಲಿಗೆ ವಿಶೇಷ ಭೂಸ್ವಾಧೀನ ಅಧಿಕಾರಿಗಳು ಅನ್ಯರ ಖಾತೆಗೆ ಹಣ ವರ್ಗಾವಣೆ ಮಾಡಿದ್ದು, ಇದೀಗ ಅದನ್ನು ವಸೂಲಿ ಮಾಡಲು ಪರದಾಡುತ್ತಿದ್ದಾರೆ.

ವಿಶೇಷ ಭೂಸ್ವಾಧೀನ ಅಧಿಕಾರಿ ನೋಟಿಸ್ ನೀಡಿದರೂ ಸರ್ಕಾರದ ಹಣ ಮರಳಿಸದ ಕಾರಣ ಜಂಟಿ ಖಾತೆದಾರರಾದ ಸಿದ್ಧನಗೌಡ, ರುದ್ರಗೌಡ, ಶಂಕರಗೌಡ ಸೇರಿ ಇದಕ್ಕೆ ಕುಮ್ಮಕ್ಕು ನೀಡಿದ ಹಿರೇಹಣಗಿ ಪ್ರಾಥಮಿಕ ಶಾಲಾ ಶಿಕ್ಷಕ ಅಮರೇಶ, ವಿನಯ ಕುಮಾರ ವಿರುದ್ಧ ನೇತಾಜಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿರವಾರ ತಾಲ್ಲೂಕಿನ ಪಾತಾಪುರ ಗ್ರಾಮದ ಸರ್ವೆ ನಂ 35/2ರಲ್ಲಿ ವಿತರಿಸಿದ ಭೂ ಪರಿಹಾರ ಹಣವನ್ನು ಪಿ. ಸಿದ್ದನಗೌಡ, ರುದ್ರಗೌಡ, ಶಂಕರಗೌಡ ಅವರ ಒಪ್ಪಂದದಂತೆ ಮೂವರ ಜಂಟಿ ಖಾತೆಗೆ 2023ರ ಅ. 9ರಂದು ₹1,19,64,711 ಜಮಾ ಮಾಡಲಾಗಿದೆ.

8ನೇ ಪುಟ ನೋಡಿ

ಭೂಮಿ ಕಳೆದುಕೊಂಡವರ ಪರಿಹಾರ ಹಣ ಬೇರೆಯವರ ಖಾತೆಗೆ ಜಮಾ ಆಗಿದ್ದು, ಪ್ರಕರಣವೂ ದಾಖಲಾಗಿದೆ. ಹಣ ಮರಳಿ ಪಡೆಯುವ ಪ್ರಕ್ರಿಯೆ ಮುಂದುವರಿದಿದೆ

ಶಿವಪ್ಪ ಭಜಂತ್ರಿ, ಹೆಚ್ಚುವರಿ ಜಿಲ್ಲಾಧಿಕಾರಿ

ಮಹಿಳೆಯರ ಸ್ವಾವಲಂಬಿ ಜೀವನಕ್ಕೆ 'ಅಕ್ಕ ಕೆಫೆ' ಬಲ

• ಖಲೀಲಅಹ್ಮದ ಶೇಖ

ಬೆಂಗಳೂರು: ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳ ಸದಸ್ಯೆಯರನ್ನು ಹೋಟೆಲ್ ಉದ್ದಿಮೆಯಲ್ಲಿ ತೊಡಗಿಸಿ, ಅವರ ಸ್ವಾವಲಂಬಿ ಜೀವನಕ್ಕೆ ನೆರವಾಗುವ ಉದ್ದೇಶದಿಂದ ರಾಷ್ಟ್ರೀಯ ಜೀವನೋಪಾಯ ಮಿಷನ್ (ಎನ್‌ಎಲ್‌ಎಂ) ಆರಂಭಿಸಿದ 'ಅಕ್ಕ ಕೆಫೆ' ಯೋಜನೆ ಆರಂಭಿಕ ಯಶಸ್ಸು ಕಂಡಿದೆ. ಮತ್ತಷ್ಟು ಕೆಫೆಗಳನ್ನು ಆರಂಭಿಸುವ ಮೂಲಕ ಬೆಂಗಳೂರಿನ ವನಿತೆಯರಿಗೆ ಶಕ್ತಿ ತುಂಬಲು ಎನ್‌ಎಲ್‌ಎಂ ಸಜ್ಜಾಗುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಘೋಷಿಸಿದ್ದ ಈ ಯೋಜನೆಯನ್ನು ಕರ್ನಾಟಕ ಕೌಶಲ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ಎನ್‌ಎಲ್‌ಎಂ ಜೊತೆಗೂಡಿ ಅನುಷ್ಠಾನಕ್ಕೆ ತಂದಿದೆ. 'ಅಕ್ಕ ಕೆಫೆ'ಗಳು ದುಡಿಯುವ ಮಹಿಳೆಯರ ಕೈಗಳಿಗೆ ಕೆಲಸ ನೀಡುವುದರ ಜೊತೆಯಲ್ಲೇ ಕಡಿಮೆ ದರದಲ್ಲಿ ಶುಚಿ, ರುಚಿಯಾದ ಊಟ ಉಪಾಹಾರ ಒದಗಿಸುತ್ತಿವೆ. ಬೆಂಗಳೂರಿನಂತಹ ಮಹಾನಗರಗಳಲ್ಲೂ ಸ್ತ್ರೀ ಶಕ್ತಿ ಗುಂಪುಗಳ ಮೂಲಕ ಮಹಿಳೆಯರಿಗೆ ಉದ್ಯೋಗದ ಅವಕಾಶಗಳನ್ನು ಸೃಜಿಸುವ ಕನಸನ್ನು ಈ ಯೋಜನೆ ಸಾಕಾರಗೊಳಿಸಿದೆ.

ಗಾಂಧಿನಗರದ ಪಂಚಾಯತ ರಾಜ್ ಆಯುಕ್ತಾಲಯದ ಆವಣರದಲ್ಲಿ 2024ರ ಮಾರ್ಚ್ 8ರಂದು ವಿಶ್ವ ಮಹಿಳಾ ದಿನಾಚರಣೆಯ ದಿನ ಮೊದಲ 'ಅಕ್ಕ ಕೆಫೆ'ಗೆ ಚಾಲನೆ ನೀಡಲಾಗಿತ್ತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಮತ್ತೊಂದು ಅಕ್ಕ ಕೆಫೆ ಹಾಗೂ ಬೇಕ್ಸ್‌ಗೆ (ಬೇಕರಿ) ಚಾಲನೆ ನೀಡಲಾಗಿದೆ. ಎರಡೂ ಕಡೆ ನಿರೀಕ್ಷೆಗೂ ಮೀರಿದ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಯಶಸ್ಸಿನ ಬೆನ್ನಲ್ಲೇ ಬಿಬಿಎಂಪಿಯ ಎಂಟು ವಲಯಗಳಲ್ಲೂ 'ಅಕ್ಕ ಕೆಫೆ'ಗಳನ್ನು ಪ್ರಾರಂಭಿಸಲು ರಾಷ್ಟ್ರೀಯ ಜೀವನೋಪಾಯ ಮಿಷನ್ ಸಿದ್ಧತೆ ನಡೆಸಿದೆ.

ಕರ್ನಾಟಕ ಕೌಶಲ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ರಾಷ್ಟ್ರೀಯ ಜೀವನೋಪಾಯ ಮಿಷನ್ ಅಡಿಯಲ್ಲಿ ರಾಜ್ಯದಾದ್ಯಂತ 50ಕ್ಕೂ ಹೆಚ್ಚು 'ಅಕ್ಕ ಕೆಫೆ'ಗಳನ್ನು ಪ್ರಾರಂಭಿಸುವ ಯೋಜನೆ ರೂಪಿಸಿದೆ. ಇಲ್ಲಿ ಬಡವರು, ಕೂಲಿಕಾರ್ಮಿಕರು, ಉದ್ಯೋಗ ಅರಸಿ ದೂರದಿಂದ ಬರುವವರು, ವಿದ್ಯಾರ್ಥಿಗಳು ಸೇರಿದಂತೆ ಶ್ರಮಿಕ ವರ್ಗ ಸೇರಿದಂತೆ ಎಲ್ಲರಿಗೂ ಕಡಿಮೆ ದರದಲ್ಲಿ ಉತ್ತಮ ತಿಂಡಿ ಮತ್ತು ಊಟ ನೀಡಲಾಗುತ್ತಿದೆ.

ಈ ಕೆಫೆಗಳನ್ನು ಮಹಿಳೆಯರೇ ಸಂಪೂರ್ಣವಾಗಿ ನಿರ್ವಹಿಸುವುದು ವಿಶೇಷ. ಅಡುಗೆ ಸಿದ್ಧಪಡಿಸುವುದು, ಗ್ರಾಹಕರಿಗೆ ತಲುಪಿಸುವುದು, ಹಣಕಾಸು ವಹಿವಾಟು ಎಲ್ಲವನ್ನೂ ಮಹಿಳೆಯರೇ ಮಾಡುತ್ತಾರೆ. ಅದರಲ್ಲೂ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳಲ್ಲಿ ಸಕ್ರಿಯವಾಗಿರುವ ಬಡ ಹಾಗೂ ಮಧ್ಯಮ ವರ್ಗದ ಮಹಿಳೆಯರೇ ಇಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ.


'ಅಕ್ಕ ಕೆಫೆ ಯೋಜನೆಯಡಿ ಮಹಿಳೆಯರಿಗೆ ತಮ್ಮದೇ ಆಹಾರೋದ್ಯಮ ಸ್ಥಾಪಿಸಲು ಬೇಕಾದ ತರಬೇತಿಯನ್ನು ನೀಡಲಾಗುತ್ತದೆ. ಪ್ರಮುಖ ಪ್ರವಾಸಿ ತಾಣಗಳು, ಜನನಿಬಿಡ ಸ್ಥಳಗಳು ಹಾಗೂ ಸರ್ಕಾರಿ ಕಚೇರಿಗಳ ಆವರಣಗಳಲ್ಲಿ ಈ ಕೆಫೆಗಳು ತೆರೆಯಲಾಗುತ್ತದೆ. ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶದಿಂದ ಈ ಯೋಜನೆ ಜಾರಿಗೊಳಿಸಲಾಗಿದೆ. 'ಅಕ್ಕ' ಬ್ರ್ಯಾಂಡ್‌ನ ಅಡಿಯಲ್ಲಿ ಆಹಾರೋದ್ಯಮ ಸಂಸ್ಥೆಗಳನ್ನು ಕಟ್ಟಬಹುದು' ಎಂದು ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

'ಅಕ್ಕ ಕೆಫೆ'ಗೆ ಪ್ರೇರಣೆ: ಮಹಿಳಾ ಸ್ವಸಹಾಯ ಸಂಘಗಳು ಆರು ವರ್ಷಗಳಿಂದ ದೀನ್ ದಯಾಳ್ ಅಂತ್ಯೋದಯ ಯೋಜನೆ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆ ಅಡಿಯಲ್ಲಿ ಮಹಿಳಾ ಉದ್ಯಮಿಗಳು ಸರ್ಕಾರಿ ಹಾಗೂ ಇತರೆ ಕಾರ್ಯಕ್ರಮಗಳಿಗೆ ಮತ್ತು ರುಚಿ ರುಚಿಯಾದ ಆಹಾರ ಮತ್ತು ಪಾನೀಯ ಪೂರೈಸುತ್ತಿದ್ದವು. ಇದನ್ನು ಗಮನಿಸಿದ ರಾಜ್ಯ ಸರ್ಕಾರ ಮಹಿಳೆಯರೇ ನಡೆಸುವ ಕೆಫೆಗಳನ್ನು ತೆರೆಯಲು ಈ ಯೋಜನೆ ರೂಪಿಸಿದೆ.

ನಂದಗೋಕುಲ ಮಹಿಳೆಯರ ಸ್ವಸಹಾಯ ಗುಂಪಿಗೆ ಸೇರಿದ 12 ಮಹಿಳೆಯರ ತಂಡವು ಈ ಕೆಫೆಯನ್ನು ನಡೆಸುತ್ತಿದೆ. ಅಕ್ಕ ಕೆಫೆ ಬೆಳಿಗ್ಗೆ 9 ರಿಂದ ರಾತ್ರಿ 9 ಗಂಟೆಯವರೆಗೆ ವಾರದ ಎಲ್ಲ ದಿನಗಳಲ್ಲೂ ಕಾರ್ಯನಿರ್ವಹಿಸುತ್ತದೆ. ಇಲ್ಲಿ ಆರೋಗ್ಯಕರ, ಸ್ವಾದಿಷ್ಟಕರವಾದ ಆಹಾರ ಲಭ್ಯವಿದ್ದು, ಶುಚಿ-ರುಚಿಯ ಜೊತೆಗೆ ಕೈಗೆಟಕುವ ದರದಲ್ಲಿ ಗ್ರಾಹಕರಿಗೆ ಆಹಾರವನ್ನು ಪೂರೈಸಲಾಗುತ್ತದೆ ಎಂದು ಗಾಂಧಿನಗರದಲ್ಲಿರುವ ಅಕ್ಕ ಕೆಫೆಯ ಪುಷ್ಪಾ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಸರ್ಕಾರ ಅಕ್ಕ ಕೆಫೆಯ ಬ್ರ್ಯಾಂಡಿಂಗ್ ಹಾಗೂ ಕಟ್ಟಡ ನಿರ್ಮಿಸಿ ಕೊಡುತ್ತದೆ. ಸ್ವಸಹಾಯ ಮಹಿಳಾ ಸಂಘದಿಂದ ಸಾಲದ ರೂಪದಲ್ಲಿ ಹಣ ಪಡೆದುಕೊಂಡು ಈ ಉದ್ಯಮಕ್ಕೆ ಬೇಕಾಗುವ ಯಂತ್ರೋಪಕರಣ ಖರೀದಿ ಹಾಗೂ ಬಂಡವಾಳ ಹೂಡಿಕೆ ಮಾಡಿದ್ದೇವೆ. ಪ್ರತಿದಿನ ಅಕ್ಕ ಕೆಫೆಯಿಂದ ಬರುವ ಆದಾಯದಲ್ಲಿ ಸಾಲ ತೀರಿಸುವ ಜೊತೆಗೆ ಇಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಸಂಬಳವನ್ನು ನೀಡುತ್ತಿದ್ದೇವೆ' ಎಂದು ಅವರು ವಿವರಿಸಿದರು.

'ಮತ್ತಷ್ಟು ಕೆಫೆ ಆರಂಭಕ್ಕೆ ಸಿದ್ಧತೆ'



'ಈಗಾಗಲೇ ಆರಂಭವಾಗಿರುವ ಎರಡು ಅಕ್ಕ ಕೆಫೆಗಳಲ್ಲಿ ಉತ್ತಮ ವಹಿವಾಟು ನಡೆಯುತ್ತಿದ್ದು, ಜನರ ಸ್ಪಂದನೆ ಚೆನ್ನಾಗಿದೆ. ಬೆಂಗಳೂರಿನ ಹಲವೆಡೆ ಇನ್ನಷ್ಟು ಕೆಫೆಗಳನ್ನು ಆರಂಭಿಸಲು ಸಿದ್ಧತೆ ನಡೆದಿದೆ' ಎಂದು ಕೌಶಲಾಭಿವೃದ್ಧಿ ಮತ್ತು ಜೀವನೋಪಾಯ ಖಾತೆ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಮಹಿಳಾ ಸಬಲೀಕರಣದ ದೃಷ್ಟಿಯಿಂದ ಇದೊಂದು ಮಹತ್ವದ ಯೋಜನೆ. ಬಜೆಟ್ ಘೋಷಣೆಯಂತೆ ರಾಜ್ಯದಾದ್ಯಂತ ಇನ್ನೂ 48 ಅಕ್ಕ ಕೆಫೆಗಳನ್ನು ಆರಂಭಿಸುತ್ತೇವೆ' ಎಂದರು.



ಗಾಂಧಿನಗರದ ಪಂಚಾಯತರಾಜ್ ಆಯುಕ್ತಾಲಯದ ಆವರಣದಲ್ಲಿರುವ ಕೆಫೆ–ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್



ಅಕ್ಕ ಕೆಫೆಯಲ್ಲಿ ವಿವಿಧ ಖಾದ್ಯಗಳ ತಯಾರಿಯಲ್ಲಿ ತೊಡಗಿದ್ದ ಅಕ್ಕಂದಿರು

₹7.5 ಕೋಟಿ ಅಕ್ಕ ಕೆಫೆಗೆ ಒಟ್ಟು ಬಜೆಟ್‌ನಲ್ಲಿ ಮೀಸಲಾಗಿರುವ ಅನುದಾನ

₹15 ಲಕ್ಷ ಒಂದು ಅಕ್ಕ ಕೆಫೆಗೆ ಗರಿಷ್ಠ ಅನುದಾನ

50 ರಾಜ್ಯದಾದ್ಯಂತ ಅಕ್ಕ ಕೆಫೆಗಳನ್ನು ಪ್ರಾರಂಭಿಸುವ ಸಂಖ್ಯೆ

'ಸರ್ಕಾರಿ ಕಚೇರಿಗಳಿಂದ ಬೇಡಿಕೆ'

'ಸರ್ಕಾರಿ ಕಚೇರಿಗಳೆಲ್ಲ ಅಕ್ಕ ಕೆಫೆಯಿಂದ ಊಟ ಮತ್ತು ತಿಂಡಿ ಖರೀದಿಸಬೇಕು ಎಂದು ರಾಜ್ಯ ಸರ್ಕಾರ ಆದೇಶಿಸಿದೆ. ವಿಧಾನಸೌಧ, ವಿಕಾಸಸೌಧ, ಎಂ.ಎಸ್. ಬಿಲ್ಡಿಂಗ್ ಸೇರಿದಂತೆ ಸರ್ಕಾರಿ ಕಚೇರಿಗಳಿಂದ ತಿಂಡಿ ಹಾಗೂ ಊಟಕ್ಕೆ ಬೇಡಿಕೆ ಬರುತ್ತಿದೆ. ಇದರಿಂದ, ತಿಂಗಳಿಗೆ ₹ 80 ಸಾವಿರದಿಂದ ₹ 1ಲಕ್ಷದವರೆಗೂ ವಹಿವಾಟು ನಡೆಯುತ್ತಿದೆ. ಇದನ್ನು ಹೊರತುಪಡಿಸಿ ಪ್ರತಿದಿನ ₹ 8 ಸಾವಿರದಿಂದ 10 ಸಾವಿರವರೆಗೂ ವಹಿವಾಟು ನಡೆಯುತ್ತಿದೆ. ಇಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರೂ ಮಾಲೀಕರು' ಎಂದು ಪುಷ್ಪಾ ಮಾಹಿತಿ ಹಂಚಿಕೊಂಡರು.

ಜನ ಏನಂತಾರೆ?



ಮಹಿಳೆಯರು ಸೇರಿ ಒಂದು ಉದ್ಯಮ ಪ್ರಾರಂಭಿಸಲು ಸರ್ಕಾರ ಸಹಾಯ ಮಾಡಿರುವುದು ಶ್ಲಾಘನೀಯ. ಇಲ್ಲಿ ಕಾರ್ಯನಿರ್ವಹಿಸುವ ಎಲ್ಲ ಮಹಿಳೆಯರಲ್ಲಿ ಒಗ್ಗಟ್ಟಿದೆ. ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಅಕ್ಕ ಕೆಫೆಗಳು ಸಹಕಾರಿ ಆಗಲಿವೆ.

ಜ್ಯೋತಿ, ಗ್ರಾಹಕಿ



ಅಕ್ಕ ಕೆಫೆಗಳಲ್ಲಿ ಶುಚಿ–ರುಚಿಯಾದ ಆಹಾರ ತಯಾರಿಸಲಾಗುತ್ತಿದೆ. ಇಲ್ಲಿನ ಆಹಾರ ಸೇವಿಸಿದರೆ ಮನೆಯ ಊಟ ಸವಿದಂತೆ ಭಾಸವಾಗುತ್ತದೆ. ನಾನು ಪ್ರತಿನಿತ್ಯ ಇಲ್ಲಿಗೆ ಬಂದು ಮಧ್ಯಾಹ್ನದ ಊಟ ತೆಗೆದುಕೊಂಡು ಹೋಗುತ್ತೇನೆ.

ಎಚ್.ಎಸ್. ಚಂದ್ರಶೇಖರ್, ವಕೀಲ

'ಮಹಿಳೆಯರಿಗೆ ತರಬೇತಿ'



'ಅಕ್ಕ ಕೆಫೆಯಲ್ಲಿ ಕಾರ್ಯನಿರ್ವಹಿಸುವ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರಿಗೆ ಇಲಾಖೆ ವತಿಯಿಂದ ಆಹಾರ ತಯಾರಿಕೆ, ಸ್ವಚ್ಛತೆ, ಗ್ರಾಹಕರೊಂದಿಗೆ ಸಂವಾದ ನಡೆಸುವ ಕಲೆ, ಘನತ್ಯಾಜ್ಯ ನಿರ್ವಹಣೆ ಕುರಿತು ತರಬೇತಿ ನೀಡಲಾಗುತ್ತದೆ ಎಂದು ರಾಷ್ಟ್ರೀಯ ಜೀವನೋಪಾಯ ಮಿಷನ್‌ನ ನಿರ್ದೇಶಕಿ ಪಿ.ಐ. ಶ್ರೀವಿದ್ಯಾ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಅಕ್ಕ ಕೆಫೆಗಳಲ್ಲಿ ಕರ್ನಾಟಕದ ನೆಲಮೂಲದ ಆಹಾರವನ್ನು ಶುಚಿ–ರಚಿಯಾಗಿ ತಯಾರಿಸಿ ನೀಡಲಾಗುತ್ತದೆ. ಇದರಿಂದ, ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಸಹಕಾರಿ ಆಗಲಿದೆ' ಎಂದರು.

ನಗರದಲ್ಲಿ ಇಂದು

ನೀರು ಮತ್ತು ನೈರ್ಮಲ್ಯ, ಸುಸ್ಥಿರತೆ ಕುರಿತು ಶೃಂಗಸಭೆ: ಅತಿಥಿಗಳು: ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಶರತ್ ಬಚ್ಚೇಗೌಡ, ಆಯೋಜನೆ: ಮಾಹಿತಿ ತಂತ್ರಜ್ಞಾನ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸ್ಥಳ: ಫೋರ್ ಸೀಜನ್ ಹೋಟೆಲ್, ಗಂಗಾನಗರ, ಬೆಳಿಗ್ಗೆ 9.30

ಉದ್ಯೋಗ ಮೇಳ: ಉದ್ಘಾಟನೆ: ಎಚ್.ಡಿ. ಕುಮಾರಸ್ವಾಮಿ, ಆಯೋಜನೆ: ಭಾರತೀಯ ಅಂಚೆ ಇಲಾಖೆ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 9.30

ಗಾಂಧಿ ಜಯಂತಿ, ಲಾಲ್ ಬಹದ್ದೂರ್ ಶಾಸ್ತ್ರೀ ಜಯಂತಿ–ಕೆ. ನಾಗಪ್ಪ ಆಳ್ವ, ಕಲ್ಯಾಣಿ ಆಳ್ವ ದತ್ತಿ ನಿಧಿ ಸ್ಪರ್ಧೆ: ಅಧ್ಯಕ್ಷತೆ: ಕೆ. ಮೋಹನ ದೇವ್ ಆಳ್ವ, ಉದ್ಘಾಟನೆ: ಇಂದೂಧರ ಹೊನ್ನಾಪುರ, ಅತಿಥಿ: ಇ.ಪಿ. ಮೆನನ್, ಆಯೋಜನೆ: ಅಖಿಲ ಕರ್ನಾಟಕ ಮಕ್ಕಳ ಕೂಟ: ಸ್ಥಳ: ಮಕ್ಕಳ ಕೂಟದ ಸಭಾಂಗಣ, ಆರ್. ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಮಧ್ಯಾಹ್ನ 3.30

ಕಮಲಾದೇವಿ ಚಟ್ಟೋಪಾಧ್ಯಾಯ ಸ್ಮರಣೆ: ನುಡಿನಮನ: ಎಚ್.ಎಲ್. ಪುಷ್ಪಾ, ಪುಷ್ಪನಮನ: ಎಲ್. ವೆಂಕಟಪ್ಪ, ಅಧ್ಯಕ್ಷತೆ: ರಾಮೇಗೌಡ, ಆಯೋಜನೆ: ಉದಯಭಾನು ಕಲಾಸಂಘ, ಸಂಜೆ 6

ಕುರುಕ್ಷೇತ್ರ–ಪೌರಾಣಿಕ ನಾಟಕ: ಉದ್ಘಾಟನೆ: ವಿ. ನಾಗರಾಜ್, ಅಧ್ಯಕ್ಷತೆ: ರಾಜು ಡಿ., ಅತಿಥಿಗಳು: ರಾಮಚಂದ್ರ, ಯಲ್ಲಪ್ಪ ಕೀಕೊಂಡರಹಳ್ಳಿ, ಶಿವಣ್ಣ ಆರಾಧ್ಯ, ವಿರೂಪಾಕ್ಷ ಆರಾಧ್ಯ, ನಾಗೇಂದ್ರ ಆನೇಕಲ್, ಬಿ.ಎನ್. ಯುವರಾಜ್, ವಿಜಯ ಮದಕರಿ, ರಮೇಶ್, ಅಂಜನ್ ಕುಮಾರ್, ಶ್ರೀನಿವಾಸ್ ಹುರುಳಿಚಿಕ್ಕನಹಳ್ಳಿ, ಆಯೋಜನೆ: ಪಾಪು ಕಲಾವಿದರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಕರ್ನಾಟಕ ಗ್ರಾಹಕ ಉತ್ಪಾದಕ ಕೇಂದ್ರದ ಅನಾವರಣ: ಅತಿಥಿಗಳು: ಎಂ.ಬಿ. ಪಾಟೀಲ, ಗುಂಜನ್ ಕೃಷ್ಣ ಉಲ್ಲಾಸ್ ಕಾಮತ್, ನಿಖಿಲ್ ವೋರಾ, ಸಮೀರ್ ಕೊಠಾರಿ, ಅರವಿಂದ್ ಮೆಳ್ಳಿಗೇರಿ, ಆಯೋಜನೆ: ಎಫ್‌ಐಸಿಸಿಐ, ಸ್ಥಳ: ತಾಜ್ ವೆಸ್ಟ್ ಎಂಡ್, ಸಂಜೆ 6

42ನೇ ಬಹುಭಾಷಾ ಸಂಗೀತ ಸ್ಪರ್ಧೆಯ ಬಹುಮಾನ ವಿತರಣೆ: ಅತಿಥಿಗಳು: ಸುಂದರ್ ಟಿ., ನರಸಿಂಹ ನಾಯ್ಕ, ಜೋಗಿಲ ಸಿದ್ಧರಾಜು, ಸೌಮ್ಯ ಗೌತಮ, ಕವನ ರಾಜಕುಮಾರ್, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತ ಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್, ಜಾಲಹಳ್ಳಿ, ಸಂಜೆ 6

ರಣದುಂದುಭಿ–ನಾಟಕ: ಅಧ್ಯಕ್ಷತೆ: ಜಲಮಂಡಳಿ ರಾಮಚಂದ್ರ, ಉದ್ಘಾಟನೆ: ಜಿಪಿಒ ಚಂದ್ರಶೇಖರ್, ಅತಿಥಿಗಳು: ದೊಡ್ಡಮನೆ ವೆಂಕಟೇಶ್, ವಿ. ಕೃಷ್ಣಮೂರ್ತಿ, ರಂಗನಾಥ ಮಾವಿನಕೆರೆ, ವೈರ್‌ಲೆಸ್ ಶ್ರೀನಿವಾಸ್, ನಾಗರಾಜ್, ಆಯೋಜನೆ: ಕಾವೇರಿ ಕಲಾ ಸಂಘ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 6.30



ಕಾರ್ಯಕ್ರಮದಲ್ಲಿ ಕಮಲಾ ಹಂಪನಾ ದತ್ತಿ ಪ್ರಶಸ್ತಿಯನ್ನು ಕವಯತ್ರಿ ಚಾಂದಿನಿ ಮತ್ತು ಸಂಶೋಧಕ ಬಾಳಾಸಾಹೇಬ ಲೋಕಾಪುರ ಅವರಿಗೆ ಪ್ರದಾನ ಮಾಡಲಾಯಿತು. ಹಂಪನಾ ದಂಪತಿಯ ಪುತ್ರಿಯರಾದ ಆರತಿ ಎಚ್‌.ಎನ್‌. (ಎಡದಿಂದ), ರಾಜಶ್ರೀ ಎಚ್‌.ಎನ್‌., ಸಂಶೋಧಕ ಹಂ.ಪ.ನಾಗರಾಜಯ್ಯ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್‌.ಎಲ್‌. ಪುಷ್ಪಾ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್‌.ಎನ್‌.ಮುಕುಂದರಾಜ್‌, ಕವಯತ್ರಿ ವಿನಯಾ ಒಕ್ಕುಂದ, ಉಮಾಶಂಕರ, ನಟರಾಜ್ ,ಕನ್ನಡ ಜನಶಕ್ತಿ ಕೇಂದ್ರ ಅಧ್ಯಕ್ಷ ಸಿ.ಕೆ.ರಾಮೇಗೌಡ ಇದ್ದರು – ಪ್ರಜಾವಾಣಿ ಚಿತ್ರ

'ಸಮ್ಮೇಳನಾಧ್ಯಕ್ಷತೆಗೆ ಉದ್ಯಮಿ ಹೆಸರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೊಡ್ಡ ಉದ್ಯಮಿಯೊಬ್ಬರ ಪತ್ನಿಯನ್ನು ಮಂಡ್ಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಲಾಗುತ್ತದೆ ಎಂಬ ಸುದ್ದಿ ಇದೆ. ಉದ್ಯಮಿಗಳು ಎಂಬ ಮಾತ್ರಕ್ಕೆ ಈ ಸ್ಥಾನಕ್ಕೆ ಆಯ್ಕೆ ಮಾಡುವುದು ಎಷ್ಟು ಸರಿ' ಎಂದು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪಾ ಪ್ರಶ್ನಿಸಿದರು.

ಕರ್ನಾಟಕ ಲೇಖಕಿಯರ ಸಂಘ, ಕನ್ನಡ ಜನಶಕ್ತಿ ಕೇಂದ್ರ, ನಾಡೋಜ ಕಮಲಾ ಹಂಪನಾ ಸಾಹಿತ್ಯ ವೇದಿಕೆ ನಗರದಲ್ಲಿ ಸೋಮವಾರ ಜಂಟಿಯಾಗಿ ಆಯೋಜಿಸಿದ್ದ ದತ್ತಿ ಉಪನ್ಯಾಸ ಮತ್ತು ಕಮಲಾ ಹಂಪನಾ ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕನ್ನಡ ಸಾಹಿತ್ಯ–ಸಂಸ್ಕೃತಿಗಾಗಿ ಕೆಲಸ ಮಾಡಿದ ವೀಣಾ ಶಾಂತೇಶ್ವರ, ಶಾಂತಿ ನಾಯಕರಂತಹ ಅನೇಕ ಮಹಿಳೆಯರು ಇದ್ದರೂ, ಉದ್ಯಮಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡುವ ಮಾನದಂಡಗಳೇ ಬದಲಾಗಿವೆ' ಎಂದು ಬೇಸರಿಸಿದರು.

'ಈಗ ಕೆಲವು ಲೇಖಕಿಯರು ಬರೆಯುತ್ತಾರೆ ಮತ್ತು ಪ್ರಶಸ್ತಿ ಪಡೆದುಕೊಳ್ಳುತ್ತಾರೆ. ಆದರೆ ಜನ ಸಾಮಾನ್ಯರೊಂದಿಗೆ ಬೆರೆಯದೇ, ಸಮಕಾಲೀನ ವಿಯಷಗಳಿಗೆ ಸ್ಪಂದಿಸದೇ, ಪ್ರಗತಿಪರ ಚಿಂತನೆ ಇಲ್ಲದೆ ಬರೆಯುವ ಅವರು ಟೀಕೆಗಳಿಗೆ ಗುರಿಯಾಗುತ್ತಾರೆ' ಎಂದರು.

ಕವಿ ಎಲ್.ಹನುಮಂತಯ್ಯ ಮಾತನಾಡಿ, 'ಈಗ ದಲಿತ ಕಾವ್ಯ ಮತ್ತು ಸಾಹಿತ್ಯದ ಬಗ್ಗೆ ಹೆಚ್ಚು ಚರ್ಚೆ ಆಗುತ್ತಿದೆ. ಸಮಕಾಲೀನ ಸಂಗತಿಗಳಿಗೆ ಎದುರಾಗುವುದು ಕಾವ್ಯದ ಬಹಳ ದೊಡ್ಡ ಗುಣ. ಕವಿಯೊಬ್ಬ ಸಮಕಾಲೀನ ಸಂಘರ್ಷಗಳನ್ನು ಪ್ರಶ್ನೆ ಮಾಡಬೇಕು. ಮಾನವೀಯ ಮೌಲ್ಯಗಳನ್ನು ಮರುವೀಕ್ಷಣೆ ಮಾಡಬೇಕು. ಈಗಿನ ಕವಿಗಳಲ್ಲಿ ನಾನಿವನ್ನು ನಿರೀಕ್ಷೆ ಮಾಡುತ್ತೇನೆ' ಎಂದರು.

ಆರೋಗ್ಯ ಹಾಳಾಗುವಷ್ಟು ಒತ್ತಡ ಬೇಡ: ದಿನೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಕಂಪನಿಗಳು ತಮ್ಮ ಉದ್ಯೋಗಿಗಳ ಆರೋಗ್ಯ ಹಾಳಾಗುವಷ್ಟು ಒತ್ತಡ ಉಂಟು ಮಾಡಬಾರದು. ಉದ್ಯೋಗಿಗಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಸೋಮವಾರ ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಮ್ಮಿಕೊಂಡಿದ್ದ 'ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ' ಉದ್ಘಾಟಿಸಿ ಅವರು ಮಾತನಾಡಿದರು.

'ಉದ್ಯೋಗಿಗಳು ಹಲವು ಹಂತಗಳಲ್ಲಿ ಮಾನಸಿಕ ಒತ್ತಡಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಿರುತ್ತದೆ. ಪ್ರತಿಯೊಂದು ಸಂಸ್ಥೆಯೂ ತನ್ನ ಉದ್ಯೋಗಿಯ ಮಾನಸಿಕ ಸ್ಥಿತಿಯನ್ನು ಗುರುತಿಸಬೇಕು. ಹೆಚ್ಚಿನ ಒತ್ತಡ ಹೇರದೆ ಗಂಭೀರ ಪರಿಣಾಮಕ್ಕೆ ವ್ಯಕ್ತಿ ತುತ್ತಾಗುವುದನ್ನು ತಡೆಯಬೇಕು. ಅವರ ಕೆಲಸದ ಒತ್ತಡ ಗಮನಿಸಿ ತಮ್ಮ ಸಮಸ್ಯೆ ಹೇಳಿಕೊಳ್ಳುವ, ಪರಿಹಾರ ಕಂಡುಕೊಳ್ಳುವ ಸೌಲಭ್ಯ ಒದಗಿಸಬೇಕು' ಎಂದರು.

ಈಚೆಗೆ ಕೌಟುಂಬಿಕ ವ್ಯವಸ್ಥೆಯಲ್ಲಿ ಸಂವಹನದ ತೊಡಕಿನಿಂದ ಮಾನಸಿಕ ಸಮಸ್ಯೆ ಹೆಚ್ಚಾಗುತ್ತಿದೆ. ಮಾನಸಿಕ ಸಮಸ್ಯೆ ಮುಜುಗರ, ಅವಮಾನದ ವಿಚಾರವಲ್ಲ ಎಂಬುದನ್ನು ಮನದಟ್ಟು ಮಾಡಿಕೊಡುವುದು ಅಗತ್ಯ ಎಂದರು.

'ಟೆಲಿ ಮನಸ್ ದೇಶಕ್ಕೆ ಮಾದರಿ'

'ಮಾನಸಿಕ ಆರೋಗ್ಯ ವಿಚಾರದಲ್ಲಿ ರಾಜ್ಯವು ದೇಶಕ್ಕೆ ಮಾದರಿಯಾಗಿದೆ. ಅಧಿಕ ಜನ ಸೇರುವ ದರ್ಗಾ, ದೇವಸ್ಥಾನ, ಚರ್ಚ್‌ಗಳಲ್ಲೂ ಮಾನಸಿಗ ಆರೋಗ್ಯದ ಚಿಕಿತ್ಸೆ, ಸಲಹೆಯನ್ನು ನೀಡುವ ಯೋಜನೆ ಹಮ್ಮಿಕೊಳ್ಳಲಾಗಿದೆ. ಟೆಲಿ ಮನಸ್ ಮೂಲಕ ಸಮಸ್ಯೆಯುಳ್ಳವರಿಗೆ ನೇರವಾಗಿ ಕೌನ್ಸೆಲಿಂಗ್ ಮಾಡುವ ವ್ಯವಸ್ಥೆ ನಮ್ಮಲ್ಲಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ ನೀಡಿದರು.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್ ಮಾತನಾಡಿ, 'ದೈಹಿಕ ಬಾಧೆಗಳನ್ನು ಮೀರಿ ಮಾನಸಿಕ ಸಮಸ್ಯೆಯೇ ಮೊದಲ ಸ್ಥಾನ ಪಡೆಯುತ್ತಿದೆ. ಮೊಬೈಲ್‌ನ ವಿಪರೀತ ಬಳಕೆ ಕೂಡ ಮಾನಸಿಕ ಸಮಸ್ಯೆಗೆ ದಾರಿ ಮಾಡಿಕೊಡುತ್ತಿದೆ. ಗ್ರಾಮೀಣ ಪ್ರದೇಶಗಳಿಗಿಂತ ನಗರಗಳಲ್ಲಿ ಶೇ 3ರಷ್ಟು ಹೆಚ್ಚು ಸಮಸ್ಯೆ ಇದೆ' ಎಂದರು.

ಮನೋವಿಜ್ಞಾನಿ ಡಾ.ಎ. ಜಗದೀಶ್ ವಿಶೇಷ ಉಪನ್ಯಾಸ ನೀಡಿದರು. ಶಾಸಕ ಬಿ. ಉದಯ್ ಗರುಡಾಚಾರ್, ಆರೋಗ್ಯ ಇಲಾಖೆ ಆಯುಕ್ತ ಕೆ.ಬಿ. ಶಿವಕುಮಾರ್, ಬಿಎಂಸಿಆರ್‌ಐ ನಿರ್ದೇಶಕಿ ಡಾ.ಎಂ.ಜಿ. ತ್ರಿವೇಣಿ, ಪ್ರಾಧಿಕಾರದ ಉಪ ನಿರ್ದೇಶಕಿ ಡಾ.ಪಿ. ರಜನಿ ಭಾಗವಹಿಸಿದ್ದರು.

ಪರಭಾಷಾ ಚಿತ್ರಗಳಿಂದ ಕನ್ನಡದ ಸಿನಿಮಾಗಳಿಗೆ ಹೊಡೆತ • ಟಿಕೆಟ್ ದರ ₹200 ನಿಗದಿಗೆ ಮನವಿ

ಮಲ್ಟಿಪ್ಲೆಕ್ಸ್‌ಗಳಿಗೆ ಮುತ್ತಿಗೆ: ಗೋವಿಂದು ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಲ್ಟಿಪ್ಲೆಕ್ಸ್‌ಗಳಲ್ಲಿ ಸಿನಿಮಾ ಟಿಕೆಟ್ ದರವನ್ನು ₹200 ನಿಗದಿಗೊಳಿಸುವಂತೆ ಮುಖ್ಯಮಂತ್ರಿಗಳಿಗೆ ಮನವಿ ನೀಡಿದ್ದು, ಶೀಘ್ರದಲ್ಲೇ ಈ ಕುರಿತು ಸರ್ಕಾರ ಆದೇಶ ಹೊರಡಿಸುವ ಭರವಸೆ ಇದೆ. ಇದು ಆಗದೇ ಇದ್ದಲ್ಲಿ ಮಲ್ಟಿಪ್ಲೆಕ್ಸ್‌ಗಳಿಗೆ ಮುತ್ತಿಗೆ ಹಾಕಲಿದ್ದೇವೆ' ಎಂದು ನಿರ್ಮಾಪಕ ಸಾ.ರಾ. ಗೋವಿಂದು ಎಚ್ಚರಿಕೆ ನೀಡಿದರು.

ಸರ್ಕಾರ ಸಿನಿಮಾ ಟಿಕೆಟ್ ದರ ನಿಗದಿ ಮಾಡಬೇಕು ಎಂದು ಆಗ್ರಹಿಸಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ(ಕೆಎಫ್‌ಸಿಸಿ) ಮುಂದೆ ನಿರ್ದೇಶಕ ಟೇ.ಶಿ.ವೆಂಕಟೇಶ್ ನೇತೃತ್ವದಲ್ಲಿ 'ಕನ್ನಡ ಚಲನಚಿತ್ರ ಸಂರಕ್ಷಣಾ ವೇದಿಕೆ' ಸದಸ್ಯರು ಕಳೆದೊಂದು ವಾರದಿಂದ ಧರಣಿ ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕೆಎಫ್‌ಸಿಸಿ ಅಧ್ಯಕ್ಷ ಎನ್.ಎಂ.ಸುರೇಶ್ ಹಾಗೂ ಸಾ.ರಾ.ಗೋವಿಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿದ್ದರು.

ಸೋಮವಾರ (ಅ.28) ಸುದ್ದಿಗೋಷ್ಠಿ ನಡೆಸಿದ ಸಾ.ರಾ. ಗೋವಿಂದು, 'ನಮ್ಮ ಕರ್ನಾಟಕದ ಹಣ ತಮಿಳುನಾಡು, ಕೇರಳ ಹಾಗೂ ಆಂಧ್ರಪ್ರದೇಶಕ್ಕೆ ಹಂಚಿಹೋಗುತ್ತಿದೆ. ನಾವು ಪರಭಾಷಾ ಸಿನಿಮಾಗಳನ್ನು ಇಲ್ಲಿ ಬಿಡುಗಡೆ ಮಾಡಬೇಡಿ ಎನ್ನುತ್ತಿಲ್ಲ. ಇತ್ತೀಚೆಗೆ ಬಿಡುಗಡೆಗೊಂಡ ರಜನಿಕಾಂತ್ ಸಿನಿಮಾಗೆ ಟಿಕೆಟ್ ದರ ₹1500–₹2000ದವರೆಗೆ ಇತ್ತು. ತಮಿಳುನಾಡಿನಲ್ಲಿ ಇದಕ್ಕೆ ₹150 ಮೇಲೆ ಇರಲಿಲ್ಲ. ಪರಭಾಷಾ ಸಿನಿಮಾಗಳಿಂದ ಕನ್ನಡ ಸಿನಿಮಾಗಳಿಗೂ ತೆರೆ ಕಡಿಮೆಯಾಗುತ್ತಿದೆ. ಇವುಗಳಿಂದ ಕನ್ನಡ ಚಿತ್ರರಂಗಕ್ಕೆ ಹೊಡೆತ ಬೀಳುತ್ತಿರುವುದು ಸತ್ಯ. ನೆರೆ ರಾಜ್ಯಗಳಲ್ಲಿರುವಂತೆ ನಮ್ಮಲ್ಲೂ ಟಿಕೆಟ್ ದರ ನಿಗದಿ ಮಾಡುವಂತೆ 2017ರಲ್ಲೇ ನಾನು ಆಗ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರಿಗೆ ಮನವಿ ನೀಡಿದ್ದೆ. ಆಗ ಸರ್ಕಾರ ವಾರ್ತಾ ಇಲಾಖೆಯಡಿ ಟಿಕೆಟ್ ದರ ನಿಗದಿಪಡಿಸಿ ಆದೇಶ ಹೊರಡಿಸಿತ್ತು. ಮಲ್ಟಿಪ್ಲೆಕ್ಸ್‌ನವರು ಇದಕ್ಕೆ ತಡೆಯಾಜ್ಞೆ ತಂದಿದ್ದರು. ಆ ತಡೆಯಾಜ್ಞೆ ಈಗ ತೆರವಾಗಿದೆ. ಇದೀಗ ಗೃಹ ಇಲಾಖೆಯಡಿ ಟಿಕೆಟ್ ದರ ನಿಗದಿ ಮಾಡುವ ಆದೇಶವನ್ನು ಹೊರಡಿಸುವ ಭರವಸೆಯನ್ನು ಮುಖ್ಯಮಂತ್ರಿಗಳು ನೀಡಿದ್ದಾರೆ' ಎಂದರು.

'ಸರ್ಕಾರ ನೀಡಿರುವ ಭರವಸೆಗೆ ಕಾಯುತ್ತೇವೆ. ಒಂದು ವೇಳೆ ಸರ್ಕಾರ ನಮ್ಮ ಈ ಮನವಿಗೆ ಸ್ಪಂದಿಸಿಲ್ಲ ಎಂದರೆ ನಾವು ಹೋರಾಟದ ಹಾದಿಯನ್ನು ಹಿಡಿಯಲೇಬೇಕಾಗುತ್ತದೆ. ಪರಭಾಷಾ ವಿತರಕರು, ಪ್ರದರ್ಶಕರು ಮುಂದಿನ ದಿನಗಳಲ್ಲಿ ಹೆಜ್ಜೆ ಇಡುವಾಗ ಎಚ್ಚರಿಕೆಯಿಂದಿರಿ. ತೆಲುಗಿನ 'ಪುಷ್ಪ' ಸಿನಿಮಾದಿಂದಲೇ ಆರಂಭಿಸಿ ಮಲ್ಟಿಪ್ಲೆಕ್ಸ್‌ಗಳ ಮೇಲೆ ಮುತ್ತಿಗೆ ಹಾಕುತ್ತೇವೆ. ಈ ಸಿನಿಮಾ ಟಿಕೆಟ್ ದರ ₹200ಕ್ಕಿಂತ ಹೆಚ್ಚಿದ್ದರೆ ಎಲ್ಲಿಯೂ ಬಿಡುಗಡೆ ಮಾಡಲು ಅವಕಾಶ ಮಾಡಿಕೊಡುವುದಿಲ್ಲ. ನಮ್ಮಲ್ಲೇ ಭಿನ್ನಾಭಿಪ್ರಾಯಗಳು ಇವೆ. ಪರಭಾಷಾ ಸಿನಿಮಾಗಳನ್ನು ತರುವವರದ್ದೇ ಒಂದು ಗ್ಯಾಂಗ್ ಆಗಿದೆ. ವಾರದೊಳಗೆ ನಮ್ಮ ಪ್ರದರ್ಶಕರು, ವಿತರಕರು ಹಾಗೂ ನಿರ್ಮಾಪಕರ ಜೊತೆಗೂ ಸಭೆ ನಡೆಸಲಿದ್ದೇವೆ' ಎಂದರು.



ಕೆಎಫ್‌ಸಿಸಿ ಮುಂದೆ ಧರಣಿ ನಿರತ ಕನ್ನಡ ಚಲನಚಿತ್ರ ಸಂರಕ್ಷಣಾ ವೇದಿಕೆ ಸದಸ್ಯರು

ಉದ್ಯಮಿ ಆನಂದ ಸಂಕೇಶ್ವರಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಕೆ. ಟೈರ್ ಕಂಪನಿ 20 ವರ್ಷಗಳ ಸಂಭ್ರಮಾಚರಣೆ ನಿಮಿತ್ತ ಇತ್ತೀಚೆಗೆ ಸಿಂಗಪುರದಲ್ಲಿ ಆಯೋಜಿಸಿದ್ದ ಉನ್ನತ ಮಟ್ಟದ ಸಮ್ಮೇಳನದಲ್ಲಿ ವಿಆರ್‌ಎಲ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಆನಂದ ಸಂಕೇಶ್ವರ ಅವರಿಗೆ 'ವರ್ಷದ ಲಾಜಿಸ್ಟಿಕ್ ಐಕಾನ್ ಪ್ರಶಸ್ತಿ' ನೀಡಿ ಗೌರವಿಸಿದೆ.



ಆನಂದ

ಸರಕು ಸಾಗಣೆ ಉದ್ಯಮದ ಅಗ್ರ ವ್ಯಕ್ತಿಯೆಂದು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ. ಜೊತೆಗೆ, ಅವರ ನವೀನ ವಿಧಾನ, ಸುರಕ್ಷತೆಯ ಗುಣಮಟ್ಟ, ದಕ್ಷತೆ ಮತ್ತು ಸುಸ್ಥಿರತೆಯ ಮಾನದಂಡಗಳನ್ನು ಪರಿಗಣಿಸಿ ಪ್ರಶಸ್ತಿ ನೀಡಲಾಗಿದೆ ಎಂದು ಜೆ.ಕೆ. ಟೈರ್ ಕಂಪನಿ ತಿಳಿಸಿದೆ.

2018	1,949	₹5 ಲಕ್ಷ	35.4 ಕೋಟಿ	7.79 ಕೋಟಿ	₹1.07 ಲಕ್ಷ ಕೋಟಿ	1.71 ಕೋಟಿ	86.94 ಲಕ್ಷ
ಆಯುಷ್ಮಾನ್ ಭಾರತ್ ಯೋಜನೆ ಅನುಷ್ಠಾನಗೊಂಡ ವರ್ಷ	ಯೋಜನೆಯ ವ್ಯಾಪ್ತಿಗೆ ಬರುವ ಚಿಕಿತ್ಸೆಗಳು (ತುರ್ತು, ಗಂಭೀರ, ದ್ವಿತೀಯ ಶ್ರೇಣಿಯ ಚಿಕಿತ್ಸೆಗಳೂ ಒಳಗೊಂಡಂತೆ)	ಯೋಜನೆ ಅಡಿಯಲ್ಲಿ ಬಡಕುಟುಂಬಕ್ಕೆ ವಾರ್ಷಿಕವಾಗಿ ಸಿಗುವ ವಿಮೆ ಮೊತ್ತ	ಈವರೆಗೆ ವಿತರಣೆ ಮಾಡಲಾಗಿರುವ ಆಯುಷ್ಮಾನ್ ಭಾರತ್ ಕಾರ್ಡುಗಳು	ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾದ ಫಲಾನುಭವಿಗಳು	ಯೋಜನೆ ಅಡಿಯಲ್ಲಿ ಚಿಕಿತ್ಸೆಗಾಗಿ ಮಾಡಲಾಗಿರುವ ವೆಚ್ಚ	ಕರ್ನಾಟಕದಲ್ಲಿ ವಿತರಣೆ ಮಾಡಿರುವ ಕಾರ್ಡ್‌ಗಳ ಸಂಖ್ಯೆ	ಯೋಜನೆ ಅಡಿ ಕರ್ನಾಟಕದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದವರು

70 ವರ್ಷ ದಾಟಿದ ಎಲ್ಲರಿಗೂ ಇಂದಿನಿಂದ ‘ಆಯುಷ್ಮಾನ್’

ಆಯುಷ್ಮಾನ್ ಭಾರತ್ ಆರೋಗ್ಯ ಯೋಜನೆ ಇಂದಿನಿಂದ ವಿಸ್ತೃತ ರೂಪ ಪಡೆಯಲಿದೆ. 70 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಿನ ಎಲ್ಲ ಪ್ರಜೆಗಳಿಗೂ ಎಬಿ–ಪಿಎಂಜೆಎವೈ ಅಡಿ ಆರೋಗ್ಯ ವಿಮಾ ಸೌಲಭ್ಯ ಕಲ್ಪಿಸುವುದಾಗಿ ಕೇಂದ್ರ ಸರ್ಕಾರ ಘೋಷಿಸಿದೆ. ಆಯುಷ್ಮಾನ್ ಭಾರತ್ ಯೋಜನೆಯ ವಿಸ್ತರಣೆಯಿಂದ ದೇಶದ ಎಲ್ಲ ಜಾತಿ ಸಮುದಾಯಗಳ, ಎಲ್ಲ ಆರ್ಥಿಕ ವರ್ಗಗಳ 70 ವರ್ಷ ದಾಟಿದವರು ಪ್ರಯೋಜನ ಪಡೆಯಬಹುದಾಗಿದೆ. ಆದರೆ, ಇದುವರೆಗೆ ಈ ಯೋಜನೆ ಅನುಷ್ಠಾನದ ಬಗ್ಗೆ ಹಲವು ಆರೋಪಗಳು ಕೇಳಿ ಬಂದಿದ್ದವು. ಹೊಸ ರೂಪ ಪಡೆದುಕೊಂಡಿರುವ ಯೋಜನೆ ದೇಶದ ಹೆಚ್ಚು ಜನರನ್ನು ತಲುಪುವ ಗುರಿಯನ್ನು ಹೊಂದಿದೆ

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (ಎಬಿ–ಪಿಎಂಜೆಎವೈ) ಮಂಗಳವಾರ ಹೊಸ ರೂಪದಲ್ಲಿ ಅನುಷ್ಠಾನಕ್ಕೆ ಬರಲಿದೆ. ಜಗತ್ತಿನ ಅತಿ ದೊಡ್ಡ ಆರೋಗ್ಯ ವಿಮಾ ಯೋಜನೆ ಎಂಬ ಹೆಗ್ಗಳಿಕೆ ಹೊಂದಿರುವ ಈ ಯೋಜನೆ ಈಗ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದೆ. 70 ಮತ್ತು ಅದಕ್ಕಿಂತ ಹೆಚ್ಚು ವರ್ಷ ವಯಸ್ಸಿನ ಎಲ್ಲ ಹಿರಿಯ ನಾಗರಿಕರಿಗೆ ಆರೋಗ್ಯ ವಿಮೆಯನ್ನು ಒದಗಿಸಲಿದೆ.

ದೇಶದ ಬಡವರು ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯ ಸೇವೆ ಕಲ್ಪಿಸುವ ಉದ್ದೇಶದಿಂದ 2018ರಲ್ಲಿ ಈ ಯೋಜನೆ ಜಾರಿಗೆ ಬಂದಿತ್ತು.

ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ (ಎನ್‌ಎಚ್‌ಎ) ಆಯುಷ್ಮಾನ್ ಭಾರತ್ ಯೋಜನೆಯನ್ನು ಎರಡು ಹಂತಗಳಲ್ಲಿ ಜಾರಿಗೊಳಿಸುತ್ತಿದೆ. ಮೊದಲನೆಯದ್ದು, ಆಯುಷ್ಮಾನ್ ಆರೋಗ್ಯ ಮಂದಿರ. ಎರಡನೆಯದ್ದು, ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (ಎಬಿ–ಪಿಎಂಜೆಎವೈ).

ಈ ಯೋಜನೆಯ ಅಡಿ ಬಡ ಕುಟುಂಬಗಳಿಗೆ ವರ್ಷಕ್ಕೆ ₹5 ಲಕ್ಷದ ವರೆಗೆ ವಿಮಾ ಸೌಲಭ್ಯ ಕಲ್ಪಿಸಲಾಗುತ್ತಿತ್ತು. ಅಂದರೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿರದ ಚಿಕಿತ್ಸೆಗಳನ್ನು ಫಲಾನುಭವಿಗಳು ಖಾಸಗಿ ಆಸ್ಪತ್ರೆಗಳಲ್ಲಿ ನಗದು ರಹಿತವಾಗಿ ಪಡೆಯಬಹುದಾಗಿತ್ತು. ಪರಿಷ್ಕೃತ ಯೋಜನೆಯಲ್ಲಿ ಬಡ ಕುಟುಂಬಗಳಿಗೆ ₹5 ಲಕ್ಷದವರೆಗಿನ ವಿಮಾ ಸೌಲಭ್ಯ ಹಾಗೆಯೇ ಇರಲಿದೆ. ಹೆಚ್ಚುವರಿಯಾಗಿ ಆದಾಯದ ಇತಿ ಮಿತಿಗಳಿಲ್ಲದೆ, 70 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಎಲ್ಲರಿಗೂ ವಾರ್ಷಿಕ ₹5 ಲಕ್ಷದವರೆಗೆ ವಿಮಾ ಸೌಲಭ್ಯ ಸಿಗಲಿದೆ.

ಹಲವು ಬಾರಿ ವಿಸ್ತರಣೆ: 2018ರಲ್ಲಿ ಯೋಜನೆ ಆರಂಭಿಸಿದ ನಂತರ ಫಲಾನುಭವಿಗಳ ಸಂಖ್ಯೆಗೆ ಅನುಗುಣವಾಗಿ ಹಲವು ಬಾರಿ ಇದನ್ನು ವಿಸ್ತರಣೆ ಮಾಡಲಾಗಿದೆ. ಆರಂಭದಲ್ಲಿ ಯೋಜನೆ ಅಡಿ 10.74 ಕೋಟಿ ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದರು. ಜನವರಿ 2022ರಂದು ಕೇಂದ್ರ ಸರ್ಕಾರವು ದೇಶದ ಜನಸಂಖ್ಯಾ ವೃದ್ಧಿಗೆ ತಕ್ಕಂತೆ 12 ಕೋಟಿ ಕುಟುಂಬಗಳಿಗೆ ಯೋಜನೆಯನ್ನು ವಿಸ್ತರಿಸಿತು. ನಂತರ ಸಾಮಾಜಿಕ ಆರೋಗ್ಯ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು ಮತ್ತು ಅಂಗನವಾಡಿ ಸಹಾಯಕಿಯರು ಹಾಗೂ ಅವರ ಕುಟುಂಬಗಳನ್ನೂ ಯೋಜನೆಯ ವ್ಯಾಪ್ತಿಗೆ ತರಲಾಯಿತು. ಇದೀಗ 70 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ಎಲ್ಲ ಹಿರಿಯ ನಾಗರಿಕರನ್ನೂ ಯೋಜನೆಯ ವ್ಯಾಪ್ತಿಗೆ ತರಲು ಕೇಂದ್ರವು ಕ್ರಮ ಕೈಗೊಂಡಿದೆ.



ಅರ್ಜಿ ಸಲ್ಲಿಸುವುದು ಹೇಗೆ?

ಈವರೆಗೂ ಆಯುಷ್ಮಾನ್ ಭಾರತ್ ಕಾರ್ಡ್ ಪಡೆಯಲು ಅನುಸರಿಸಲಾಗುತ್ತಿದ್ದ ವಿಧಾನವೇ ಪರಿಷ್ಕೃತ ಯೋಜನೆಗೂ ಅನ್ವಯವಾಗಲಿದೆ. ತಾಲ್ಲೂಕು ಆಸ್ಪತ್ರೆ, ಜಿಲ್ಲಾ ಆಸ್ಪತ್ರೆಗಳಲ್ಲಿ ಅರ್ಜಿ ಸಲ್ಲಿಸುವುದಕ್ಕೆ ಅವಕಾಶ ಇದೆ. ಅರ್ಜಿದಾರರು ಆಧಾರ್ ಕಾರ್ಡ್ ಮತ್ತು ಪಡಿತರ ಕಾರ್ಡ್‌ಗಳನ್ನು ಹೊಂದಿದ್ದರೆ ಸಾಕು ಎಂದು ಹೇಳುತ್ತಾರೆ ಅಧಿಕಾರಿಗಳು.

ಫಲಾನುಭವಿಗಳು ತಮ್ಮ ತವರು ರಾಜ್ಯದಲ್ಲಿ ಮಾತ್ರವಲ್ಲದೆ ದೇಶದ ಯಾವುದೇ ಭಾಗದಲ್ಲಿಯೂ ಚಿಕಿತ್ಸೆ ಪಡೆಯಬಹುದು.

ಎಬಿಪಿಎಂಜೆಎವೈ ಜಾರಿಯಲ್ಲಿ ಕೇಂದ್ರದ ಪಾಲು ಶೇ 60ರಷ್ಟಿದ್ದರೆ, ರಾಜ್ಯಗಳ ಪಾಲು ಶೇ 40 ಎಂದು ನಿರ್ಧರಿಸಲಾಗಿತ್ತು. ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶ ಸೇರಿ ಹಲವು ರಾಜ್ಯಗಳಲ್ಲಿ ರಾಜ್ಯದ ಆರೋಗ್ಯ ಸೇವಾ ಯೋಜನೆಗಳ ಜತೆಗೆ ಎಬಿಪಿಎಂಜೆಎವೈ ಅನ್ನು ವಿಲೀನಗೊಳಿಸಲಾಗಿತ್ತು. ಕರ್ನಾಟಕದಲ್ಲಿ ‘ಆಯುಷ್ಮಾನ್ ಭಾರತ್- ಆರೋಗ್ಯ ಕರ್ನಾಟಕ’ ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು.

ಯೋಜನೆಯ ಅಡಿಯಲ್ಲಿ ರಾಜ್ಯದ 1.15 ಕೋಟಿ (ಬಿಪಿಎಲ್) ಕುಟುಂಬಗಳ ಪೈಕಿ 62 ಲಕ್ಷ ಕುಟುಂಬಗಳಿಗೆ ಮಾತ್ರ ಕೇಂದ್ರ ಸರ್ಕಾರವು ಶೇ 60ರಷ್ಟು, ರಾಜ್ಯ ಸರ್ಕಾರವು ಶೇ 40ರಷ್ಟು ಅನುದಾನ ಭರಿಸುತ್ತದೆ. ಇನ್ನುಳಿದ 53 ಲಕ್ಷ ಕುಟುಂಬಗಳಿಗೆ ರಾಜ್ಯ ಸರ್ಕಾರವೇ ಶೇ 100ರಷ್ಟು ವೆಚ್ಚ ಭರಿಸುತ್ತದೆ. ಸಾಮಾನ್ಯ ವರ್ಗದ 19 ಲಕ್ಷ ಕುಟುಂಬಗಳಿಗೂ ರಾಜ್ಯ ಸರ್ಕಾರವೇ ಶೇ 100ರಷ್ಟು ವೆಚ್ಚ ಭರಿಸುತ್ತದೆ ಎಂದು ರಾಜ್ಯ ಸರ್ಕಾರ ಪ್ರಕಟಿಸಿತ್ತು.

ಎಎಪಿ ಆಡಳಿತ ನಡೆಸುತ್ತಿದ್ದ ದೆಹಲಿ, ಟಿಎಂಸಿ ಆಡಳಿತದ ಪಶ್ಚಿಮ ಬಂಗಾಳ ಮತ್ತು ಬಿಜೆಡಿ ಆಡಳಿತವಿದ್ದ ಒಡಿಶಾ ರಾಜ್ಯಗಳು ಆಯುಷ್ಮಾನ್ ಭಾರತ್ ಯೋಜನೆಯನ್ನು ಜಾರಿಗೊಳಿಸಿರಲಿಲ್ಲ. ಕೇಂದ್ರ ಸರ್ಕಾರವು ಈ ದಿಸೆಯಲ್ಲಿ ಹಲವು ಬಾರಿ ಒತ್ತಡ ಹೇರಿದ್ದರೂ ಅವು ಮಣಿದಿರಲಿಲ್ಲ. ಒಡಿಶಾದಲ್ಲಿ ಬಿಜೆಡಿ ಸರ್ಕಾರ ಪತನಗೊಂಡು, ಬಿಜೆಪಿ ಸರ್ಕಾರ ರಚನೆಯಾದ ಮೇಲೆ ಯೋಜನೆ ಜಾರಿಗೆ ನಿರ್ಧರಿಸಿದ್ದು, ಈ ಸಂಬಂಧ ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ ಜತೆ ರಾಜ್ಯ ಸರ್ಕಾರ ಒಪ್ಪಂದ ಮಾಡಿಕೊಳ್ಳಲು ಮುಂದಾಗಿದೆ.

ಆದರೆ, ಯೋಜನೆ ಸಮರ್ಪಕವಾಗಿ ಜಾರಿಯಾಗಿಲ್ಲ, ವಿಪರೀತ ನಿಯಮಗಳಿಂದಾಗಿ ನೋಂದಣಿಯಾಗಲು ಇಚ್ಛಿಸುವ ಫಲಾನುಭವಿಗಳು ತೊಂದರೆ ಅನುಭವಿಸುತ್ತಿದ್ದಾರೆ, ಯೋಜನೆಗೆ ಅಗತ್ಯವಾದ ಹಣಕಾಸು ನೆರವನ್ನು ಕೇಂದ್ರ ಸರ್ಕಾರ ಒದಗಿಸಿಲ್ಲ ಎನ್ನುವ ಟೀಕೆಗಳು ವ್ಯಕ್ತವಾಗಿದ್ದವು. ಯೋಜನೆಯ ಅಡಿ ರೋಗಿಗಳಿಗೆ ಚಿಕಿತ್ಸೆ ನೀಡಿದ ಖಾಸಗಿ ಆಸ್ಪತ್ರೆಗಳಿಗೆ ಚಿಕಿತ್ಸೆಯ ಶುಲ್ಕದ ಮೊತ್ತ ಪಾವತಿಸುವಲ್ಲಿ ವಿಳಂಬವಾಗುತ್ತಿದೆ ಎನ್ನುವ ದೂರುಗಳು ಸಾಮಾನ್ಯವಾಗಿದ್ದವು.

ಆಧಾರ: ಪಿಟಿಐ, ಪಿಐಬಿ, ಆಯುಷ್ಮಾನ್ ಭಾರತ್ ವೆಬ್‌ಸೈಟ್, ಸಿಎಜಿ ವರದಿ

ಹೊಸ ಯೋಜನೆಯ ವಿವರ

- 70 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಿನ ಎಲ್ಲ ನಾಗರಿಕರಿಗೂ (ಆದಾಯ ಎಷ್ಟೇ ಇದ್ದರೂ) ವಿಮಾ ಸೌಲಭ್ಯ
- **4.60** ಕೋಟಿ ಕುಟುಂಬಗಳು ಮತ್ತು 70 ವರ್ಷ ದಾಟಿದ **6** ಕೋಟಿ ನಾಗರಿಕರಿಗೆ ಪ್ರಯೋಜನ
- ಪ್ರತಿ ಕುಟುಂಬಕ್ಕೆ ವಾರ್ಷಿಕ ₹5 ಲಕ್ಷದವರೆಗೆ ವಿಮಾ ಸೌಲಭ್ಯ
- ಈ ಯೋಜನೆಯ ಅಡಿಯಲ್ಲಿ ಬರುವ ಕುಟುಂಬಗಳಲ್ಲಿರುವ 70 ಮತ್ತು ಅದಕ್ಕಿಂತ ಹೆಚ್ಚು ವರ್ಷ ವಯಸ್ಸಿನವರಿಗೆ ಹೆಚ್ಚುವರಿಯಾಗಿ (ಟಾಪ್ ಅಪ್) ₹ 5ಲಕ್ಷದವರೆಗೆ ವಿಮಾ ಸೌಲಭ್ಯ. ಇದು ಅವರಿಗಷ್ಟೇ ಮೀಸಲು. 70 ವರ್ಷಕ್ಕಿಂತ ಕಡಿಮೆ ವಯಸ್ಸಿನ ಕುಟುಂಬದ ಬೇರೆ ಸದಸ್ಯರೊಂದಿಗೆ ಹಂಚಿಕೊಳ್ಳಬೇಕಾಗಿಲ್ಲ
- 70 ಮತ್ತು ಅದಕ್ಕಿಂತ ಹೆಚ್ಚು ವಯಸ್ಸಿನ ಹಿರಿಯ ನಾಗರಿಕರು ಹೊಸ ಯೋಜನೆಯ ಅಡಿಯಲ್ಲಿ ಹೊಸ ಆರೋಗ್ಯ ಕಾರ್ಡ್ ಪಡೆಯಲಿದ್ದಾರೆ
- ಆಯ್ಕೆಗೆ ಅವಕಾಶ: ಸಾರ್ವಜನಿಕ ಆರೋಗ್ಯ ವಿಮಾ ಯೋಜನೆಗಳಾದ ಕೇಂದ್ರ ಸರ್ಕಾರ ಆರೋಗ್ಯ ಯೋಜನೆ (ಸಿಜಿಎಚ್‌ಎಸ್), ನಿವೃತ್ತ ಸೈನಿಕರ ಚಂದಾ ಆರೋಗ್ಯ ಯೋಜನೆ (ಇಸಿಎಚ್‌ಎಸ್) ಅಥವಾ ಆಯುಷ್ಮಾನ್ ಕೇಂದ್ರ ಸಶಸ್ತ್ರ ಪೊಲೀಸ್ ಪಡೆ (ಸಿಎಪಿಎಫ್) ಯೋಜನೆಗಳ ಫಲಾನುಭವಿಗಳು ಆಯಾ ಯೋಜನೆಗಳಲ್ಲಿಯೇ ಮುಂದುವರಿಯಬಹುದು ಅಥವಾ ಎಬಿಪಿಎಂಜೆಎವೈ ಅನ್ನು ಆಯ್ಕೆ ಮಾಡಿಕೊಳ್ಳಬಹುದು
- ಖಾಸಗಿ ಆರೋಗ್ಯ ವಿಮಾ ಪಾಲಿಸಿಗಳು ಅಥವಾ ನೌಕರರ ರಾಜ್ಯ ವಿಮಾ ಯೋಜನೆಗಳ ಫಲಾನುಭವಿಗಳು ಕೂಡ ಎಬಿ–ಪಿಎಂ–ಜೆಎವೈ ಲಾಭ ಪಡೆಯಲು ಅರ್ಹರು



ಅನುಷ್ಠಾನದಲ್ಲಿ ಹಲವು ಕೊರತೆ

- ಆಯುಷ್ಮಾನ್ ಭಾರತ್ ಯೋಜನೆಯು ದೇಶದಾದ್ಯಂತ ಇನ್ನೂ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿಲ್ಲ
- 2023ರ ಮಹಾಲೇಖಪಾಲರ (ಸಿಎಜಿ) ವರದಿಯು ಈ ಯೋಜನೆಯಲ್ಲಿನ ಲೋಪಗಳ ಬಗ್ಗೆ ಬೊಟ್ಟು ಮಾಡಿತ್ತು. ‘ಅರ್ಹ ಫಲಾನುಭವಿಗಳು ಯೋಜನೆ ವ್ಯಾಪ್ತಿಯಿಂದ ಹೊರಗಿದ್ದಾರೆ. ಫಲಾನುಭವಿಗಳ ದತ್ತಾಂಶಗಳಲ್ಲಿ ದೋಷ ಇದೆ. ಫಲಾನುಭವಿಗಳಿಗೆ ಚಿಕಿತ್ಸೆ ನೀಡಿದ ಆಸ್ಪತ್ರೆಗಳಿಗೆ ವಿಮಾ ಮೊತ್ತ ಪಾವತಿಸುವಲ್ಲಿ ವಿಳಂಬ ಮಾಡಲಾಗುತ್ತಿದೆ’ ಎಂದು ಯೋಜನೆಯ ಜಾರಿಯಲ್ಲಿನ ಕೊರತೆಗಳ ಬಗ್ಗೆ ವರದಿ ಪ್ರಸ್ತಾಪಿಸಿತ್ತು
- ಆರೋಗ್ಯ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ರೋಗಿಗಳು ನೇರವಾಗಿ ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗಲು ಈ ಯೋಜನೆ ಅಡಿಯಲ್ಲಿ ಅವಕಾಶ ಇಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ನಿರ್ದಿಷ್ಟ ಚಿಕಿತ್ಸೆ ಲಭ್ಯವಿಲ್ಲದಿದ್ದಲ್ಲಿ, ವೈದ್ಯಾಧಿಕಾರಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಲಿಖಿತವಾಗಿ ಶಿಫಾರಸು ಮಾಡಿದರೆ ಮಾತ್ರ ಖಾಸಗಿ ಆಸ್ಪತ್ರೆಗಳಲ್ಲಿ ₹5 ಲಕ್ಷ ವೆಚ್ಚದವರೆಗೆ ಉಚಿತ ಚಿಕಿತ್ಸೆ ಸಿಗುತ್ತದೆ. ಸರ್ಕಾರಿ ವೈದ್ಯರ ಶಿಫಾರಸು ಪತ್ರ ಇಲ್ಲದೇ ದಾಖಲಾದವರು ಆಯುಷ್ಮಾನ್ ಕಾರ್ಡ್ ಇದ್ದರೂ, ಚಿಕಿತ್ಸೆಗಾಗಿ ಕೈಯಿಂದ ದುಡ್ಡು ತೆರಬೇಕು (ಕರ್ನಾಟಕ ಸರ್ಕಾರವು ಈ ಶಿಫಾರಸು ಪದ್ಧತಿಯನ್ನು ಕೈಬಿಡುವ ಬಗ್ಗೆ ಚಿಂತನೆ ನಡೆಸಿದೆ)
- ಖಾಸಗಿ ಆಸ್ಪತ್ರೆಗಳು ಯೋಜನೆಯ ಫಲಾನುಭವಿಗಳಿಂದ ಹಣ ವಸೂಲು ಮಾಡುವ ಆರೋಪವೂ ಇದೆ
- ಮುಖ್ಯವಾಗಿ ಈ ಯೋಜನೆ ಒಳರೋಗಿಗಳಿಗೆ ಮಾತ್ರ ಅನ್ವಯವಾಗುತ್ತದೆ. ಸರ್ಕಾರಿ ಆಸ್ಪತ್ರೆ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಜನರು ದೊಡ್ಡ ಸಂಖ್ಯೆಯಲ್ಲಿ ಹೊರರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಿಗೂ ಈ ವಿಮಾ ಯೋಜನೆ ಅನ್ವಯವಾಗಬೇಕು ಎಂಬ ಕೂಗು ಮೊದಲಿನಿಂದಲೂ ಇದೆ

ಸಿನಿ ಬಿಟ್ಸ್

‘ಫೈರ್ ಫ್ಲೈ’ ಸಿನಿಮಾ ಚಿತ್ರೀಕರಣ ಪೂರ್ಣ



ರಚನಾ ಇಂದರ್

ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣದ, ವಂಶಿ ನಿರ್ದೇಶನದ ‘ಫೈರ್ ಫ್ಲೈ’ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಚಿತ್ರತಂಡ ಕುಂಬಳಕಾಯಿ ಒಡೆದಿದೆ. ಈ ಕಾರ್ಯಕ್ರಮದಲ್ಲಿ ನಟ ಶಿವರಾಜ್‌ಕುಮಾರ್ ಹಾಗೂ ಗೀತಾ ಶಿವರಾಜ್‌ಕುಮಾರ್ ಭಾಗವಹಿಸಿದ್ದರು. ಇದು ನಿವೇದಿತಾ ಅವರ ನಿರ್ಮಾಣದ ಮೊದಲ ಸಿನಿಮಾ. ಶ್ರೀ ಮುತ್ತು ಸಿನಿ ಸರ್ವೀಸ್‌ನಡಿ ಈ ಸಿನಿಮಾ 2023ರ ಜೂನ್‌ನಲ್ಲಿ ಸೆಟ್ಟೇರಿತ್ತು. ವಂಶಿ ಈ ಸಿನಿಮಾವನ್ನು ನಿರ್ದೇಶಿಸುವುದರ ಜೊತೆಗೆ ನಾಯಕನಾಗಿಯೂ ನಟಿಸಿದ್ದಾರೆ. ವಂಶಿಗೆ ಜೋಡಿಯಾಗಿ ರಚನಾ ಇಂದರ್ ನಟಿಸಲಿದ್ದಾರೆ. ಡಿಸೆಂಬರ್‌ನಲ್ಲಿ ಸಿನಿಮಾ ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ‘ಫೈರ್ ಫ್ಲೈ’ ಸಿನಿಮಾಗೆ ಚರಣ್ ರಾಜ್ ಸಂಗೀತ ಒದಗಿಸಿದ್ದಾರೆ. ಚಿತ್ರದಲ್ಲಿ ಮೂಗು ಸುರೇಶ್, ಶೀತಲ್ ಶೆಟ್ಟಿ, ಸುಧಾರಾಣಿ, ಅಚ್ಯುತ್ ಕುಮಾರ್ ಪ್ರಮುಖ ಪಾತ್ರಗಳಿಗೆ ಬಣ್ಣಹಚ್ಚಿದ್ದಾರೆ. ಚಿತ್ರಕ್ಕೆ ಅಭಿಲಾಷ್ ಕಳತ್ತಿ ಛಾಯಾಚಿತ್ರಗ್ರಹಣ, ಚರಣ್ ರಾಜ್ ಸಂಗೀತ ಸಂಯೋಜನೆ ಇದೆ. ರಘು ನಿಡುವಳ್ಳಿ ಈ ಚಿತ್ರಕ್ಕೆ ಸಂಭಾಷಣೆ ಬರೆದಿದ್ದಾರೆ.

ಆನಂದ್ ಆಡಿಯೊಗೆ ‘45’ ಹಕ್ಕು



ಉಪೇಂದ್ರ, ಶಿವರಾಜ್‌ಕುಮಾರ್, ರಾಜ್ ಬಿ.ಶೆಟ್ಟಿ

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳುತ್ತಿರುವ, ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಜೊತೆಯಾಗಿ ಕಾಣಿಸಿಕೊಳ್ಳಲಿರುವ ‘45’ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದೆ.

ಇದೇ ಸಂದರ್ಭದಲ್ಲಿ ಚಿತ್ರದ ಆಡಿಯೊ ಹಕ್ಕುಗಳನ್ನು ಆನಂದ್ ಆಡಿಯೊ ಸಂಸ್ಥೆ ದೊಡ್ಡ ಮೊತ್ತಕ್ಕೆ ಖರೀದಿಸಿದೆ ಎಂದು ಚಿತ್ರತಂಡ ಹೇಳಿದೆ. ಅರ್ಜುನ್ ಜನ್ಯ ಅವರೇ ಸಂಗೀತ ನೀಡಿರುವ ಚಿತ್ರದ ಹಾಡುಗಳು ಸದ್ಯದಲ್ಲೇ ಬಿಡುಗಡೆಯಾಗಲಿವೆ ಎಂದೂ ಚಿತ್ರತಂಡ ಮಾಹಿತಿ ನೀಡಿದೆ.

2023ರ ಏಪ್ರಿಲ್‌ನಲ್ಲಿ ಸೆಟ್ಟೇರಿದ್ದ ಈ ಸಿನಿಮಾದ ಕೊನೆಯ ಹಂತದ ಕ್ಲೈಮ್ಯಾಕ್ಸ್ ದೃಶ್ಯಗಳ ಚಿತ್ರೀಕರಣ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದಿತ್ತು. ಸೂರಜ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಉಮಾ ರಮೇಶ್ ರೆಡ್ಡಿ ಅವರು ನಿರ್ಮಿಸುತ್ತಿರುವ ಈ ಸಿನಿಮಾ ಕನ್ನಡ, ತಮಿಳು, ತೆಲುಗು, ಹಿಂದಿ ಹಾಗೂ ಮಲಯಾಳದಲ್ಲಿ ತೆರೆಕಾಣಲಿದೆ. ಅರ್ಜುನ್ ಜನ್ಯ ಚೊಚ್ಚಲ ನಿರ್ದೇಶನದ ಚಿತ್ರ ಇದಾಗಿದ್ದು, ಅವರೇ ಕಥೆ-ಚಿತ್ರಕಥೆ ಬರೆದು ಸಂಗೀತ ಸಂಯೋಜಿಸಿದ್ದಾರೆ. ಸತ್ಯ ಹೆಗಡೆ ಛಾಯಾಚಿತ್ರಗ್ರಹಣ, ರವಿ ವರ್ಮಾ ಅವರ ಸಾಹಸ ನಿರ್ದೇಶನ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮಹಾರಾಷ್ಟ್ರ ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ ಅವರ ವಿಡಿಯೊ ಅನ್ನು ಬಿಜೆಪಿಯ ಹಲವು ಬೆಂಬಲಿಗರು ಹಂಚಿಕೊಳ್ಳುತ್ತಿದ್ದಾರೆ. ಭಾರತದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಮೀಸಲಾತಿಯನ್ನು ಅಂತ್ಯಗೊಳಿಸುವುದಾಗಿ ರಾಹುಲ್ ಗಾಂಧಿ ಅವರು ಅಮೆರಿಕದಲ್ಲಿ ಹೇಳಿರುವುದಾಗಿಯೂ, ಅದನ್ನು ನಾನಾ ಪಟೋಲೆ ಒಪ್ಪಿ, ಸಮರ್ಥಿಸಿಕೊಂಡಿದ್ದಾರೆ ಎಂದೂ ಆ ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಬಿಜೆಪಿ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥ ಅಮಿತ್ ಮಾಲವೀಯ, ಪಕ್ಷದ ವಕ್ತಾರ ಪ್ರದೀಪ್ ಭಂಡಾರಿ, ಶಿವಸೇನಾ (ಶಿಂದೆ ಬಣ) ಮುಖಂಡ ಸಂಜಯ್ ನಿರುಪಮ್ ಅವರೂ ವಿಡಿಯೊ ಅನ್ನು ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ನಾನಾ ಪಟೋಲೆ ಅವರ ವಿಡಿಯೊ, ಸುದ್ದಿ ವಾಹಿನಿಯ ಚರ್ಚೆಯೊಂದರ ತುಣುಕು. ವಾಹಿನಿಯ ನಿರೂಪಕನ ಪ್ರಶ್ನೆಗೆ ಉತ್ತರಿಸುವ ವೇಳೆ ಸಂವಿಧಾನ, ಮೀಸಲಾತಿ ಬಗ್ಗೆ ರಾಹುಲ್ ಗಾಂಧಿ ಅವರ ಅಭಿಪ್ರಾಯದ ಬಗ್ಗೆ ಮಾತನಾಡುತ್ತಾ ಪಟೋಲೆ ಈ ಮಾತು ನುಡಿದಿದ್ದಾರೆ. ‘ಭಾರತದಲ್ಲಿ ಎಲ್ಲರೂ ಸಮಾನರಾಗಿ ಬದಲಾದ ದಿನ ಮೀಸಲಾತಿಯನ್ನು ಅಂತ್ಯಗೊಳಿಸುವ ಬಗ್ಗೆ ಯೋಚಿಸಬಹುದು ಎಂಬುದಾಗಿ ರಾಹುಲ್ ಹೇಳಿದ್ದಾರೆ...’ ಎಂದು ಪಟೋಲೆ ಹೇಳಿದ್ದಾರೆ. ಆದರೆ, ಅವರ ವಿಡಿಯೊ ಅನ್ನು ತಪ್ಪು ಅರ್ಥ ಬರುವಂತೆ ಕತ್ತರಿಸಿ, ಸುಳ್ಳು ಪ್ರತಿಪಾದನೆಗಳೊಂದಿಗೆ ಹಂಚಿಕೊಳ್ಳಲಾಗುತ್ತಿದೆ.

ಗುಂಡಣ್ಣ



ಜೀವನದಲ್ಲಿ ವಿವೇಕ ಬೇಕು!

ನುಡಿ ಬೆಳಗು — ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ | 54



ನೊಬೆಲ್ ಪ್ರಶಸ್ತಿ ಸ್ಥಾಪಿಸಿದವನ ಹೆಸರು ಅಲ್ಫ್ರೆಡ್ ನೊಬೆಲ್ ಅಂತ. ಸ್ವೀಡನ್ ದೇಶದ ಕೆಮಿಸ್ಟ್. ಅವ ಡೈನಾಮೈಟ್ ಕಂಡು ಹಿಡಿದ. ಅವ ಅದನ್ನು ಒಳ್ಳೆಯ ಉದ್ದೇಶಕ್ಕೇ ಕಂಡುಹಿಡಿದಿದ್ದ. ಆದರೆ ಅದನ್ನು ಯುದ್ಧಗಳಲ್ಲಿ ಬಳಸಲಾಗುತ್ತಿತ್ತು. ನಾಗರಿಕ ಯುದ್ಧಗಳಿಗೂ ಬಳಸಲಾಯಿತು. ಅದರಿಂದ ಸಾಕಷ್ಟು ಜನರು ಸತ್ತರು. ಆದರೆ ಪೇಟೆಂಟ್ ಇವನ ಬಳಿಯೇ ಇದ್ದಿದ್ದರಿಂದ ದುಡ್ಡು ಬಹಳ ಬರುತ್ತಿತ್ತು. ಇವನ ಅಣ್ಣ ಲುಡ್ವಿಕ್ ನೊಬೆಲ್ ಅಂತ ಇದ್ದ. ಅವ ಒಂದಿನ ಸತ್ತು ಹೋದ. ಆದರೆ ಪೇಪರ್‌ನವರಿಗೆ ಅಲ್ಫ್ರೆಡ್ ನೊಬೆಲ್ ತೀರಿಕೊಂಡ ಎಂಬ ಸುದ್ದಿ ಮುಟ್ಟಿತು. ಮಾರನೆ ದಿನ ಎಲ್ಲ ಪತ್ರಿಕೆಗಳಲ್ಲಿ ಅಲ್ಫ್ರೆಡ್ ನೊಬೆಲ್ ತೀರಿಕೊಂಡ ಎಂದೇ ಸುದ್ದಿ ಬಂತು.

ಪೇಪರ್‌ನವರು ‘ಸಾವಿನ ವ್ಯಾಪಾರಿ ಅಲ್ಫ್ರೆಡ್ ನೊಬೆಲ್ ನಿಧನ’ ಅಂತ ಸುದ್ದಿ ಹಾಕಿದ್ದರು. ಅದನ್ನು ನೋಡಿ ನೊಬೆಲ್‌ಗೆ ಆಘಾತವಾಯಿತು. ತಾನು ಜೀವಂತ ಇರುವಾಗಲೇ ಜಗತ್ತು ತನ್ನನ್ನು ಸಾವಿನ ವ್ಯಾಪಾರಿ ಅಂತ ಗುರುತಿಸಿತಲ್ಲ ಎಂದು ದುಃಖವಾಯಿತು. ತಾನು ಒಳ್ಳೆಯ ಉದ್ದೇಶಕ್ಕೇ ಡೈನಾಮೈಟ್ ಕಂಡು ಹಿಡಿದಿರಬಹುದು. ಆದರೆ ಅದು ತುಂಬಾ ಜನರ ಸಾವಿಗೆ ಕಾರಣವಾಯಿತಲ್ಲ ಎಂಬ ವಿವೇಕ ಅವನಲ್ಲಿ ಮೂಡಿತು. ಇನ್ನು ಮುಂದೆ ತಾನು ತಪ್ಪು ಮಾಡಬಾರದು ಎಂದು ತೀರ್ಮಾನಿಸಿದ. ಆತನ ವಿವೇಕ ಜಾಗೃತವಾಯಿತು. ಅದಕ್ಕಾಗಿಯೇ ತನಗೆ ಬಂದಿದ್ದ ಹಣದಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಸ್ಥಾಪಿಸಿದ. ಅದರ ಮೂಲಕವೇ ದಲೈಲಾಮಾ, ಮದರ್ ತೆರೆಸಾ ಅಂಥವರಿಗೆ ನೊಬೆಲ್ ಪ್ರಶಸ್ತಿ ಬಂತು.

ಯಾರನ್ನು ಈ ಜಗತ್ತು ಸಾವಿನ ದೂತ ಅಂತ ಕರೆದಿತ್ತೋ ಅದೇ ವ್ಯಕ್ತಿ ಒಂದು ಕ್ಷಣದಲ್ಲಿ ತೆಗೆದುಕೊಂಡ ನಿರ್ಧಾರದಿಂದ ಅದೇ ಜಗತ್ತು ಅವನನ್ನು ಶಾಂತಿ ದೂತ ಎಂದು ಕರೆಯಿತು. ಜೀವನದಲ್ಲಿ ವಿವೇಕ ಇರಬೇಕು. ದೇವರು ಈ ಆಯುಷ್ಯ ಏನು ಕೊಟ್ಟಾನ, ಅದನ್ನು ಒಳ್ಳೆಯ ಕೆಲಸ ಮಾಡಲು ಬಳಸಿಕೊಳ್ಳಬೇಕು. ಅದಕ್ಕೆ ನಿಜಗುಣ ಶಿವಯೋಗಿಗಳು ‘ದುರಿತ ಕರ್ಮವನಲ್ಲದಿರು ಪುಣ್ಯವನೆ ಮಾಡು’ ಅಂತ ಹೇಳಿದರು. ಕೆಟ್ಟ ಕೆಲಸ ಮಾಡೋರು, ಲಂಚ ತಗಳೋರು ಒಳ್ಳೆ ಮನೆ ಕಟ್ಟಿಸಿಕೊಂಡು, ಕಾರ್ ತಗಂಡು ಚೆನ್ನಾಗಿದ್ದಾರೆ. ನಮ್ಮದು ನೋಡಿ ಹಿಂದೆ ಹಿತ್ತಲಾಗಿಲ್ಲ, ಮುಂದಕ್ಕೆ ಬೇಲಿಯಾಗಿಲ್ಲ ಅಂತೀರಿ ನೀವು. ಆದರೆ ದೇವರು ಅದ್ಭುತ ಜೀವನ ಕೊಟ್ಟಾನ ಇದಕ್ಕೆ ಕಿಮ್ಮತ್ತು ಕಟ್ಟೋಕೆ ಆಗೋಲ್ಲ.

ಯಾಕೆ ತಪ್ಪು ಕೆಲಸ ಮಾಡಬಾರದು ಮನುಷ್ಯ? ಈಗ ನೀವು ಎಲೆಕ್ಟ್ರಾನಿಕ್ಸ್ ಗೂಡ್ಸ್ ಅಂಗಡಿಗೆ ಹೋಗಿ ಒಂದು ಮೊಬೈಲ್ ಫೋನ್ ತಗೋತೀರಿ. ಅದರೊಳಗೆ ಒಂದು ಮ್ಯಾನ್ಯುವಲ್ ಇರುತ್ತದೆ. ಮೊಬೈಲ್ ಬಳಸುವುದು ಹೇಗೆ ಎಂಬ ಮಾಹಿತಿ ಅದರಲ್ಲಿ ಇರುತ್ತದೆ. ನೀವು ಯಾವುದೇ ಎಲೆಕ್ಟ್ರಾನಿಕ್ಸ್ ವಸ್ತು ತೆಗೆದುಕೊಂಡರೂ ಅದನ್ನು ಬಳಸುವುದು ಹೇಗೆ ಅಂತ ಸೂಚನೆ ಇರುತ್ತದೆ. ಒಂದು ಚಿಕ್ಕ ಯಂತ್ರಕ್ಕೇ ಬಳಸುವುದು ಹೇಗೆ ಎಂಬ ಮಾಹಿತಿ ಇರುವುದಾದರೆ, ದೇವರು ಕೊಟ್ಟ ಈ ದೇಹ, ಜೀವನವನ್ನು ಬಳಸುವುದು ಹೇಗೆ ಎನ್ನುವುದು ಗೊತ್ತಾಗದಿದ್ದರೆ ಮನುಷ್ಯ ಯಂತ್ರಕ್ಕಿಂತ ಕಡೆ ಆದನಲ್ಲ. ದೇಹ, ಮನಸ್ಸು, ಆತ್ಮವನ್ನು ಹೇಗೆ ಬಳಸಬೇಕು ಎನ್ನುವುದು ಮನುಷ್ಯನಿಗೆ ಗೊತ್ತಿರಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಅಕ್ಟೋಬರ್ 29, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿಜ ಕೃಷ್ಣದ್ವಾದಶಿ ಗಂ. 10-32 ನಕ್ಷತ್ರ: ಉತ್ತರಫಲ್ಗುನಿ ಗಂ. 18-34 ಯೋಗ: ಐಂದ್ರ ಗಂ. 07-48 ಕರಣ: ತೈತಿಲ ಗಂ. 10-32, ತುಲಾ ಮಾಸದ 12 ನೇ ದಿನ, ಮಳೆನಕ್ಷತ್ರ: ಸ್ವಾತಿ 2.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-27 ಸೂರ್ಯಾಸ್ತ : 06-01
ಮುಸ್ಲಿಂ ದಿನಾಂಕ : 25 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 5, 8

ಮೇಷ: ಸ್ವಾರ್ಥದ ಕೆಲವು ನಿರ್ಧಾರದ ಫಲವಾಗಿ ಬಂಧುಗಳು ಅಥವಾ ಆತ್ಮೀಯರು ದೂರವಾಗುವ ಲಕ್ಷಣಗಳಿವೆ. ವಂಶಪಾರಂಪರ್ಯವಾಗಿ ಬಂದ ಉದ್ಯೋಗದಲ್ಲಿ ಏಳಿಗೆ ಕಾಣುವಿರಿ.

ವೃಷಭ: ಬಟ್ಟೆ ವ್ಯಾಪಾರಿಗಳು ಪತ್ರಿಕೆಯವರ ಸಹಕಾರದಿಂದ ಹೆಚ್ಚಿನ ಪ್ರಚಾರ ತೆಗೆದುಕೊಳ್ಳಬಹುದು. ನೆಮ್ಮದಿ ಪಡೆಯಲು ಜಗವನ್ನು ಬೆಳಗುವ ಸೂರ್ಯ ನಾರಾಯಣನನ್ನು ನಮಸ್ಕರಿಸಿ, ಪ್ರಾರ್ಥಿಸಿ. ಆರೋಗ್ಯದ ಬಗ್ಗೆ ಕಾಳಜಿ ತೋರಿ.

ಮಿಥುನ: ಉಳಿತಾಯ ಯೋಜನೆಯಲ್ಲಿ ಆಸಕ್ತಿ ಇದ್ದರೂ ಖರ್ಚು ಅಧಿಕವಾಗಿರುತ್ತದೆ. ಆಫೀಸಿನಲ್ಲಿಂದು ಕೆಲಸದ ವೇಗವನ್ನು ಹೆಚ್ಚಿಸಿಕೊಳ್ಳುವುದು ಉತ್ತಮ. ಕಾರ್ಯ ಒಪ್ಪಂದದ ಬಗ್ಗೆ ದೃಢ ನಿರ್ಧಾರ ಮಾಡಿರಿ.

ಕರ್ಕಾಟಕ: ಶ್ರಮದ ಜೀವನದಿಂದ ಆರ್ಥಿಕ ಅಡಚಣೆಗಳು ಹಂತಹಂತವಾಗಿ ನಿವಾರಣೆಯಾಗಲಿವೆ. ಮಾತಿನಿಂದ ಕಾರ್ಯ ಸಾಧಿಸುವ ಗುಣದಿಂದ ಲಾಭ ಕಾಣಲಿದ್ದೀರಿ. ಅವಿವಾಹಿತರಿಗೆ ಕಂಕಣ ಭಾಗ್ಯ ಪ್ರಾಪ್ತಿ.

ಸಿಂಹ: ವ್ಯವಹಾರದ ಪ್ರಯುಕ್ತ ಇರುವ ಪ್ರವಾಸವು ಕೆಲಸ ಕಾರ್ಯಗಳಲ್ಲಿ ಪ್ರಗತಿಯನ್ನೂ ಅನಿರೀಕ್ಷಿತ ಲಾಭವನ್ನೂ ತಂದು ಕೊಡುವುದು. ಕೃಷಿ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಇರುವುದು.

ಕನ್ಯಾ: ವ್ಯಾಪಾರದಲ್ಲಿ ಸ್ವಂತ ತೀರ್ಮಾನದಿಂದ ಮುಂದುವರಿದರೆ ಧನಾದಾಯ ಹೆಚ್ಚಲಿದೆ. ಸ್ಥಿರ ಆಸ್ತಿ ಖರೀದಿಸುವ ಬಗ್ಗೆ ಯೋಚನೆ ಮಾಡಿ. ಸುಬ್ರಹ್ಮಣ್ಯನನ್ನು ಆರಾಧಿಸುವುದರಿಂದ ಆರೋಗ್ಯಭಾಗ್ಯವು ಉಂಟಾಗುತ್ತದೆ.

ತುಲಾ: ದೂರ ದೃಷ್ಟಿ ಇಟ್ಟುಕೊಂಡು ಈಗಿನ ಪ್ರಪಂಚದ ಓಟಕ್ಕೆ ಸರಿಯಾಗಿ ಕಾರ್ಯ ಪ್ರವೃತ್ತರಾಗುವುದು ಉತ್ತಮ. ಮನೆಯಲ್ಲಿ ಶುಭ ಸಮಾರಂಭವು ಸುಸೂತ್ರವಾಗಿ ನಡೆದುದಕ್ಕೆ ಸಮಾಧಾನಗೊಳ್ಳುವಿರಿ. .

ವೃಶ್ಚಿಕ: ಈಗಾಗಲೇ ಒಪ್ಪಿಕೊಂಡಿರುವ ಒಪ್ಪಂದವೊಂದು ಮುರಿದು ಬೀಳದಂತೆ ಎಚ್ಚರವಹಿಸುವುದರಿಂದ ಗೌರವವು ಉಳಿಯುವುದು. ಆಡಿದ ಮಾತಿನಿಂದ ಶುಭ ಮತ್ತು ಅಶುಭದ ಮಿಶ್ರಣ ಫಲ ಅನುಭವಿಸುವಂತಾಗಲಿದೆ.

ಧನು: ಸ್ಟುಡಿಯೊದವರಿಗೆ ಅಧಿಕ ಕಾರ್ಯಕ್ರಮದಿಂದ ಲಾಭ ಇರಲಿದೆ. ಉತ್ಸಾಹವನ್ನು ಹೆಚ್ಚಿಸಿಕೊಳ್ಳುವ ಸಮಯವಾಗಿದೆ. ಸ್ವ ಉದ್ಯೋಗಿಗಳಿಗೆ ಉದ್ಯೋಗ ನಿಮಿತ್ತವಾಗಿ ಪ್ರಯಾಣ ಸಂಭವ ಇರುವುದು.

ಮಕರ: ವಾಹನದ ಅನಿವಾರ್ಯತೆ ಹೆಚ್ಚಿರುವುದರಿಂದ ನೂತನ ವಾಹನ ಖರೀದಿಸುವ ಬಗ್ಗೆ ಗಮನಹರಿಸಿ. ಅಧಿಕ ಹಣದ ಹರಿವು ನಿಧಾನವಾಗಿ ಅನುಭವಕ್ಕೆ ಬರಲಿದೆ. ಚಿತ್ರಕಲೆ ಮತ್ತು ಸಾಹಿತ್ಯಕಾರರಿಗೆ ಶುಭವಾರ್ತೆ ಬರಲಿದೆ.

ಕುಂಭ: ದಿನಸಿ ವರ್ತಕರಿಗೆ, ಹೋಟೆಲ್ ಉದ್ಯಮದವರಿಗೆ ಜೋರಿನ ವ್ಯಾಪಾರ ಇರಲಿದೆ. ಗುರುಗಳ ಮಾರ್ಗದರ್ಶನದ ಮಹತ್ವ ತಿಳಿಯುವುದು. ಸಾಂಸಾರಿಕ ಸಮಸ್ಯೆಗೆ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಮೀನ: ಹೊಸ ಹೂಡಿಕೆ , ಒಪ್ಪಂದಗಳು ನಿಶ್ಚಿತ ಹಂತ ತಲುಪಿದ್ದಕ್ಕೆ ಸಂತೃಪ್ತಿಯ ಭಾವವಿರುವುದು. ಆಭರಣ ಮಾರಾಟಗಾರರು, ವಕೀಲ ವೃತ್ತಿ ಯವರಿಗೆ ಹೆಚ್ಚಿನ ಕೆಲಸವಿರುವುದು. ನಿರೀಕ್ಷಿತ ಕಡೆಗಳಿಂದ ಧನ ಒದಗಿ ಬರುವುದು.

ಪದಬಂಧ 5846


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರೇಶ್ಮೆ ಬಟ್ಟೆ ಇಲ್ಲಿದೆ (3)
4.ಕವಿಯನ್ನು ಹೀಗೂ ಕರೆಯುತ್ತಾರೆ (3)
6.ಅತಿ ಆಸಕ್ತಿಯಿಂದ ಕೂಡಿದವನು (2)
7.ಯಾವುದೇ ಕಳಂಕ ಇಲ್ಲದ್ದು (4)
8.ಅಕ್ಕಮಹಾದೇವಿ ಜನಿಸಿದ ಊರು (4)
9.ನಡುವೆ ಜೀ ಎನ್ನುತ್ತಿರುವ ಅಮಾತ್ಯ (3)
11.ಆ ಜಗಲಿ ಹತ್ತಿರ ಕಾಣಿಸಿಕೊಂಡಿರುವ ಹೆಬ್ಬಾವು (4)
13.ದೇವರಿರುವ ಗುಡಿ (4)
14.ಲವನ ಸೋದರ (2)
15.ಮಣ್ಣು ಕಲೆಸಿದ ನೀರು (3)
16.ಮಗಳ ಗಂಡ (3)

ಮೇಲಿಂದ ಕೆಳಕ್ಕೆ

2.ಮೊದಲಿನಿಂದ ಕೊನೆಯವರೆಗೂ ಇರುವಂಥದ್ದು (4)
3.ಸಫಲತೆಯಲ್ಲಿರುವ ಹಣ್ಣು (2)
4.ಕರ ಮೊದಲಿಟ್ಟಾಗ ಕಾಣಿಸಿದ್ದು ಕಚ್ಚಾ ಪ್ರತಿ! (3)
5.ಗಡಿಯಲ್ಲಿರುವ ವ್ಯಾಯಾಮ ಶಾಲೆ (3)
6.ಪ್ರಪಂಚದ ನಡುವಳಿಕೆ (6)
8.ಲಕ್ನೋ ರಾಜಧಾನಿಯಾಗಿರುವ ರಾಜ್ಯ (6)
10.ನೀರಿನಲ್ಲಿ ಕ್ರೀಡಿಸುವುದು (4)
11.ಬಿನ್ನಹಕ್ಕೊಂದು ಪರ್ಯಾಯ ಪದ (3)
12.ಈ ರೀತಿ ಅಬ್ಬರಿಸು! (3)
14.ಕುಟಿಲನ ವಂಶ! (2)



5845ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಾಣದಾನ 3.ಶ್ರಮಜೀವಿ
5.ನದ್ಯಾಲು 8.ಮಿಥುನ
9.ಯೋಗ್ಯತಾಪತ್ರ
10.ತರಂಗ 12.ಹರಕೆ
15.ರಿಯಾಯಿತಿ 16 ಶೋಕರಸ

ಮೇಲಿಂದ ಕೆಳಕ್ಕೆ:
1.ಪ್ರಾಚೀನ 2.ನಗ್ನ
3. ಶ್ರವಣ 4.ವಿದ್ಯಮಾನ
6.ಉಪಯೋಗ
7.ಸಂತಾಪ 8.ಮಿತ್ರದ್ರೋಹ
10.ತರಕಾರಿ 11.ವಸತಿ
13.ಕೆಲಸ 14.ಧಶೋ

ಸುಡೊಕು 6231

			3		8		2	4
8	4	6				5		
	5		4		6		7	
			1		2		4	
		9		3				
6			8		9	2		5
	8		6		1		9	
7		2		8		3		1
	6		2		3		5	7

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6230 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1


ಆದೀಶ್ವರ್
ಎಲೆಕ್ಟ್ರೋ ವರ್ಲ್ಡ್
gadget for every budget!
Haier
HAPPY Dhanteras
This Diwali
CELEBRATE
BIG MOMENTS
Haier WIDE RANGE OF PRODUCTS
BIGGER SCREENS BIGGER SAVINGS
98
85
75
OLED C11 SERIES
Haier
Dolby VISION IQ
Dolby ATMOS
harman/kardon
AVAILABLE IN - 65 | 55
EMI STARTS ₹3,994/-
QD-MINI LED M95 SERIES
Haier
2000 nits
MEMC 144Hz
harman/kardon
AVAILABLE IN - 75 | 65
EMI STARTS ₹2,994/-
QLED S800QT SERIES
Haier
Dolby VISION·ATMOS
DLG 120Hz
LOCAL DIMMING
AVAILABLE IN - 98 | 85 | 75 | 65 | 55 | 43
EMI STARTS ₹1,994/-
4K SMART GOOGLE TV
Haier
Dolby VISION·ATMOS
Google TV
HANDS FREE VOICE CONTROL
AVAILABLE IN - 75 | 65 | 55 | 50 | 43
EMI STARTS ₹994/-
BIGGER SAVINGS
UPTO 20% INSTANT CASHBACK*
3 YEARS WARRANTY*
1 EMI OFF* Easy Monthly Installment
₹994 FIXED EMI STARTING*
Haier Side by Side Refrigerator
• Expert Inverter Technology
• Deo Fresh Technology
• Jumbo Ice Maker
• Large Fruit & Vegetable Box
• Digital Control Panel
Capacity : 602 Ltrs.
EMI ₹2,994/-
Haier Side by Side Refrigerator
• Deo Freh Technology
• Jumbo Ice Maker
• Magic Convertible
• Expert Inverter Technology
• 100% Convertible Fridge
Capacity : 602 Ltrs.
EMI ₹2,994/-
Haier BMR Refrigerator
• Triple Inverter & Dual Fan Technology
• 14-in-1 Convertible
• Separate Fruit Box
• 2x Bigger Vegetable Box
• Twist Ice Maker
Capacity : 445 Ltrs.
EMI ₹1,994/-
Haier BMR Refrigerator
• Triple Inverter & Dual Fan Technology
• 14-in-1 Convertible
• Separate Fruit Box
• 2x Bigger Vegetable Box
• Twist Ice Maker
• Magic Cooling
Capacity : 325 Ltrs.
EMI ₹1,799/-
Haier Frost Free Refrigerator
• Turbo Icing
• Twin Energy Saving Modes
• Twin Energy Saving Mode
• 2x Bigger Vegetable Box
Capacity : 240 Ltrs.
SPECIAL PRICE ₹23,490/-
Haier Direct Cool Refrigerator
• Diamond Edge Freezing Technology
• Toughened Glass
• 10 Years Warranty
• Base Drawyer
Capacity : 190 Ltrs.
SPECIAL PRICE ₹14,990/-
Haier Front Load Washig Machine 10.5 Kg
• Direct Motion Motor
• Super Drum
• Refresh
• Lazer Welding Tech
• Colour : Dark Jade Silver
EMI ₹1,994/-
Haier Front Load Washig Machine 9.0 Kg
• Direct Motion Motor
• Super Drum
• Refresh
• Lazer Welding Tech
• Colour : Dark Jade Silver
EMI ₹1,494/-
Haier Front Load Washig Machine 8.0 Kg
• Inverter Motor
• Super Drum
• Refresh
• Colour : Black
INVERTER MOTOR
EMI ₹1,494/-
Haier Top Load Washig Machine 8.0 Kg
• Removes 106 Types of Stain
• 2x Magic Filter
• Oceanus Wave Drum
• Colour : Starry Silver
EMI ₹1,199/-
Haier Top Load Washig Machine 6.5 Kg
• Ultra Fresh Air
• 2x Magic Filter
• Oceanus Wave Drum
• Colour : Dark Jade Silver
EMI ₹994/-
Haier Semi Automatic Washig Machine 8 Kg
• Ultra Fresh Air
• 2x Magic Filter
• Oceanus Wave Drum
• Colour : Dark Jade Silver
EMI ₹994/-
Haier Deep Freezer
• Three Layer Door
• Molecular Foaming
• Upto 40% Energy Saving
• Dual Condenser
• Embozed PCM Inner Liner
EMI ₹2,399/-
Haier Micro Oven
• Auto Cook Menus
• D Frost
• Oil Free Cooking
• Stainless Steel Cavity
EMI ₹994/-
Haier Robot Vaccum Cleaner
• Voice Control
• Wi-Fi Connectivity
• Google & Alexa Assistant
• Long Battery Life
• Remote Control
EMI ₹994/-
Haier Water Heater
• Shock Proof
• Bacteria Proof System
• Glass Lined Tank
• Superior Water Resistant
• TTS Technology
EMI ₹749/-
Haier Water Dispenser
• Energy Efficient
• Hot Normal Cold
EMI ₹999/-
Haier Air- Conditioner
• Super Sonic Cooling in 10 Seconds
• Frost Self Clean • 7-in-1 Intelli Convertible
• Triple Inverter Plus
EMI ₹1,994/-
ಬೆಂಗಳೂರು
ಯಲಹಂಕ
ಹೆಬ್ಬಗೋಡಿ
ರಾಜಾಜಿನಗರ ಪ್ರೀಮಿಯಮ್ ಸ್ಟೋರ್
ತನಿಸಂದ್ರ
ವಿಜಯನಗರ
ಪೀಣ್ಯ ಟಿ-ದಾಸರಹಳ್ಳಿ
ಮತ್ತಿಕೆರೆ
ಹೆಚ್.ಎಸ್.ಆರ್. ಲೇಔಟ್
ಬನಶಂಕರಿ
ಜಯನಗರ
ಚಂದ್ರ ಲೇಔಟ್
ನಾಗರಭಾವಿ
ಮಾರತಹಳ್ಳಿ
ಕೆಂಗೇರಿ
ಚನ್ನಸಂದ್ರ
ಸುಂಕದಕಟ್ಟೆ
ರಾಜಾಜಿನಗರ
ವಿದ್ಯಾರಣ್ಯಪುರ
ಹೆಗ್ಗನಹಳ್ಳಿ
ಹೆಚ್.ಆರ್.ಬಿ.ಆರ್. ಲೇಔಟ್
ರಾಮಮೂರ್ತಿನಗರ
ಪುಟ್ಟೇನಹಳ್ಳಿ
ಹುಳಿಮಾವು
LG SHOPPE ಮಾರತ್ಹಳ್ಳಿ
LG SHOPPE ರಾಜಾಜಿನಗರ
LG SHOPPE ರಾಜರಾಜೇಶ್ವರಿನಗರ
Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681
• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &


Get Assured SILVER COIN* ON BAJAJ FINSERV PURCHASE
ಧನ್‌ತೇರಸ್ ಶುಭಾಶಯಗಳು
ಆದೀಶ್ವರ್ ಎಲೆಕ್ಟ್ರೋ ವರ್ಲ್ಡ್
gadget for every budget!
BUMPER PRIZE
2 BHK FLAT Worth ₹ 35 Lakhs
1 WINNER
1st PRIZE
10 CARS MARUTHI ESPRESSO CAR Worth ₹ 4.26 Lakhs
10 WINNERS
2nd PRIZE
100 BIKES HERO BIKE Worth ₹70,000/-
100 WINNERS
3rd PRIZE
1000 LED TV'S 40" HD LED TV Worth ₹25,500/-
1000 WINNERS
4th PRIZE
10000 4 PIECE NONSTICK KITCHEN SETS Worth ₹2,990/-
10000 WINNERS
ON EVERY PURCHASE OF ₹3,000/- GET LUCKY DRAW COUPON & CHANCE TO WIN 7.10 CRORES WORTH PRIZES
DHANTERAS HOTTEST DEALS
SONY LG Haier BPL SAMSUNG Panasonic
HEAR THE JOY OF FESTIVITIES WITH HOME THEATRE TV
50 UHD/4K Google TV FESTIVAL PRICE ₹36,990/- ONWARDS
43 QLED TV SOUND BY ONKYO FESTIVAL PRICE ₹32,990/- ONWARDS
43 UHD/4K POWERED BY HARMAN AudioEFX FESTIVAL PRICE ₹26,990/- ONWARDS PRICE AFTER CC CASHBACK
65 UHD/4K Google TV FESTIVAL PRICE ₹54,490/- ONWARDS PRICE AFTER CC CASHBACK
55 UHD/4K SOUND BY ONKYO FESTIVAL PRICE ₹34,490/- ONWARDS PRICE AFTER CC CASHBACK
32 QLED TV SOUND BY ONKYO FESTIVAL PRICE ₹15,990/- ONWARDS
DHANTERAS FESTIVAL HOTTEST DEALS
LG Haier Whirlpool Godrej SAMSUNG BPL Panasonic IFB
Side By Side Refrigerator FESTIVAL PRICE ₹58,990/- ONWARDS
Frost Free Refrigerator FESTIVAL PRICE ₹22,990/- ONWARDS
Direct Cool Refrigerator FESTIVAL PRICE ₹13,490/- ONWARDS
Front Load Washing Machine FESTIVAL PRICE ₹29,990/- ONWARDS
Top Load Washing Machine FESTIVAL PRICE ₹15,990/- ONWARDS
BIGGEST FESTIVAL KITCHEN APPLIANCES DEALS
MIXER COMBO EXCELLA 3 JAR - 16085 + FRESH DRY IRON 1000W - 15945 ₹4590 ₹2450 47%
INDUCTION COMBO INDUCTION COOKTOP RAPIDO CUTE 667-M + STORM FLAT TAWA 250-18 - 14037 ₹4290 ₹2100 51%
CHIMNEY COMBO NEBULA CHIMNEY 60 CM + AYUSH 4 BR ₹22089 ₹9990 55%
3 BR LPG COMBO GLASSTOP AYUSH 3 BR-14336 + FAVOURITE FLAT TAWA 280 - 961 ₹6894 ₹3890 44%
Haier AO Smith HAVELLS V-GUARD FREE PIPE & INSTALLATION WATER HEATER 3 Liters ₹3,490/- 15 liters ₹7,790/- 25 Liters ₹8,990/-
EUREKA FORBES AO Smith HAVELLS LG pureit RO WATER PURIFIER SPECIAL PRICE ₹12,990/- ONWARDS
Pigeon HAVELLS Butterfly Preethi WET GRINDER SPECIAL PRICE ₹3,490/- ONWARDS
ON EVERY PURCHASE OF SMART PHONE GET LUCKY DRAW COUPON
iPhone BUY NOW SMART WATCH WORTH ₹6,999 FREE ON 16 SERIES Apple ADAPTER WORTH ₹1,900 FREE ON 13, 14 & 15 SERIES
SAMSUNG BUY NOW POWER BANK 10000MAH WORTH ₹1,899 FREE
oppo BUY NOW SOUND BAR WORTH ₹3,999 FREE
mi BUY NOW POWER BANK WORTH ₹1,699 FREE
vivo BUY NOW TWS WORTH ₹2,999 FREE
realme BUY NOW WIRELESS BLUETOOTH WORTH ₹1,499 FREE
ಚನ್ನಪಟ್ಟಣ PH : 9036593446 / 9036593447
ಶಿರಸಿ PH : 9591997260, 9731306569
ಕೋಲಾರ 9731306635/9731306574 08152-467397
ಬೆಳಗಾವಿ 0831 4215241 / 42, 9731306717 / 9731306713
ಬಳ್ಳಾರಿ Ph : 08392-242330 / 337, 9731306742 / 9731331684
ಚಿತ್ರದುರ್ಗ 08194-224224, 9686446883
ದಾವಣಗೆರೆ 08192-233626/27, 9731306633 / 6712
ತಿಪಟೂರು Ph : 08134-250104/304, 9686680758 / 9731306552
ತುಮಕೂರು Ph : 0816-4021031, 9731306549 / 9591997270
ಕುಣಿಗಲ್ 08132 - 221901 / 221902 97313 06663
ಯಾದಗಿರಿ Ph : 08173/251779/759 8861002260
ಮಂಡ್ಯ 08232406100/08232406200 9513599861/7349609274
ಗೋಣಿಕೊಪ್ಪ 7702770314/7702770353
ಕೊಪ್ಪಳ 08539 221931/32, 9731306645
ಬೀದರ್ 08482-226800/01, 9513499863
ಕಲಬುರ್ಗಿ Ph 08472-227556, 9108023816,
ಕೆ.ಆರ್. ನಗರ 08223295855/66 9731306715
ಚನ್ನರಾಯಪಟ್ಟಣ 08176253312 / 295256, 9513499855
ವಿಜಯಪುರ 9353907691 / 9606865996
ಸಿಂಧನೂರ್ 08535-222254, 9731306673 / 9731306672
ಕುಶಾಲನಗರ 9591997262/9591997263
ಚಿಕ್ಕಮಗಳೂರು Ph : 08262 - 239944 / 45, 9963998358, 9963998365
ಶಹಾಪೂರ 9513499858 08479-240565,244565
ತೊಕ್ಕೊಟ್ಟು 0824-2956565 9731306621
ಮೈಸೂರು 5 ಸ್ಟೋರ್ಸ್
ಕುವೆಂಪುನಗರ ಅಕ್ಷಯ ಭಂಡಾರ Ph : 0821-2343705/6, 9731306587
ಹಿನ್‌ಕಲ್ Ph. 0821-4852733 / 4851773, 8861007297
ಉದಯಗಿರಿ Ph : 0821-2457860/50, 8861007304/9731306653
ಜೆ.ಪಿ ನಗರ 8861007309 / 886107306
ಡಾ. ರಾಜ್‌ಕುಮಾರ್ ರಸ್ತೆ 8861002262/8861002263
Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com


14 ಗಂಟೆಗಳ ತಡೆರಹಿತ ಶಾಪಿಂಗ್
(ಮಳಿಗೆಗಳು ಬೆಳಗ್ಗೆ 9 ರಿಂದ ರಾತ್ರಿ 11 ಗಂಟೆ ವರೆಗೆ ತೆರೆದಿರುತ್ತದೆ)
ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ
FINANCE BONANZA
Upto ₹10,000 ಕ್ಯಾಶ್ ಬ್ಯಾಕ್*
CASH BACK BONANZA
Upto ₹26,000 ಕ್ಯಾಶ್ ಬ್ಯಾಕ್*
DHANTERAS Sale
ಸ್ಕ್ರ್ಯಾಚ್ ಮಾಡಿ ಗೆಲ್ಲಿರಿ* ಭರವಸೆಯ
ಚಿನ್ನ ಮತ್ತು ಬೆಳ್ಳಿ ನಾಣ್ಯಗಳು
ಇಂದು ಮಾತ್ರ
EXCHANGE DHAMAKA
Upto ₹65,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು.
ಎಕ್ಸ್‌ಚೇಂಜ್ ಮೇಲೆ
ಉಚಿತ FIRE-BOLTT SMART CALLING WATCH WORTH ₹20000
FINANCE POWERED BY Groww 0% EMI Upto 3,500 Cash Back* MIN PRODUCT VALUE ₹10,000
1 ಇ.ಎಮ್.ಐ ಉಚಿತ*
HDFC BANK FESTIVE TREATS 10% INSTANT DISCOUNT ON CC & DC EMI* MIN SWIPE ₹17,500 MAX CASH BACK UPTO ₹3,000
IDFC FIRST Bank 5% INSTANT CASHBACK ON CC EMI* MIN SWIPE ₹5000 MAX CASH BACK UPTO ₹10000
YES BANK 5% INSTANT CASHBACK ON CC EMI* MIN SWIPE ₹20000 MAX CASH BACK UPTO ₹2000
DBS BANK 5% INSTANT CASHBACK ON CC EMI* MIN SWIPE ₹15000 MAX CASH BACK UPTO ₹2500
ASSURED BUYBACK UPTO 70% On New Purchase*
realme 13 Pro 5G 8/256 ₹24,090* EMI STARTS FROM ₹2,008 ಉಚಿತ: EARBUDS BUDS WORTH ₹4999*
vivo V40E 5G 8+128 EFFECTIVE PRICE ₹23,690* (PRICE AFTER CASH BACK) EMI STARTS FROM ₹2,189 ಉಚಿತ: EARBUDS BUDS WORTH ₹4999*
OPPO RENO 12 5G 8/256 EFFECTIVE PRICE ₹29,499* (PRICE AFTER CASH BACK) EMI STARTS FROM ₹2,696 ಉಚಿತ: TWS EARBUDS WORTH ₹4990*
iPhone 16 EFFECTIVE PRICE ₹74,900* (PRICE AFTER CASH BACK) EXCHANGE BONUS UPTO ₹6000 EMI STARTS FROM ₹2,825 ಉಚಿತ: ANC EARBUDS OR WIRELESS MAGSAFE POWER BANK WORTH ₹6499*
SAMSUNG Galaxy S24 Series Galaxy AI is here own now at ₹2625/- month* EFFECTIVE PRICE ₹59,990* (PRICE AFTER CASH BACK) GET: ANC EARBUDS @ ₹199*
DELL INS 15 3535 10% CASH BACK Ryzen 3-7320U 8GB 512GB SSD 15.6 FHD Win 11 MSO 21 OFFER PRICE ₹31,490 ಇ.ಎಮ್.ಐ ₹2,624 MRP ₹49,395 ಉಚಿತ: 32GB PENDRIVE + W/L MOUSE WORTH ₹1299*
Lenovo SLIM 3 10% CASH BACK RYZEN 5 7520U 16GB, 512GB SSD RADEON 610M 15.6" FHD WIN 11 MSO, 21 OFFER PRICE ₹43,990 ಇ.ಎಮ್.ಐ ₹3,666 MRP ₹69,890 ಉಚಿತ: 32GB PENDRIVE AND W/L MOUSE WORTH ₹1,299*
MacBook EMI STARTS FROM ₹3,031 UPTO ₹10000 CASHBACK ಉಚಿತ: 1 YEAR EXTENDED WARRANTY WORTH ₹9999*
hp VICTUS 10% CASH BACK RYZEN 5, 5600H 512GB SSD, 16GB 4GB GFX RX6500M 15.6 FHD 144 HZ WIN 11 OFFER PRICE ₹53,990 ಇ.ಎಮ್.ಐ ₹4,499 MRP ₹67,264 ಉಚಿತ: SMART WATCH WORTH ₹7,999*
Lenovo SLIM 3i HOT DEALS 10% CASH BACK 14TH GEN CORE5 120U 16GB, 512GB SSD 15.6 FHD WIN 11 MSO, 21 OFFER PRICE ₹58,990 ಇ.ಎಮ್.ಐ ₹4,916 MRP ₹95,090 ಉಚಿತ: UPGRADE TO 2 YRS WARRANTY + BAG + SMART WATCH WORTH ₹10999*
LG 75 UHD Ai 4K SMART TV 75UT80406LA ಇ.ಎಮ್.ಐ ₹4,999 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SONY 65 OLED 4K ULTRA HD HIGH DYNAMIC RANGE (HDR) SMART TV (GOOGLE TV) K-65XR80 ಇ.ಎಮ್.ಐ ₹6,500
SAMSUNG 55 ಎಂಚ್ ಇಡಿ 4K SMART TV BEST PRICE ₹99,990
Panasonic 55 4K ULTRA HD SMART ಎಲ್‌ಇಡಿ GOOGLE TV ಇ.ಎಮ್.ಐ ₹2,455 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
NVY PRIDE OF INDIA LOWEST PRICE CHALLENGE 4K ಎಲ್‌ಇಡಿ 52% OFF NVY Official LED partner of RCB
Model	Price	EMI
43 4K SMART	₹18,990	₹1,582
55 4K SMART	₹29,490	₹2,457
SAMSUNG 653 LITRES SIDE BY SIDE RS76CG8103S9HL ಇ.ಎಮ್.ಐ ₹4,990
LG 650 Ltrs CONVERTIBLE SIDE BY SIDE REFRIGERATOR WITH PREMIUM GLASS DOOR, SMART INVERTER COMPRESSOR, HYGIENE FRESH+ GL-B257DBM3 ಇ.ಎಮ್.ಐ ₹3,999 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Whirlpool 411L 2 Star Convertible Frost Free Double-Door Refrigerator ಇ.ಎಮ್.ಐ ₹3,733 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Godrej 9 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,208 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
IFB 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,274 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Haier 22ಲೀ ಕನ್‌ವೆಂಕ್ಷನ್ ಮೈಕ್ರೋವೇವ್ ಇ.ಎಮ್.ಐ ₹916
DAIKIN 1.0 TON 3 STAR INVERTER SPLIT AC ಇ.ಎಮ್.ಐ ₹3,249 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
OFFER VALID TILL STOCK LAST | OFFER VALID TILL STOCK LAST
CHIMNEY UPTO 54% OFF KAFF FABER HÄFELE Crompton Prestige BOSCH
WATER PURIFIER UPTO 47% OFF EUREKA FORBES LG BRITA Livpure HAVELLS
MIXER GRINDER UPTO 54% OFF Preethi Greenchef Prestige Butterfly Panasonic BAJAJ
ELECTRIC WATER HEATER UPTO 60% OFF Racold Haier HAVELLS BAJAJ V-GUARD KENSTAR
SONY AUDIO SOUND BAR HT-S20 - 5.1CH, 400W, DOLBY DIGITAL. OFFER PRICE ₹13,990 ಇ.ಎಮ್.ಐ ₹1,166 MRP ₹23,990
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಉತ್ತರಹಳ್ಳಿ 90362 89563 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಭಾರ್ತಿಯಾ ಮಾಲ್ 70900 00981 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633 | ಹೊಸೂರು ರಸ್ತೆ 9035499022
GIRIAS THE CONSUMER DURABLE PEOPLE Since 1971
STORE LOCATOR
165 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA

ಎಚ್‌.ಡಿ. ಕುಮಾರಸ್ವಾಮಿ ರೋಡ್ ಶೋಗೆ ಯದುವೀರ್ ಸಾಥ್ • ಮುಗಿಯದ ಪಕ್ಷಾಂತರ ಪರ್ವ

ಪ್ರಚಾರದ ಭರಾಟೆ, ಒಳ ಏಟಿನ ಭೀತಿ

ಹಳ್ಳಿಗಳಲ್ಲಿ ಅಪ್ಪ–ಮಗನ ಮತಬೇಟೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ(ರಾಮನಗರ): ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಾದ್ಯಂತ ಸೋಮವಾರ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಮತ್ತು ಅವರ ತಂದೆ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಇಬ್ಬರೂ ಒಂದೊಂದು ದಿಕ್ಕಿನಲ್ಲಿ ಮತ ಯಾಚಿಸಿದರು.

ತಾಲ್ಲೂಕಿನ ದೇವರ ಹೊಸಹಳ್ಳಿಯ ಸಂಜೀವರಾಯಸ್ವಾಮಿ ದೇವಸ್ಥಾನದಲ್ಲಿ ಕುಮಾರಸ್ವಾಮಿ ಹಾಗೂ ಹುಣಸನಹಳ್ಳಿಯ ಬಿಸಲಮ್ಮ ದೇವಿಗೆ ನಿಖಿಲ್ ಪೂಜೆ ಸಲ್ಲಿಸಿ ದಿನದ ಪ್ರಚಾರ ಶುರು ಮಾಡಿದರು.

ಕುಮಾರಸ್ವಾಮಿ ಅವರಿಗೆ ಬಿಜೆಪಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಾ.ರಾ. ಮಹೇಶ್ ಹಾಗೂ ನಿಖಿಲ್‌ಗೆ ಪಕ್ಷದ ಸ್ಥಳೀಯ ಮುಖಂಡರು ಸಾಥ್ ನೀಡಿದರು.

ಬೆಳಗ್ಗೆಯಿಂದ ಸಂಜೆವರೆಗೆ 15ಕ್ಕೂ ಹೆಚ್ಚು ಹಳ್ಳಿಗಳಿಗೆ ಭೇಟಿ ನೀಡಿದ ಇಬ್ಬರಿಗೂ ಕಾರ್ಯಕರ್ತರು ಅದ್ದೂರಿ ಸ್ವಾಗತ ನೀಡಿದರು. ಮಹಿಳೆಯರು ಆರತಿ ಎತ್ತಿದರು. ಮುಖಂಡರು ಹೂವಿನಹಾರ ಹಾಕಿ, ಘೋಷಣೆ ಕೂಗಿ ಅಭಿಮಾನ ಮೆರೆದರು. ದೇವಸ್ಥಾನಗಳಿಗೆ ಭೇಟಿ ನೀಡುವ ಜೊತೆಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿದರು.

ಜೆ. ಬ್ಯಾಡರಹಳ್ಳಿ ಗ್ರಾಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ನಿಖಿಲ್ ಮಾಲಾರ್ಪಣೆ ಮಾಡಿ ನಮಸ್ಕರಿಸಿದರು.

ದೇವರಹೊಸಹಳ್ಳಿಯಲ್ಲಿ ಮಹಿಳೆಯೊಬ್ಬರು ಕುಮಾರಸ್ವಾಮಿ ಅವರನ್ನು ಭಾಷಣದ ಮಧ್ಯೆ 'ಅಣ್ಣಾ...' ಎಂದು ಕೂಗುತ್ತಿದ್ದರು. ಆಗ ಎಚ್‌ಡಿಕೆ, 'ನನ್ನ ಹಳೆ ತಂಗಿ ಇವಳು. ಚನ್ನಪಟ್ಟಣಕ್ಕೆ ಬಂದಾಗೆಲ್ಲಾ ಓಡಿ ಬರ್ತಾಳೆ. ಏನವ್ವಾ ನಿಂದು' ಎಂದು ಮಹಿಳೆಯತ್ತ ನೋಡಿ ನಕ್ಕರು.



ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಸೋಮವಾರ ಕೂಡ್ಲೂರಿನಲ್ಲಿ ಪುತ್ರ ನಿಖಿಲ್ ಕುಮಾರಸ್ವಾಮಿ ಪರ ಪ್ರಚಾರ ನಡೆಸಿದರು. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಮುಖಂಡರು ಇದ್ದರು

'ಗೌಡರ ವಿರುದ್ಧ ಟೀಕೆಗೆ ಜನರಿಂದ ತೀರ್ಪು'

'ದೇವೇಗೌಡರ ಗರಡಿಯಲ್ಲಿ ಬೆಳೆದವರೇ ಈಗ ಕೀಳುಮಟ್ಟದ ಭಾಷೆಯಲ್ಲಿ ಅವರನ್ನು ಟೀಕಿಸುತ್ತಿದ್ದಾರೆ. ಮೊಮ್ಮಗನ ಪಟ್ಟಾಭಿಷೇಕಕ್ಕಾಗಿ ಆಂಬುಲೆನ್ಸ್, ಗಾಲಿ ಕುರ್ಚಿಯಲ್ಲಿ ಬಂದು ನಾಟಕವಾಡುತ್ತಾ ಮತ ಕೇಳುತ್ತಾರೆ ಎಂದಿದ್ದಾರೆ. ಅದಕ್ಕೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಕ್ಷೇತ್ರದ ಜನರೇ ಅವರಿಗೆ ತೀರ್ಪು ಕೊಡುತ್ತಾರೆ' ಎಂದು ಕುಮಾರಸ್ವಾಮಿ ದೇವರಹೊಸಹಳ್ಳಿಯಲ್ಲಿ ನಡೆದ ಪ್ರಚಾರ ಭಾಷಣದಲ್ಲಿ ತಿರುಗೇಟು ನೀಡಿದರು.

ತಾತನ ವಿರುದ್ಧದ ಟೀಕೆಗೆ ಕಿಡಿಕಾರಿದ ನಿಖಿಲ್, 'ದೇವೇಗೌಡರ ಕುರಿತು ಹಗುರುವಾಗಿ ಮಾತನಾಡುವುದು ಸರಿಯಲ್ಲ' ಎಂದರು.

'ರಾಜಮನೆತನಕ್ಕೆ ಸರ್ಕಾರ ಕಿರುಕುಳ': 'ರಾಜ್ಯದ ಅಭಿವೃದ್ಧಿಗೆ ದೊಡ್ಡ ಕೊಡುಗೆ ನೀಡಿರುವ ಮೈಸೂರು ರಾಜ ಮನೆತನದ ವಿರುದ್ಧ ಸಿದ್ದರಾಮಯ್ಯ ಸರ್ಕಾರ ದ್ವೇಷ ಸಾಧಿಸುತ್ತಾ ಕಿರುಕುಳ ನೀಡುತ್ತಿದೆ' ಎಂದು ಕುಮಾರಸ್ವಾಮಿ ಆರೋಪಿಸಿದರು.

ಬಿಜೆಪಿಯ 6 ಸದಸ್ಯರು ಕಾಂಗ್ರೆಸ್‌ಗೆ

ಚುನಾವಣೆ ಕಾವು ಏರುತ್ತಿದ್ದಂತೆ ಪಕ್ಷಾಂತರ ಪರ್ವ ಕೂಡ ಜೋರಾಗಿದೆ. ನಗರಸಭೆ ಸದಸ್ಯರಾಗಿರುವ ಬಿಜೆಪಿಯ ಆರು ಸದಸ್ಯರು ಹಾಗೂ ಪಕ್ಷದ ಕೆಲ ಪದಾಧಿಕಾರಿಗಳು ಸೋಮವಾರ ಬಿಜೆಪಿಗೆ ಸಾಮೂಹಿಕ ರಾಜೀನಾಮೆ ಸಲ್ಲಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಅವರನ್ನು ಬೆಂಬಲಿಸಲು ಕಾಂಗ್ರೆಸ್ ಸೇರುವುದಾಗಿ ಅವರು ಘೋಷಿಸಿದರು.

'ನಗರಸಭೆ ಸದಸ್ಯರಾಗಿ ನಾವು ಪಕ್ಷ ಸಂಘಟಿಸುತ್ತಿದ್ದರೂ ಯೋಗೇಶ್ವರ್ ಬೆಂಬಲಿಗರೆಂಬ ಕಾರಣಕ್ಕೆ ನಮ್ಮನ್ನು ಕಡೆಗಣಿಸಿರುವುದರಿಂದ ನಾವು ಪಕ್ಷ ತೊರೆದಿದ್ದೇವೆ' ಎಂದು ಪಕ್ಷ ತೊರೆದವರು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಖಾದ್ರಿ ಮೊಕ್ಕಾಂ

ಪ್ರಜಾವಾಣಿ ವಾರ್ತೆ

ಹಾವೇರಿ: ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಸೈಯದ್ ಅಜ್ಜಂಪೀರ ಖಾದ್ರಿ ಬೆಂಗಳೂರಿನಲ್ಲಿಯೇ ಮೊಕ್ಕಾಂ ಹೂಡಿದ್ದು, ಅವರನ್ನು ಕ್ಷೇತ್ರಕ್ಕೆ ವಾಪಸು ಕಳುಹಿಸುವಂತೆ ಬೆಂಬಲಿಗರು ಒತ್ತಾಯಿಸುತ್ತಿದ್ದಾರೆ. ಶಿಗ್ಗಾವಿಯಲ್ಲಿ ಸೋಮವಾರ ಸಭೆ ನಡೆಸಿದ ಬೆಂಬಲಿಗರು, ಪ್ರತಿಭಟನೆ ಎಚ್ಚರಿಕೆ ಸಹ ನೀಡಿದ್ದಾರೆ.

ಖಾದ್ರಿ ಅವರು ಕ್ಷೇತ್ರಕ್ಕೆ ವಾಪಸು ಬರಲು ಪ್ರಯತ್ನ ನಡೆಸಿದ್ದಾರೆ. ನಾಮಪತ್ರ ವಾಪಸು ಪಡೆಯಲು ಕೊನೆಯ ದಿನವಾದ ಅಕ್ಟೋಬರ್ 30ರಂದು ಕ್ಷೇತ್ರಕ್ಕೆ ಹೋಗಲು ಪಕ್ಷದ ವರಿಷ್ಠರು ತಾಕೀತು ಮಾಡಿದ್ದಾರೆಂದು ಮೂಲಗಳು ಹೇಳಿವೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಖಾದ್ರಿ ಆಪ್ತರು, 'ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲಿಸುವಂತೆ ವರಿಷ್ಠರು, ಖಾದ್ರಿ ಅವರಿಗೆ ಜವಾಬ್ದಾರಿ ನೀಡಿದ್ದಾರೆ. ಆದರೆ, ಅವರು ಏಕೆ ಕ್ಷೇತ್ರಕ್ಕೆ ವಾಪಸು ಬರುತ್ತಿಲ್ಲವೆಂಬುದು ಗೊತ್ತಾಗುತ್ತಿಲ್ಲ' ಎಂದರು.



ನಾಮಪತ್ರ ವಾಪಸ್ ಪಡೆಯುವ ಬಗ್ಗೆ ತೀರ್ಮಾನ ಮಾಡಿಲ್ಲ. ಸಚಿವರಾಗಿರುವ ಜಮೀರ್ ನಿವಾಸದಲ್ಲಿದ್ದೇನೆ. ನನಗೆ ಕಾವಲು ಹಾಕಿದ್ದಾರೆ. ನನ್ನ ಜೊತೆ ಇಬ್ಬರನ್ನು ಬಿಟ್ಟಿದ್ದಾರೆ

ಅಜ್ಜಂಪೀರ್ ಖಾದ್ರಿ, ಕಾಂಗ್ರೆಸ್ ಬಂಡಾಯ ಅಭ್ಯರ್ಥಿ

ಖಾದ್ರಿಯವರನ್ನು ಕ್ಷೇತ್ರಕ್ಕೆ ಕಳುಹಿಸದಿದ್ದರೆ ಪ್ರತಿಭಟನೆ: 'ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಮುಖಂಡ ಸೈಯದ್ ಅಜ್ಜಂಪೀರ್ ಖಾದ್ರಿ ಅವರನ್ನು, ಕ್ಷೇತ್ರಕ್ಕೆ ವಾಪಸು ಕಳುಹಿಸಿಕೊಡಿ' ಎಂದು ಅವರ ಬೆಂಬಲಿಗರು ಆಗ್ರಹಿಸಿದ್ದಾರೆ.

ಪಟ್ಟಣದಲ್ಲಿ ಬೆಂಬಲಿಗರು ಸೋಮವಾರ ದಿಢೀರ್ ಸಭೆ ನಡೆಸಿದರು.

ಕೊಕ್ಕೊ ಆಡಿದ ಭರತ್ ಬೊಮ್ಮಾಯಿ

ಶಿಗ್ಗಾವಿ: ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಅವರು ಪ್ರಚಾರ ಚುರುಕುಗೊಳಿಸಿದ್ದಾರೆ. ಅವರ ಪರ ತಂದೆ ಬಸವರಾಜ ಬೊಮ್ಮಾಯಿ ಹಾಗೂ ತಾಯಿ ಚನ್ನಮ್ಮ ಸಹ ಪ್ರಚಾರದ ಕಣಕ್ಕೆ ಇಳಿದಿದ್ದಾರೆ.

ಕ್ಷೇತ್ರದಲ್ಲಿ ಸೋಮವಾರ ಪ್ರಚಾರ ನಡೆಸಿದ ಭರತ್, ಶಾಲಾ ವಿದ್ಯಾರ್ಥಿಗಳ ಜೊತೆಯಲ್ಲಿ ಕೊಕ್ಕೊ ಆಡಿದರು. ನಂತರ, ಗ್ರಾಮಗಳಲ್ಲಿ ಮತಯಾಚಿಸಿದರು.

ಭರತ್ ಬೊಮ್ಮಾಯಿ ಮಾತನಾಡಿ, 'ಪ್ರತಿ ಗ್ರಾಮಗಳ ಹಿರಿಯರು, ಮುಖಂಡರನ್ನು ಭೇಟಿಯಾಗಿ ಆಶೀರ್ವಾದ ಪಡೆಯುತ್ತಿರುವೆ. ತಂದೆ–ತಾಯಿ ಮಾರ್ಗದರ್ಶನದಂತೆ ಜನರ ಸೇವೆ ಮಾಡಲು ಸಿದ್ಧನಾಗಿರುವೆ. ಜನರ ಅಪಾರ ಬೆಂಬಲವಿದೆ' ಎಂದರು.

ಸುದ್ದಿ 2 ನಿಮಿಷ

ವಿಜಯೇಂದ್ರ ಕೆಳಗಿಳಿಸುವವರೆಗೆ ಪ್ರಚಾರಕ್ಕೆ ಹೋಗಲ್ಲ: ರಮೇಶ

ಬೆಳಗಾವಿ: 'ಬಿ.ವೈ.ವಿಜಯೇಂದ್ರ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಕೆಳಗೆ ಇಳಿಸುವವರೆಗೂ ಯಾವುದೇ ಕಡೆ ಪ್ರಚಾರಕ್ಕೆ ಹೋಗುವುದಿಲ್ಲ' ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಇಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿಜಯೇಂದ್ರ ನನ್ನನ್ನು ಕರೆದರೂ ಹೋಗುವುದಿಲ್ಲ. ಅವರ ಮುಖವನ್ನೂ ನೋಡುವುದಿಲ್ಲ. ಅಷ್ಟಕ್ಕೂ ನನ್ನನ್ನು ಪ್ರಚಾರಕ್ಕೆ ಕರೆಯಲು ವಿಜಯೇಂದ್ರ ಯಾರು' ಎಂದರು.

'ಪಕ್ಷದ ಹೈಕಮಾಂಡ್ ಪ್ರಚಾರಕ್ಕೆ ಹೋಗುವಂತೆ ತಿಳಿಸಿದರೆ ಹೋಗುವೆ. ಆದರೆ, ಈವರೆಗೂ ಯಾರೂ ನನ್ನನ್ನು ಪ್ರಚಾರಕ್ಕೆ ಕರೆದಿಲ್ಲ' ಎಂದರು.

'ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಲು ಸಿ.ಪಿ. ಯೋಗೇಶ್ವರ್ ಕಾರಣ' ಎಂಬ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆಗೆ ಪ್ರತಿಕ್ರಿಯಿಸಿದ ರಮೇಶ, 'ಇದು ಖಂಡಿತ ನಿಜ. ನಾನು, ಸಿ.ಪಿ.ಯೋಗೇಶ್ವರ್ ಮತ್ತು ಎನ್.ಆರ್.ಸಂತೋಷ ಮುಂಚೂಣಿಯಲ್ಲಿ ಇದ್ದೆವು. ಸಮ್ಮಿಶ್ರ ಸರ್ಕಾರದಲ್ಲಿ ನಾನು, ಆರ್.ಶಂಕರ ಸಚಿವರಾದೆವು. ಆದರೂ ಸರ್ಕಾರ ಪತನಗೊಳಿಸಿದ್ದೆವು. ಇಷ್ಟೆಲ್ಲ ಮಾಡಿದ ಯೋಗೇಶ್ವರ್ ಅವರನ್ನು ಪಕ್ಷದಲ್ಲಿ ಉಳಿಸಿಕೊಳ್ಳುವ ಯತ್ನ ಮಾಡಿದರೂ ಸಾಧ್ಯವಾಗಲಿಲ್ಲ' ಎಂದರು.



'ಹೆಣ್ಣು ಮಕ್ಕಳು ತಾಕತ್ತು, ದಮ್ಮು ಬಗ್ಗೆ ಮಾತನಾಡುತ್ತಾರೆಯೇ?'

ಬೆಂಗಳೂರು: 'ತಾಕತ್ತು, ದಮ್ಮು ಬಗ್ಗೆ ಯಾರಾದರೂ ಹೆಣ್ಣು ಮಕ್ಕಳು ಮಾತನಾಡುತ್ತಾರೆಯೇ' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಪ್ರಶ್ನಿಸಿದರು.

ವಿಧಾನಸೌಧದಲ್ಲಿ ಸೋಮವಾರ ಮಾತನಾಡಿದ ಅವರು, 'ನಮ್ಮ ಸಂಸ್ಕೃತಿಯಲ್ಲಿ ಹೆಣ್ಣು ಮಕ್ಕಳು ಮಾತನಾಡುವ ಭಾಷೆ ಇದಲ್ಲ' ಎಂದರು. ಬೆಳಗಾವಿಯಲ್ಲಿ ಭಾನುವಾರ ಮಾತನಾಡಿದ್ದ ಶೋಭಾ ಕರಂದ್ಲಾಜೆ, 'ತಾಕತ್ತಿದ್ರೆ ನನ್ನ ಅಕ್ರಮದ ದಾಖಲೆ ಬಿಡುಗಡೆಗೊಳಿಸಿ' ಎಂದು ಬೈರತಿ ಸುರೇಶ್‌ಗೆ ಸವಾಲು ಹಾಕಿದ್ದರು.

'ಸುಸಂಸ್ಕೃತ ಹೆಣ್ಣು ಮಕ್ಕಳು ಎಂದರೆ ಕ್ಷಮೆಯಾಧರಿತ್ರಿ, ಭಾರತಾಂಬೆ ಎಂದು ಗೌರವ ಕೊಡುತ್ತೇವೆ. ಆಯಮ್ಮನ ಬಾಯಲ್ಲಿ ಬರುವ ಮಾತಾ ಇದು?' ಎಂದು ಸುರೇಶ್ ವಾಗ್ದಾಳಿ ನಡೆಸಿದರು.

'ಅವರ (ಶೋಭಾ) ವಿರುದ್ಧದ ದಾಖಲೆಗಳನ್ನು ಬಿಡುಗಡೆ ಮಾಡುತ್ತೇನೆ' ಎಂದೂ ಸುರೇಶ್ ಹೇಳಿದರು.

ಕ್ರೇನ್ ಚಾಲಕನ ವಿರುದ್ಧ ಪ್ರಕರಣ

ಬಳ್ಳಾರಿ: ನಾಮಪತ್ರ ಸಲ್ಲಿಕೆ ವೇಳೆ ಬಿಜೆಪಿಯ ಸಂಡೂರು ಕ್ಷೇತ್ರದ ಅಭ್ಯರ್ಥಿ ಮತ್ತು ನಾಯಕರಿಗೆ ಕ್ರೇನ್ ಮೂಲಕ ಹೂವಿನ ಬೃಹತ್ ಹಾರ ಹಾಕಿದ್ದಕ್ಕೆ ಕ್ರೇನ್‌ನ ಚಾಲಕನ ವಿರುದ್ಧ ಸಂಡೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಡೂರು ತಾಲೂಕು ಕಾರ್ಯನಿರ್ವಾಹಕ ದಂಡಾಧಿಕಾರಿ ಐಕಲ್ ಸಂತೋಷ್ ನೀಡಿದ ದೂರು ಆಧರಿಸಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

'ಬಿಜೆಪಿ ನಾಮಪತ್ರ ಸಲ್ಲಿಕೆಗೆ ಚುನಾವಣಾಧಿಕಾರಿ ಅನುಮತಿ ಪತ್ರ ನೀಡಿದ್ದರು. ಆದರೆ, ಕ್ರೇನ್‌ಗೆ ಅನುಮತಿ ನೀಡಿರಲಿಲ್ಲ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಸರ್ವೋಚ್ಚ ನಾಯಕರೂ ಸೋತಿಲ್ಲವೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾರು ಸರ್ವೋಚ್ಚ ನಾಯಕರಾಗಿದ್ದರೂ ಅವರೇ ಸೋತಿಲ್ಲವೇ? ಸೋಲು–ಗೆಲುವನ್ನು ಜನತೆ ಆ ಕ್ಷಣ ತೀರ್ಮಾನ ಮಾಡುತ್ತಾರೆ' ಎಂದು ಸಚಿವ ಎನ್. ಚಲುವರಾಯ ಸ್ವಾಮಿ ಹೇಳಿದರು.

ಚನ್ನಪಟ್ಟಣ ಕ್ಷೇತ್ರದಲ್ಲಿ ನಿಖಿಲ್ ಕುಮಾರಸ್ವಾಮಿ ಪರ ಎಚ್‌.ಡಿ. ದೇವೇಗೌಡರು ಪ್ರಚಾರ ಮಾಡುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಅವರು (ದೇವೇಗೌಡರು) ಒಂದು ವಾರವೇ ಪ್ರಚಾರ ಮಾಡಲಿ. ನಾವು ಪ್ರಚಾರ ಮಾಡಬೇಡಿ ಎಂದು ಹೇಳಲು ಆಗುತ್ತದೆಯೇ' ಎಂದು ಪ್ರಶ್ನಿಸಿದರು.



ಚಲುವರಾಯ ಸ್ವಾಮಿ

ಚನ್ನಪಟ್ಟಣದಲ್ಲಿ ಒಕ್ಕಲಿಗ ಮತಗಳನ್ನು ಸೆಳೆಯುವ ಕುರಿತು ಮಾತನಾಡಿದ ಅವರು, 'ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆ, ಸಾಧನೆಗಳ ಮೇಲೆ ನಾವು ಮತ ಕೇಳುತ್ತೇವೆ. 'ಗ್ಯಾರಂಟಿ' ಯೋಜನೆಗಳು ಒಕ್ಕಲಿಗ ಸಮುದಾಯಕ್ಕೂ ತಲುಪುತ್ತಿವೆ' ಎಂದರು.

'ಎಲ್ಲ ಮೂರೂ ಕ್ಷೇತ್ರಗಳನ್ನು ನಾವು ಗೆದ್ದೆ ಗೆಲ್ಲುತ್ತೇವೆ' ಎಂದರು.

3 ಕ್ಷೇತ್ರ: 64 ನಾಮಪತ್ರ ಸ್ವೀಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಚುನಾವಣೆ ನಡೆಯಲಿರುವ ಸಂಡೂರು, ಶಿಗ್ಗಾವಿ, ಚನ್ನಪಟ್ಟಣ ಈ ಮೂರೂ ಕ್ಷೇತ್ರಗಳಿಗೆ ಸಲ್ಲಿಕೆಯಾದ ನಾಮಪತ್ರಗಳ ಪರಿಶೀಲನೆ ಸೋಮವಾರ ನಡೆದಿದ್ದು, ಒಟ್ಟು 64 ನಾಮಪತ್ರಗಳು ಅಂಗೀಕಾರಗೊಂಡಿವೆ.

ಈ ಮೂರೂ ಕ್ಷೇತ್ರಗಳಿಗೆ ಒಟ್ಟು 121 ನಾಮಪತ್ರಗಳು ಸಲ್ಲಿಕೆ ಆಗಿದ್ದವು. ಪರಿಶೀಲನೆಯ ವೇಳೆ 24 ನಾಮಪತ್ರಗಳು ತಿರಸ್ಕೃತಗೊಂಡಿವೆ. ಈ ಪೈಕಿ ಶಿಗ್ಗಾವಿಯಲ್ಲಿ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ನಾಮಪತ್ರ ತಿರಸ್ಕೃತಗೊಂಡಿದೆ. ಇನ್ನೊಬ್ಬ ಬಂಡಾಯ ಅಭ್ಯರ್ಥಿ ಅಜ್ಜಂಪೀರ್ ಖಾದ್ರಿ ನಡೆ ಇನ್ನೂ ನಿಗೂಢವಾಗಿಯೇ ಇದೆ.

ಬಿಜೆಪಿ– ಜೆಡಿಎಸ್ ಮೈತ್ರಿಕೂಟದಿಂದ ಸಂಡೂರು (ಬಂಗಾರು ಹನುಮಂತು) ಮತ್ತು ಶಿಗ್ಗಾವಿಯಿಂದ (ಭರತ್ ಬೊಮ್ಮಾಯಿ) ಬಿಜೆಪಿ ಅಭ್ಯರ್ಥಿಗಳು, ಚನ್ನಪಟ್ಟಣದಲ್ಲಿ ಜೆಡಿಎಸ್ (ನಿಖಿಲ್ ಕುಮಾರಸ್ವಾಮಿ) ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಈ ಮೂರೂ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನಿಂದ ಕ್ರಮವಾಗಿ ಇ. ಅನ್ನಪೂರ್ಣ, ಯಾಸೀರ್ ಅಹ್ಮದ್ ಖಾನ್ ಪಠಾಣ ಮತ್ತು ಸಿ.ಪಿ. ಯೋಗೇಶ್ವರ್ ನಾಮಪತ್ರ ಸಲ್ಲಿಸಿದ್ದಾರೆ.

ಸಂಡೂರಿನಲ್ಲಿ 7, ಶಿಗ್ಗಾವಿ 19, ಚನ್ನಪಟ್ಟಣದಲ್ಲಿ ಅತೀ ಹೆಚ್ಚು 38 ಅಭ್ಯರ್ಥಿಗಳ ನಾಮಪತ್ರಗಳು ಸ್ವೀಕೃತವಾಗಿವೆ. ಈ ಮೂರೂ ಕ್ಷೇತ್ರಗಳಲ್ಲಿ ಒಟ್ಟು 45 ಪಕ್ಷೇತರರು ಮತ್ತು ಮಾನ್ಯತೆ ಪಡೆಯದ ನೋಂದಾಯಿತ 13 ಪಕ್ಷಗಳ ಅಭ್ಯರ್ಥಿಗಳ ನಾಮಪತ್ರಗಳೂ ಅಂಗೀಕಾರಗೊಂಡಿವೆ. ನಾಮಪತ್ರ ಹಿಂಪಡೆಯಲು ಇದೇ 30 ಕೊನೆಯ ದಿನ.

'ಕಾಂಗ್ರೆಸ್‌ನವರು ಬರಿಗೈಯಲ್ಲಿ ಬರುತ್ತಾರಾ'

ಪ್ರಜಾವಾಣಿ ವಾರ್ತೆ

ಶಿಗ್ಗಾವಿ: ಕಾಂಗ್ರೆಸ್ ಪಕ್ಷದಲ್ಲಿ ದೊಡ್ಡ ಪ್ರಮಾಣದಲ್ಲಿ ಹಣ–ಹೆಂಡ ಖರ್ಚು ಮಾಡುವವರಿದ್ದಾರೆ. ಹಣ–ಹೆಂಡ ಹೇಗೆ ಬರುತ್ತಿದೆ ಎಂಬುದು ನಮಗೆ ಗೊತ್ತಿದೆ. ಕಾಂಗ್ರೆಸ್‌ನವರು ಚುನಾವಣೆಗೆ ಬರಿಗೈಯಲ್ಲಿ ಬರುತ್ತಾರಾ ಎಂದು ಸಂಸದ ಬಸವರಾಜ ಬೊಮ್ಮಾಯಿ ಅವರು ಪ್ರಶ್ನಿಸಿದರು.

ಸೋಮವಾರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಪರ ಪ್ರಚಾರ ಕಾರ್ಯದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಾಂಗ್ರೆಸ್‌ನಿಂದ ಬಂದವರಿಗೂ ಟಿಕೆಟ್ • ಫಡಣವೀಸ್ ಅವರ ಆಪ್ತ ಸಹಾಯಕನೂ ಅಭ್ಯರ್ಥಿ

ಮಹಾರಾಷ್ಟ್ರ: ಬಿಜೆಪಿ 3ನೇ ಪಟ್ಟಿಯಲ್ಲಿ 25 ಹೆಸರು

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವ 25 ಅಭ್ಯರ್ಥಿಗಳ ಹೆಸರಿರುವ ಮೂರನೇ ಪಟ್ಟಿಯನ್ನು ಬಿಜೆಪಿ ಸೋಮವಾರ ಬಿಡುಗಡೆಗೊಳಿಸಿದೆ.

ಕಾಂಗ್ರೆಸ್‌ನಿಂದ ಪಕ್ಷಾಂತರವಾಗಿರುವ ಇಬ್ಬರು ನಾಯಕರಿಗೆ ಮತ್ತು ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ಆಪ್ತ ಸಹಾಯಕನಿಗೆ ಮೂರನೇ ಪಟ್ಟಿಯಲ್ಲಿ ಸ್ಥಾನ ಲಭಿಸಿದೆ.

ಒಟ್ಟು 288 ಕ್ಷೇತ್ರಗಳಿಗೆ ನವೆಂಬರ್ 20ರಂದು ಮತದಾನ ನಡೆಯಲಿದ್ದು, ಬಿಜೆಪಿ ಈವರೆಗೆ ಒಟ್ಟು 146 ಅಭ್ಯರ್ಥಿಗಳ ಹೆಸರನ್ನು ಘೋಷಿಸಿದೆ.

ಇತ್ತೀಚೆಗೆ ಬಿಜೆಪಿ ಸೇರಿರುವ ಜಿತೇಶ್ ಅಂತಪುರಕರ್ ಅವರು ದೇಗಲೂರಿನಿಂದ ಕಣಕ್ಕಿಳಿಯಲ್ಲಿದ್ದಾರೆ. ಕಾಂಗ್ರೆಸ್ ಹಿರಿಯ ನಾಯಕ ಶಿವರಾಜ್ ಪಾಟೀಲ್ ಅವರ ಸೊಸೆ ಅರ್ಚನಾ ಪಾಟೀಲ್ ಅವರು ಲಾತೂರ್ ನಗರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದಾರೆ.

ಹಲವು ವರ್ಷಗಳಿಂದ ಫಡಣವೀಸ್ ಆಪ್ತ ಸಹಾಯಕರಾಗಿರುವ ಸುಮೀತ್ ವಾಂಖೆಡೆ ಅವರಿಗೆ ಅರ್ವಿ ಕ್ಷೇತ್ರದ ಟಿಕೆಟ್ ಲಭಿಸಿದೆ.

ಬೊರಿವಲಿ ಶಾಸಕ ಸುನಿಲ್ ರಾಣೆ ಅವರಿಗೆ ಕೋಕ್ ನೀಡಿರುವ ಬಿಜೆಪಿ, ಅವರ ಬದಲಿಗೆ ಸಂಜಯ್ ಉಪಾಧ್ಯಾಯ ಅವರನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ ರಂಜಿತ್ ದೇಶ್‌ಮುಖ್ ಅವರು ಸಾವನೇರ್‌ನಿಂದ ಸ್ಪರ್ಧಿಸಲಿದ್ದಾರೆ.

ಬಿಜೆಪಿಯ ಮೂರನೇ ಪಟ್ಟಿಯಲ್ಲಿ ನಾಲ್ವರು ಮಹಿಳೆಯರ ಹೆಸರು ಘೋಷಣೆಯಾಗಿದೆ.

ಸಿ.ಎಂ ಶಿಂದೆ ನಾಮಪತ್ರ ಸಲ್ಲಿಕೆ



ಠಾಣೆ (ಪಿಟಿಐ): ಶಿವಸೇನಾ (ಶಿಂದೆ ಬಣ) ಮುಖ್ಯಸ್ಥರೂ ಆಗಿರುವ ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಠಾಣೆಯ ಕೋಪರಿ– ಪಚ್‌ಪಾಖಡಿ ಕ್ಷೇತ್ರದ ಅಭ್ಯರ್ಥಿಯಾಗಿ ಸೋಮವಾರ ನಾಮಪತ್ರ ಸಲ್ಲಿಸಿದರು.

ಇದಕ್ಕೂ ಮುನ್ನ ಅವರು ತನ್ನ ರಾಜಕೀಯ ಗುರು ದಿವಂಗತ್ ಆನಂದ್ ದಿಘೆ ಅವರಿಗೆ ನಮನ ಸಲ್ಲಿಸಿದರು. ಬಳಿಕ ರೋಡ್ ಶೋ ನಡೆಸಿದರು.

ಶಿವಸೇನಾ (ಶಿಂದೆ ಬಣ), ಎನ್‌ಸಿಪಿ (ಅಜಿತ್ ಪವಾರ್ ಬಣ) ಪ್ರಮುಖ ನಾಯಕರು, ಆರ್‌ಪಿಐ (ಎ) ನಾಯಕರಾದ ಕೇಂದ್ರ ಸಚಿವ ರಾಮದಾಸ್ ಅಠವಳೆ ಅವರು ಶಿಂದೆ ಜತೆಗಿದ್ದರು.

ಶಿಂದೆ ಅವರು ಶಿವಸೇನಾ (ಯುಬಿಟಿ) ಅಭ್ಯರ್ಥಿ ಕೇದಾರ್ ದಿಘೆ ಅವರನ್ನು ಎದುರಿಸಲಿದ್ದಾರೆ. ಕೇದಾರ್ ಅವರು ಆನಂದ್ ದಿಘೆ ಅವರ ಸೋದರಳಿಯ.

ಅಜಿತ್ ಪವಾರ್ ನಾಮಪತ್ರ ಸಲ್ಲಿಕೆ

ಪುಣೆ (ಪಿಟಿಐ): ಎನ್‌ಸಿಪಿ ನಾಯಕರೂ ಆದ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರು ಬಾರಾಮತಿ ಕ್ಷೇತ್ರದಿಂದ ಸೋಮವಾರ ನಾಮಪತ್ರ ಸಲ್ಲಿಸಿದರು.

ತಮ್ಮ ಬಲ ಪ್ರದರ್ಶನ ತೋರುತ್ತಾ ಭಾರಿ ಬೆಂಬಲಿಗರ ರ್‍ಯಾಲಿಯಲ್ಲಿ ತಹಶೀಲ್ದಾರ್ ಕಚೇರಿಗೆ ಆಗಮಿಸಿದ ಅಜಿತ್ ಪವಾರ್ ನಾಮಪತ್ರ ಸಲ್ಲಿಸಿದರು. ಅವರೊಂದಿಗೆ ಮಕ್ಕಳಾದ ಪಾರ್ಥ ಪವಾರ್ ಮತ್ತು ಜಯ್ ಪವಾರ್ ಕೂಡ ಇದ್ದರು.



ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರು ಬಾರಾಮತಿ ಕ್ಷೇತ್ರದಿಂದ ಸೋಮವಾರ ನಾಮಪತ್ರ ಸಲ್ಲಿಸಿದರು. ಮಕ್ಕಳಾದ ಪಾರ್ಥ ಪವಾರ್ ಮತ್ತು ಜಯ್ ಪವಾರ್ ಕೂಡ ಇದ್ದರು

ಬಾರಾಮತಿ ಕ್ಷೇತ್ರದಿಂದ ಅಜಿತ್ ಪವಾರ್ ಸೋದರಳಿಯ ಎನ್‌ಸಿಪಿ (ಎಸ್‌ಪಿ) ಅಭ್ಯರ್ಥಿ ಯುಗೇಂದ್ರ ಪವಾರ್ ಅವರು ಕೂಡ ಸ್ಪರ್ಧಿಸುತ್ತಿದ್ದಾರೆ. ಅಜಿತ್ ಪವಾರ್ ಅವರಿಗಿಂತಲೂ ಮುನ್ನ, ಕಡಿಮೆ ಅಭಿಮಾನಿಗಳ ಜತೆಯಲ್ಲಿ ಯುಗೇಂದ್ರ ಪವಾರ್ ನಾಮಪತ್ರ ಸಲ್ಲಿಸಿದರು. ಯುಗೇಂದ್ರ ಅವರೊಂದಿಗೆ ಎನ್‌ಸಿಪಿ (ಎಸ್‌ಪಿ) ಅಧ್ಯಕ್ಷ ಶರದ್ ಪವಾರ್ ಹಾಗೂ ಅವರ ಪುತ್ರಿ, ಬಾರಾಮತಿ ಲೋಕಸಭೆ ಕ್ಷೇತ್ರದ ಸಂಸದೆ ಸುಪ್ರಿಯಾ ಸುಳೆ ಇದ್ದರು

ಅನೀಸ್ ಅಹ್ಮದ್ ವಿಬಿಎ ಸೇರ್ಪಡೆ

ಮುಂಬೈ (ಪಿಟಿಐ): ಮಾಜಿ ಸಚಿವ ಮತ್ತು ಕಾಂಗ್ರೆಸ್ ನಾಯಕ ಅನೀಸ್ ಅಹ್ಮದ್ ಸೋಮವಾರ ಮುಂಬೈನಲ್ಲಿ ವಂಚಿತ್ ಬಹುಜನ ಅಘಾಡಿ (ವಿಬಿಎ) ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

ಪಕ್ಷದ ಮುಖ್ಯಸ್ಥ ಪ್ರಕಾಶ್ ಅಂಬೇಡ್ಕರ್ ಅವರ ಸಮ್ಮುಖದಲ್ಲಿ ಸೇರ್ಪಡೆಯಾದ ಅಹ್ಮದ್ ಅವರನ್ನು ಮಹಾರಾಷ್ಟ್ರ ಚುನಾವಣೆಯಲ್ಲಿ ನಾಗ್ಪುರ ಸೆಂಟ್ರಲ್ ಕ್ಷೇತ್ರದಿಂದ ಸ್ಪರ್ಧಿಸುವ ವಿಬಿಎ ಅಭ್ಯರ್ಥಿ ಎಂದು ಘೋಷಿಸಲಾಯಿತು.

'ನಾನು 15 ವರ್ಷಗಳಿಂದ ನಾಗ್ಪುರ ಸೆಂಟ್ರಲ್ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದೇನೆ. ಮುಸ್ಲಿಂ, ತೆಲಿ ಮತ್ತು ದಲಿತ ಸಮುದಾಯಕ್ಕೆ ಯಾವುದೇ ಪ್ರಾತಿನಿಧ್ಯ ನೀಡದೆ ಕಾಂಗ್ರೆಸ್ ವಿದರ್ಭ ಪ್ರದೇಶದಲ್ಲಿ ಕೆಲವು ಟಿಕೆಟ್‌ಗಳನ್ನು ಮಾರಾಟ ಮಾಡಿರುವುದನ್ನು ಗಮನಿಸಿದ್ದೇನೆ. ಸಾಮಾಜಿಕ ನ್ಯಾಯ ಒದಗಿಸುವಲ್ಲಿ ವಿಫಲವಾದ ಕಾರಣ ನಾನು ಕಾಂಗ್ರೆಸ್ ತೊರೆಯಲು ನಿರ್ಧರಿಸಿದೆ' ಎಂದು ಅಹ್ಮದ್ ತಿಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಪ್ರಕಾಶ್ ಅಂಬೇಡ್ಕರ್, 'ವಿದರ್ಭ ಪ್ರದೇಶದಲ್ಲಿ ಕಾಂಗ್ರೆಸ್ ಕುಂಬಿಗಳಿಗೆ ಟಿಕೆಟ್ ನೀಡಿ ಇತರ ಸಮುದಾಯಗಳನ್ನು ಕಡೆಗಣಿಸಿದೆ' ಎಂದು ಹೇಳಿದರು.

ಔತಣಕೂಟದಲ್ಲಿ ಮಾದಕವಸ್ತು ಬಳಕೆ; ರಾಜಕೀಯ ವಿವಾದ

ಪ್ರಜಾವಾಣಿ ವಾರ್ತೆ



ಕೆ.ಟಿ. ರಾಮರಾವ್

ಹೈದರಾಬಾದ್: ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್ ಅವರ ಸೋದರ ಸಂಬಂಧಿಯಾದ ಉದ್ಯಮಿ ರಾಜ್ ಪಾಕಾಲ ಅವರು ದೀಪಾವಳಿ ಪ್ರಯುಕ್ತ ಆಯೋಜಿಸಿದ್ದ ಔತಣಕೂಟವು ತೆಲಂಗಾಣದಲ್ಲಿ ವಿವಾದ ಸೃಷ್ಟಿಸಿದೆ. ಇದು ತೆಲಂಗಾಣದ ಆಡಳಿತಾರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷ ಬಿಆರ್‌ಎಸ್ ನಾಯಕರ ನಡುವೆ ಆರೋಪ– ಪ್ರತ್ಯಾರೋಪಕ್ಕೂ ಕಾರಣವಾಗಿದೆ.

ರಾಜ್ ಪಾಕಾಲ ಹೈದರಾಬಾದ್‌ನ ಹೊರವಲಯದಲ್ಲಿರುವ ತಮ್ಮ ನಿವಾಸದಲ್ಲಿ ಅ.26ರ ತಡರಾತ್ರಿ ಔತಣಕೂಟ ಆಯೋಜಿಸಿದ್ದರು. ಇದರಲ್ಲಿ ಮಾದಕವಸ್ತು ಹಾಗೂ ಅನುಮತಿ ಪಡೆಯದೆಯೇ ವಿದೇಶಿ ಮದ್ಯ ಬಳಸಲಾಗಿದೆ. ಇದೊಂದು 'ರೇವ್ ಪಾರ್ಟಿ' ಎಂದು ಕಾಂಗ್ರೆಸ್ ಆರೋಪಿಸಿದೆ. ಆದರೆ, ಇದನ್ನು ಕೆ.ಟಿ. ರಾಮರಾವ್ ಅಲ್ಲಗಳೆದಿದ್ದಾರೆ.

ಕೂಟದಲ್ಲಿ ಭಾಗಿಯಾಗಿದ್ದ ಒಬ್ಬರ ದೇಹದಲ್ಲಿ ಕೊಕೇನ್ ಅಂಶ ಪತ್ತೆಯಾಗಿದ್ದು, ವಿಚಾರಣೆಗೆ ಹಾಜರಾಗಲು ರಾಜ್ ಪಾಕಾಲ ಅವರಿಗೆ ನೋಟಿಸ್ ನೀಡಲಾಗಿದೆ. ಈ ಮಧ್ಯೆ, ಪಾಕಾಲ ಅವರು ತೆಲಂಗಾಣ ಹೈಕೋರ್ಟ್‌ಗೆ ಸೋಮವಾರ ತುರ್ತು ಅರ್ಜಿ ಸಲ್ಲಿಸಿದ್ದಾರೆ. ಪಾಕಾಲ ಅವರನ್ನು ಬಂಧಿಸದಂತೆ ಕೋರ್ಟ್, ಪೊಲೀಸರಿಗೆ ನಿರ್ದೇಶನ ನೀಡಿದೆ. ವಿಚಾರಣೆಗೆ ಸಹಕರಿಸಲು ಅರ್ಜಿದಾರರಿಗೂ ಸೂಚಿಸಿದೆ.

ಪ್ರಕರಣ ದಾಖಲು: ಔತಣಕೂಟದ ಮೇಲೆ ತೆಲಂಗಾಣ ಪೊಲೀಸ್ ಹಾಗೂ ಅಬಕಾರಿ ಅಧಿಕಾರಿಗಳು ಜಂಟಿ ದಾಳಿ ನಡೆಸಿ, ಅಪಾರ ಮದ್ಯ ಹಾಗೂ ಜೂಜಾಟದ ಕಿಟ್‌ಗಳನ್ನು ವಶಪಡಿಸಿಕೊಂಡಿದ್ದರು. 21 ಪುರುಷರನ್ನು ಮಾದಕವಸ್ತು ಪರೀಕ್ಷೆಗೆ ಒಳಪಡಿಸಿದ್ದು, ಅಮೆರಿಕ ನಿವಾಸಿ ವಿಜಯ್ ಮದ್ದೂರಿ ಅವರ ದೇಹದಲ್ಲಿ ಕೊಕೇನ್ ಅಂಶ ಪತ್ತೆಯಾಗಿದೆ. ಹೈದರಾಬಾದ್‌ನ ಮೋಕಿಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಾರ್ಖಂಡ್: ಬಿಜೆಪಿ 2ನೇ ಪಟ್ಟಿ ಬಿಡುಗಡೆ

ರಾಂಚಿ (ಪಿಟಿಐ): ಜಾರ್ಖಂಡ್ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಬಿಜೆಪಿ ಸೋಮವಾರ ಬಿಡುಗಡೆ ಮಾಡಿದೆ.

ಬರ್ಹೈತ್ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ವಿರುದ್ಧ ಗಮಾಲಿಯೆಲ್ ಹೆಂಬ್ರಮ್ ಅವರನ್ನು ಕಣಕ್ಕಿಳಿಸಿದೆ.

ಟುಂಡಿ ಕ್ಷೇತ್ರದಿಂದ ವಿಕಾಸ್ ಮೆಹತೊ ಅವರಿಗೆ ಟಿಕೆಟ್ ನೀಡಿದೆ. ಬಿಜೆಪಿಯು ಮೊದಲ ಪಟ್ಟಿಯಲ್ಲಿ 66 ಅಭ್ಯರ್ಥಿಗಳ ಹೆಸರನ್ನು ಬಹಿರಂಗಪಡಿಸಿತ್ತು. ಜಾರ್ಖಂಡ್ ವಿಧಾನಸಭೆಯ ಒಟ್ಟು 81 ಕ್ಷೇತ್ರಗಳ ಪೈಕಿ 68 ಕ್ಷೇತ್ರಗಳಲ್ಲಿ ಬಿಜೆಪಿಯು ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ. ಉಳಿದವುಗಳನ್ನು ಮಿತ್ರಪಕ್ಷಗಳಿಗೆ ಬಿಟ್ಟುಕೊಡಲಿದೆ.

'ಮಹಾಯುತಿಯನ್ನು ಕಿತ್ತೊಗೆಯೋಣ'

ಲಖನೌ (ಪಿಟಿಐ): ಮಹಾರಾಷ್ಟ್ರದ ವಿಧಾನಸಭೆ ಚುನಾವಣೆಯಲ್ಲಿ ಮಹಾಯುತಿ ಮೈತ್ರಿಕೂಟವನ್ನು ಕಿತ್ತೊಗೆಯಲು ಎಲ್ಲರೂ ಒಟ್ಟಾಗಿ ಕಾರ್ಯತಂತ್ರ ರೂಪಿಸಬೇಕು ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಸೋಮವಾರ 'ಎಕ್ಸ್' ಮೂಲಕ ಕರೆ ನೀಡಿದ್ದಾರೆ

ಕೇರಳದ ವಯನಾಡ್ ಲೋಕಸಭೆ ಕ್ಷೇತ್ರದ ಉಪಚುನಾವಣೆ

ಬಿಜೆಪಿ ವಿರುದ್ಧ ಪ್ರಿಯಾಂಕಾ ವಾಗ್ದಾಳಿ

ವಯನಾಡ್, ಕೇರಳ (ಪಿಟಿಐ): 'ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರವು ಸಂವಿಧಾನದ ಮೌಲ್ಯಗಳನ್ನು ಬುಡಮೇಲು ಮಾಡುತ್ತಿದೆ' ಎಂದು ವಯನಾಡು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಆರೋಪಿಸಿದ್ದಾರೆ.

ಉಪಚುನಾವಣೆ ಸಂಬಂಧ ಮೀನಂಗಡಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಮಣಿಪುರ ಹಿಂಸಾಚಾರವು 'ಯೋಜನಾಬದ್ಧ ದಾಳಿ'ಯಾಗಿದೆ. ದೇಶದಾದ್ಯಂತ ಅಲ್ಪಸಂಖ್ಯಾತರ ಮೇಲೂ ನಿರಂತರ ದಾಳಿಗಳು ನಡೆಯುತ್ತಿವೆ' ಎಂದು ಆರೋಪಿಸಿದರು.

'ಈ ಸರ್ಕಾರವು ಸಮಾಜದ ನಡುವೆ ಸಿಟ್ಟು, ದ್ವೇಷ, ಅಸಹನೆಯನ್ನು ಪದೇ ಪದೇ ಹರಡುತ್ತಿದೆ' ಎಂದು ದೂರಿದ ಅವರು, 'ಪ್ರಧಾನಿ ನರೇಂದ್ರ ಮೋದಿ ತಮ್ಮ ಸ್ನೇಹಿತರಿಗೆ ಅನುಕೂಲ ಆಗುವಂತಹ ನೀತಿಗಳನ್ನು ಒಂದಾದ ಮೇಲೆ ಒಂದರಂತೆ ಜಾರಿಗೆ ತರುತ್ತಿದ್ದಾರೆ, ಬಡವರಿಗಾಗಿ ಅಲ್ಲ' ಎಂದರು.

ಅ.22ರಂದು ನಾಮಪತ್ರ ಸಲ್ಲಿಸಿದ ಬಳಿಕ ಲೋಕಸಭಾ ಕ್ಷೇತ್ರಕ್ಕೆ ಪ್ರಿಯಾಂಕಾ ಗಾಂಧಿ ಎರಡನೇ ಬಾರಿ ಭೇಟಿ ನೀಡುತ್ತಿದ್ದಾರೆ.



ವಯನಾಡ್‌ನ ಮೀನಂಗಡಿಯಲ್ಲಿ ಸೋಮವಾರ ಚುನಾವಣಾ ಪ್ರಚಾರ ನಡೆಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ವಿದ್ಯಾರ್ಥಿನಿಯರಿಗೆ ಹಸ್ತಲಾಘವ ನೀಡಿದರು —ಪಿಟಿಐ ಚಿತ್ರ

ಇತ್ತೀಚಿಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಯನಾಡ್, ರಾಯ್‌ಬರೇಲಿ ಕ್ಷೇತ್ರದಿಂದ ಗೆದ್ದಿದ್ದರು. ಬಳಿಕ ವಯನಾಡ್ ಕ್ಷೇತ್ರದ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ತೆರವಾದ ಕ್ಷೇತ್ರಕ್ಕೆ ಉಪಚುನಾವಣೆ ಘೋಷಣೆಯಾಗಿದ್ದು, ನ. 13ರಂದು ಮತದಾನ ನಡೆಯಲಿದೆ.

ಸಿದ್ಧಾಂತ ನಕಲು: ಡಿಎಂಕೆ ವ್ಯಂಗ್ಯ

ಚೆನ್ನೈ (ಪಿಟಿಐ): ನಟ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷವು ನಮ್ಮ ಪಕ್ಷದ ಸಿದ್ಧಾಂತವನ್ನು ನಕಲು ಮಾಡಿದೆ ಎಂದು ಡಿಎಂಕೆ ತಿಳಿಸಿದ್ದು, ಟಿವಿಕೆಯ ತತ್ವಗಳು ವಿವಿಧ ಪಕ್ಷಗಳ ನಿಲುವುಗಳ ಬೆರಕೆಯಾಗಿವೆ ಎಂದು ಎಐಡಿಎಂಕೆ ಹೇಳಿದೆ.

ಭಾನುವಾರ ತಮ್ಮ ಪಕ್ಷದ ಮೊದಲ ಕಾರ್ಯಕ್ರಮದಲ್ಲೇ ಡಿಎಂಕೆ ಮತ್ತು ಅದರ ಕುಟುಂಬ ರಾಜಕೀಯವನ್ನು ವಿಜಯ್ ಗುರಿಯಾಗಿಸಿಕೊಂಡಿದ್ದರು. ಈ ಬಗ್ಗೆ ಮಾತನಾಡಿರುವ ಡಿಎಂಕೆ ನಾಯಕರು, 'ನಮ್ಮ ರಾಜಕೀಯ ಜೀವನದಲ್ಲಿ ಎಷ್ಟೋ ಶತ್ರುಗಳನ್ನು ಕಂಡಿದ್ದು, ಇನ್ನೂ ಬಲಿಷ್ಠವಾಗಿಯೇ ಉಳಿಯಲಿದ್ದೇವೆ' ಎಂದು ತಿಳಿಸಿದ್ದಾರೆ.

'ನಮ್ಮ ನೀತಿಗಳನ್ನು ಅವರು (ವಿಜಯ್) ನಕಲು ಮಾಡುತ್ತಿದ್ದಾರೆ. ನಾವು ಈಗಾಗಲೇ ಹೇಳಿರುವುದನ್ನೇ ಅವರು ಹೇಳುತ್ತಿದ್ದಾರೆ' ಎಂದು ಡಿಎಂಕೆ ನಾಯಕ ಟಿಕೆಎಸ್ ಇಳಂಗೋವನ್ ಹೇಳಿದ್ದಾರೆ.

'ಇದು ಅವರ ಮೊದಲ ಸಮ್ಮೇಳನ, ಮುಂದೆ ನೋಡೋಣ. ನಾವು ಅದೆಷ್ಟೋ ಪಕ್ಷಗಳನ್ನು ನೋಡಿದ್ದೇವೆ. ಜನರ ಸಮಸ್ಯೆಗಳಿಗಾಗಿ ಹೋರಾಡಿ ಡಿಎಂಕೆ ನಾಯಕರು ಜೈಲಿಗೆ ಹೋಗಿದ್ದಾರೆ. ನಮ್ಮ ಪಕ್ಷ ಹಲವು ಚುನಾವಣೆಗಳನ್ನು ಸೋತಿದ್ದರೂ ಬಲಿಷ್ಠವಾಗಿಯೇ ಉಳಿದಿದೆ. ವಿಜಯ್ ಪಕ್ಷವು ರಾಜಕೀಯಕ್ಕೆ ಬಂದ ಕೆಲವೇ ದಿನಗಳಲ್ಲಿ ಅಧಿಕಾರಕ್ಕೇರುವ ಆಕಾಂಕ್ಷೆ ಹೊಂದಿದೆ. ಆದರೆ, ಜನರಿಗಾಗಿ ಹೋರಾಡುವ ಮೂಲಕ ಡಿಎಂಕೆ ಬೆಳೆಸಲಾಗಿದೆ. 'ಇದೇ ಡಿಎಂಕೆ ಮತ್ತು ಇತರೆ ಪಕ್ಷಗಳ ನಡುವಿನ ವ್ಯತ್ಯಾಸ. ನಾವು ಬಲಿಷ್ಠವಾಗಿದ್ದು, ಜನರಿಗಾಗಿ ಕೆಲಸ ಮಾಡುತ್ತೇವೆ' ಎಂದು ಇಳಂಗೋವನ್ ಹೇಳಿದ್ದಾರೆ.



ವಿಜಯ್

ಟಿವಿಕೆಯ ಸಿದ್ಧಾಂತ ಹೊಸ ಬಾಟಲಿಗೆ ಹಳೆ ಮದ್ಯ ಹಾಕಿದಂತೆ. ಟಿವಿಕೆ ನಾಯಕ ಹಲವು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. 'ಅವುಗಳನ್ನು ಕಾರ್ಯರೂಪಕ್ಕೆ ತರಲು ಅವರಿಗೆ ನಾವು ಸಮಯ ನೀಡೋಣ' ಎಂದು ಎಐಡಿಎಂಕೆ ವಕ್ತಾರ ಕೋವೈ ಸತ್ಯಮ್ ತಿಳಿಸಿದ್ದಾರೆ.

ಸೈದ್ಧಾಂತಿಕವಾಗಿ ಬಿಜೆಪಿಯು ರಾಷ್ಟ್ರೀಯ ಪಕ್ಷ ಮತ್ತು ನಮ್ಮ ವೋಟ್ ಬ್ಯಾಂಕ್ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ವಿಜಯ್ ಅವರ ಪಕ್ಷವು ದ್ರಾವಿಡ ಪಕ್ಷಗಳ ವೋಟುಗಳನ್ನು ವಿಭಜನೆ ಮಾಡಲಿದೆ. ಇದರಿಂದ ಡಿಎಂಕೆ ಪಕ್ಷವು ದುರ್ಬಲಗೊಳ್ಳಬಹುದು. ದ್ರಾವಿಡ ಸಿದ್ಧಾಂತದ ಬಗ್ಗೆ ಮಾತನಾಡುವ ಮೂಲಕ ಆ ಪಕ್ಷಗಳ ವೋಟುಗಳನ್ನು ವಿಭಜನೆ ಮಾಡುವ ಪ್ರಯತ್ನದಿಂದ ವಿಜಯ್ ನಮಗೆ ಸಹಾಯ ಮಾಡಲಿದ್ದಾರೆ ಎಂದು ಬಿಜೆಪಿ ನಾಯಕ ಎಚ್‌.ರಾಜಾ ಹೇಳಿದ್ದಾರೆ.


'ಉದಯ' ವಿರುದ್ಧ ಪಕ್ಷವು ಕಣಕ್ಕೆ ಇಳಿದಿದೆ. ಇದು ಡಿಎಂಕೆ ನಾಯಕ ಮತ್ತು ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್‌ನ ವಿರುದ್ಧ ಎಂಬ ಸುಳಿವು ನೀಡಿದೆ ಎಂದು ಬಿಜೆಪಿ ನಾಯಕ ತಮಿಳ್‌ಇಸೈ ಸೌಂದರರಾಜನ್ ಹೇಳಿದ್ದಾರೆ.

ತಮಿಳು ರಾಷ್ಟ್ರೀಯವಾದಿ ಹಾಗೂ ನಮ್ ತಮಿಳರ್ ಕಚ್ಚಿಯ (ಎನ್‌ಟಿಕೆ) ನಾಯಕ ಸೀಮನ್ ಅವರು, 'ಟಿವಿಕೆ ಪಕ್ಷವು ಇವಿಆರ್ ಪೆರಿಯಾರ್ ಹಾಗೂ ದ್ರಾವಿಡ ಸಿದ್ಧಾಂತವನ್ನು ಒಪ್ಪಿಕೊಂಡಿದೆ'. ಆದರೆ, ಎನ್‌ಟಿಕೆ ದ್ರಾವಿಡ ಸಿದ್ಧಾಂತ ವನ್ನು ತಿರಸ್ಕರಿಸಿದೆ. ಎನ್‌ಟಿಕೆಯ ರಾಜಕೀಯ ಸ್ಪಷ್ಟ ಸಿದ್ಧಾಂತದ ಮೇಲೆ ನಿಂತಿದೆ. ಯಾರನ್ನೂ ಅವಲಂಬಿಸಿಲ್ಲ. ಟಿವಿಕೆ ಪಕ್ಷವು ಪೆರಿಯಾರ್ ಅವರ ವೈಚಾರಿಕೆಯನ್ನು ಒಪ್ಪುತ್ತದೆ. ಆದರೆ, ಅವರ ನಾಸ್ತಿಕತೆಯನ್ನಲ್ಲ ಎಂದು ಟಿವಿಕೆ ಹೇಳಿದೆ. ಆದರೆ, 'ನಾಸ್ತಿಕತೆಯು ವೈಚಾರಿಕತೆಯ ಭಾಗವೇ ಆಗಿದೆ' ಎಂದು ಹೇಳಿದ್ದಾರೆ.

ಭಾಷಣ ಕೇಳಿದ ಬಳಿಕ ಪ್ರತಿಕ್ರಿಯಿಸುವೆ: 'ನಾನು ವಿಜಯ್ ಅವರ ಭಾಷಣ ಕೇಳಿಲ್ಲ. ಅವರು ಏನು ಹೇಳಿದ್ದಾರೆ ಎಂಬುದನ್ನು ತಿಳಿದುಕೊಂಡ ಬಳಿಕವೇ ಪ್ರತಿಕ್ರಿಯಿಸುತ್ತೇನೆ' ಎಂದು ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರು ಸುದ್ದಿಗಾರರಿಗೆ ತಿಳಿಸಿದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಷೇರುಪೇಟೆ ವಹಿವಾಟು 602



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,180
ಇಂದಿನ ಅಂತ್ಯ	24,339
▲	158
ದಿನದ ಗರಿಷ್ಠ	24,492

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹575
12 ಕ್ಕೆ	₹75
ಮೈಸೂರು	
100ಕ್ಕೆ	₹577

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹206-525

ದ್ವಿತಳಿ (ಬಿ.ವಿ) ₹263-668

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹177

ಆರ್‌ಎಸ್‌ಎಸ್-5 ₹172

ಗುಡ್ ಲಾಟ್ ₹168

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1540 (1520)
ಸೋಯಾ (ರಿಫೈನ್ಡ್)	₹1310 (1300)
ಸೂರ್ಯಕಾಂತಿ (ರಿಫೈನ್ಡ್)	₹1325 (1315)
ಪಾಮೋಲಿನ್	₹1310 (1300)

ವಿನಿಮಯ ದರ

$ ಡಾಲರ್	84.07
£ ಪೌಂಡ್	109.09
€ ಯುರೊ	90.92
¥ ಯೆನ್ (100ಕ್ಕೆ)	55

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹18000
ಎಸಿ	₹11390
ಆರ್‌ಪಿ	₹19000
ಆರ್‌ಸಿ	₹10000

ಸೆನ್ಸೆಕ್ಸ್ 602 ಅಂಶ ಏರಿಕೆ



ಮುಂಬೈ (ಪಿಟಿಐ): ಐಸಿಐಸಿಐ ಬ್ಯಾಂಕ್ ಮತ್ತು ದೇಶೀಯ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಖರೀದಿ ಹೆಚ್ಚಳದಿಂದಾಗಿ ಷೇರು ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಏರಿಕೆಯಾಗಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 602 ಅಂಶ ಏರಿಕೆಯಾಗಿ, 80,005ಕ್ಕೆ ಸ್ಥಿರಗೊಂಡಿತು. ವಹಿವಾಟಿನ ವೇಳೆ 1,137 ಅಂಶ ಹೆಚ್ಚಳವಾಗಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 158 ಅಂಶ ಹೆಚ್ಚಳವಾಗಿ 24,339ಕ್ಕೆ ಸ್ಥಿರಗೊಂಡಿತು.

ಕಚ್ಚಾ ತೈಲದ ಬೆಲೆ ಇಳಿಕೆ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ಸಹ ದೇಶದ ಷೇರು ಸೂಚ್ಯಂಕಗಳ ಏರಿಕೆಗೆ ಸಹಕಾರಿಯಾದವು.

ಐಸಿಐಸಿಐ ಬ್ಯಾಂಕ್, ಜೆಎಸ್‌ಡಬ್ಲ್ಯು ಸ್ಟೀಲ್, ಮಹೀಂದ್ರ ಆ್ಯಂಡ್ ಮಹೀಂದ್ರ, ಅದಾನಿ ಪೋರ್ಟ್ಸ್, ಟಾಟಾ ಸ್ಟೀಲ್, ಸನ್ ಫಾರ್ಮಾ, ಹಿಂದುಸ್ತಾನ್ ಯೂನಿಲಿವರ್, ಟಾಟಾ ಮೋಟರ್ಸ್ ಮತ್ತು ಎಸ್‌ಬಿಐ ಷೇರಿನ ಮೌಲ್ಯ ಏರಿಕೆಯಾಗಿದೆ.

ಎಕ್ಸಿಸ್ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಟೆಕ್ ಮಹೀಂದ್ರ, ಎಚ್‌ಡಿಎಫ್‌ಸಿ ಬ್ಯಾಂಕ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಏಷ್ಯನ್ ಮಾರುಕಟ್ಟೆಯಲ್ಲಿ ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಸಕಾರಾತ್ಮಕ ವಹಿವಾಟು ನಡೆಸಿವೆ.

ದೇಶೀಯ ಸಾಂಸ್ಥಿಕ ಹೂಡಿಕೆದಾರರು ಶುಕ್ರವಾರದ ವಹಿವಾಟಿನಲ್ಲಿ ₹4,159 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಶೇ 5.84ರಷ್ಟು ಇಳಿಕೆಯಾಗಿದೆ. ಪ್ರತಿ ಬ್ಯಾರೆಲ್‌ಗೆ 71.54 ಡಾಲರ್‌ಗೆ (₹6,014) ಕುಸಿದಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	40000-49000
ಹೊಸತು	47296-49709
ಕುಮಟ	
ಚಿಪ್ಪು	23569-26019
ಕೋಕ	6089-22069
ಫ್ಯಾಕ್ಟರಿ	3019-16929
ಹಳೆಚಾಲಿ	37089-39799
ಹೊಸಚಾಲಿ	30869-34199
ಶಿವಮೊಗ್ಗ	
ಬೆಟ್ಟೆ	40130-56300
ಗೊರಬಲು	17009-32509
ರಾಶಿ	35009-51001
ಸರಕು	53199-90800
ಶಿರಸಿ	
ಬೆಟ್ಟೆ	25009-37618
ಬಿಳಿಗೋಟು	20009-30009
ಚಾಲಿ	32479-35336
ರಾಶಿ	40399-43899
ಸಾಗರ	
ಬಿಳಿಗೋಟು	9099-24011
ಚಾಲಿ	20111-32829
ಕೋಕ	8321-18541
ಕೆಂಪುಗೋಟು	13290-30200
ರಾಶಿ	21419-50229
ಸಿಪ್ಪೆಗೋಟು	6099-15370
ಯಲ್ಲಾಪುರ	
ಬಿಳಿಗೋಟು	15699-27810
ಚಾಲಿ	29169-36011
ಕೋಕ	4040-17299
ಕೆಂಪುಗೋಟು	14899-22900
ರಾಶಿ	39789-54599
ತಟ್ಟಿಬೆಟ್ಟೆ	25200-32090

ಏಪ್ರಿಲ್–ಸೆಪ್ಟೆಂಬರ್ ವರದಿ ಬಿಡುಗಡೆಗೊಳಿಸಿದ ಹಣಕಾಸು ಸಚಿವಾಲಯ

‘ದೇಶದ ಆರ್ಥಿಕ ಸಾಧನೆ ತೃಪ್ತಿಕರ’

ನವದೆಹಲಿ (ಪಿಟಿಐ): 2024–25ರ ಹಣಕಾಸು ವರ್ಷದ ಮೊದಲಾರ್ಧದಲ್ಲಿ (ಏಪ್ರಿಲ್–ಸೆಪ್ಟೆಂಬರ್) ದೇಶದ ಆರ್ಥಿಕ ಸಾಧನೆ ತೃಪ್ತಿಕರವಾಗಿದೆ ಎಂದು ಹಣಕಾಸು ಸಚಿವಾಲಯದ ವರದಿ ಸೋಮವಾರ ತಿಳಿಸಿದೆ.

ಭಾರತದ ಆರ್ಥಿಕತೆಯ ಮುನ್ನೋಟವು ಉತ್ತಮವಾಗಿದೆ. ಕೃಷಿ ವಲಯದ ಸಕಾರಾತ್ಮಕತೆ, ಹಬ್ಬದ ಋತುವಿನಿಂದ ಹೆಚ್ಚಿದ ಬೇಡಿಕೆ ಮತ್ತು ಸರ್ಕಾರದ ವೆಚ್ಚದಲ್ಲಿನ ಹೆಚ್ಚಳವು ದೇಶದಲ್ಲಿ ಹೂಡಿಕೆ ಚಟುವಟಿಕೆಯನ್ನು ಉತ್ತೇಜಿಸುತ್ತದೆ ಎಂದು ಹೇಳಿದೆ.

ಪಶ್ಚಿಮ ಏಷ್ಯಾ ಬಿಕ್ಕಟ್ಟು, ಪ್ರಮುಖ ರಾಷ್ಟ್ರಗಳ ವ್ಯಾಪಾರ ನೀತಿ ಬಗ್ಗೆ ಅನಿಶ್ಚಿತತೆಗಳು ಮತ್ತು ಜಾಗತಿಕ ಅಂಶಗಳಿಂದ ಅಪಾಯ ಉಂಟಾಗಬಹುದು ಎಂದು ಹೇಳಿದೆ.

ಹೆಚ್ಚಿನ ಮಳೆ ಮತ್ತು ಜನರು ಹೊಸ ಖರೀದಿಗಳಿಂದ ದೂರವಿರಲು ಒಲವು ತೋರುತ್ತಿರುವುದರಿಂದ ನಗರ ಬೇಡಿಕೆಯು ಇಳಿಕೆಯಾಗಿದೆ. ಎರಡು ತಿಂಗಳು ಇಳಿಕೆ ಕಂಡಿದ್ದ ಚಿಲ್ಲರೆ ಹಣದುಬ್ಬರವು ತರಕಾರಿಗಳ ಬೆಲೆ ಏರಿಕೆಯಿಂದ ಸೆಪ್ಟೆಂಬರ್‌ನಲ್ಲಿ ಏರಿತು. ಆದರೂ, ಕೆಲವು ತರಕಾರಿಗಳ ಬೆಲೆಯ ಏರಿಕೆಯನ್ನು ಹೊರತುಪಡಿಸಿದರೆ, ಹಣದುಬ್ಬರವು ನಿಯಂತ್ರಣದಲ್ಲಿದೆ ಎಂದು ಹೇಳಿದೆ.

ವಿದೇಶಿ ಬಂಡವಾಳ ಹೂಡಿಕೆದಾರರಲ್ಲಿ ಭಾರತದೆಡೆಗಿನ ಮನೋಭಾವವು ಸಕಾರಾತ್ಮಕವಾಗಿದೆ. ಈ ಸಕಾರಾತ್ಮಕ ಭಾವನೆಗಳನ್ನು ದೇಶದಲ್ಲಿ ಬಂಡವಾಳ ಹೂಡಿಕೆಗಳಾಗಿ ಪರಿವರ್ತಿಸಲು, ಬೆಳವಣಿಗೆಯ ವೇಗವನ್ನು ಉಳಿಸಿಕೊಳ್ಳುವುದು ಅಗತ್ಯ. ಆದರೂ, ವಿದೇಶಿ ಹೂಡಿಕೆದಾರರು ಕಳೆದ ತಿಂಗಳು ದೇಶದ ಈಕ್ವಿಟಿಗಳಿಂದ ₹85,790 ಕೋಟಿ ವಾಪಸ್ ತೆಗೆದುಕೊಂಡಿದ್ದಾರೆ.

ಸೆಪ್ಟೆಂಬರ್ ಅಂತ್ಯದ ವೇಳೆಗೆ ವಿದೇಶಿ ವಿನಿಮಯ ಮೀಸಲು ಸಂಗ್ರಹ ₹58.84 ಲಕ್ಷ ಕೋಟಿ (700 ಶತಕೋಟಿ ಡಾಲರ್) ಮೀರಿದೆ. ಇದು 700 ಶತಕೋಟಿ ಡಾಲರ್‌ಗೂ ಹೆಚ್ಚಿನ ಮೀಸಲು ಹೊಂದಿರುವ ಅಗ್ರ ನಾಲ್ಕು ದೇಶಗಳಲ್ಲಿ ಭಾರತವನ್ನು ಒಂದಾಗಿಸಿದೆ.

ನೌಕರರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ಮತ್ತು ನೌಕ್ರಿ ಡಾಟ್ ಕಾಂ ಅಂಕಿ–ಅಂಶಗಳು ಉದ್ಯೋಗ ಸೃಷ್ಟಿಯಲ್ಲಿ ಏರಿಕೆಯನ್ನು ತೋರಿಸುತ್ತಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಪ್ರಗತಿ ಶೇ 6.5ರಿಂದ ಶೇ 7ರ ನಡುವೆ ಬೆಳೆಯುತ್ತದೆ ಎಂದು ವರದಿ ಹೇಳಿದೆ.

ಜಿಡಿಪಿ ಪ್ರಗತಿ ಶೇ 6.7: ನೂಮುರಾ




ಮುಂಬೈ (ಪಿಟಿಐ): ಭಾರತದ ಜಿಡಿಪಿ ಬೆಳವಣಿಗೆ ಮಂದಗೊಂಡಿದೆ ಹಾಗೂ ಆರ್‌ಬಿಐನ ಪ್ರಸಕ್ತ ಹಣಕಾಸು ವರ್ಷದ ಶೇ 7.2ರಷ್ಟು ಜಿಡಿಪಿ ಅಂದಾಜು ಅತಿಯಾದ ಆಶಾವಾದವಾಗಿದೆ ಎಂದು ಜಪಾನ್‌ನ ಬ್ರೋಕಿಂಗ್ ಕಂಪನಿ ನೂಮುರಾ ಹೇಳಿದೆ.

2024–25ರ ಹಣಕಾಸು ವರ್ಷದಲ್ಲಿ ಶೇ 6.7 ಮತ್ತು 2025–26ರಲ್ಲಿ ಶೇ 6.8ರಷ್ಟು ಜಿಡಿಪಿ ಬೆಳವಣಿಗೆ ಆಗಲಿದೆ ಎಂದು ನೂಮುರಾ ಅಂದಾಜಿಸಿದೆ. ಪ್ರಯಾಣಿಕ ವಾಹನಗಳ ಮಾರಾಟದಲ್ಲಿ ಇಳಿಕೆ, ನಗರ ಪ್ರದೇಶದಲ್ಲಿ ಎಫ್‌ಎಂಸಿಜಿ ಕಂಪನಿಗಳ ವಹಿವಾಟು ಕಡಿಮೆ ಆಗಿದೆ ಎಂದು ಹೇಳಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿಯು ಶೇ 7.2ರಷ್ಟು ಪ್ರಗತಿ ಕಾಣಲಿದೆ ಎಂದು ಆರ್‌ಬಿಐ ಅಂದಾಜಿಸಿದೆ.

ಲ್ಯಾಂಬೊರ್ಗಿನಿ ಕಂಪನಿ ವಿರುದ್ಧ ಗೌತಮ್ ಸಿಂಘಾನಿಯಾ ಆಕ್ರೋಶ



ನವದೆಹಲಿ (ಪಿಟಿಐ): ಇಟಲಿಯ ಕಾರು ತಯಾರಿಕಾ ಕಂಪನಿ ಲ್ಯಾಂಬೊರ್ಗಿನಿ, ಗ್ರಾಹಕರ ದೂರುಗಳಿಗೆ ಸ್ಪಂದಿಸದೆ ಅಹಂಕಾರ ತೋರುತ್ತಿದೆ ಎಂದು ರೇಮಂಡ್ ಸಮೂಹದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಗೌತಮ್ ಸಿಂಘಾನಿಯಾ ಆಕ್ರೋಶ ತೋರಿದ್ದಾರೆ.

ಈ ತಿಂಗಳ ಆರಂಭದಲ್ಲಿ ಗೌತಮ್ ಅವರು ತಮ್ಮ ಹೊಸ ಲ್ಯಾಂಬೊರ್ಗಿನಿ ರೆವಲ್ಟೊವನ್ನು ಚಲಾಯಿಸಿಕೊಂಡು ಹೋದಾಗ ಕಾರು ತಾಂತ್ರಿಕ ದೋಷದಿಂದಾಗಿ ಮುಂಬೈನ ಟ್ರಾನ್ಸ್ ಹಾರ್ಬರ್ ಲಿಂಕ್ ಬಳಿ ಕೆಟ್ಟು ನಿಂತಿತು. ಈ ಬಗ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದರು.

ಈ ಬಗ್ಗೆ ಕಂಪನಿ ಪ್ರತಿಕ್ರಿಯಿಸಲಿಲ್ಲ ಎಂದಿರುವ ಅವರು, ಮತ್ತೊಂದು ಪೋಸ್ಟ್ ಹಂಚಿಕೊಂಡು ‘ಲ್ಯಾಂಬೊರ್ಗಿನಿಯ ಭಾರತದ ಮುಖ್ಯಸ್ಥ ಶರದ್ ಅಗರ್ವಾಲ್ ಮತ್ತು ಏಷ್ಯಾ ಮುಖ್ಯಸ್ಥ ಫ್ರಾನ್ಸೆಸ್ಕೊ ಸ್ಕಾರ್ಡಾವೊನಿ ಅವರ ದುರಹಂಕಾರದಿಂದ ನಾನು ಆಘಾತಕ್ಕೊಳಗಾಗಿದ್ದೇನೆ. ಗ್ರಾಹಕರ ಸಮಸ್ಯೆಗಳೇನು ಎಂಬುದನ್ನು ಪರಿಶೀಲಿಸಲು ಯಾರೂ ಸಂಪರ್ಕಿಸಲಿಲ್ಲ. ಭಾರತದ ಮುಖ್ಯಸ್ಥ ಶರದ್ ಅವರು ಕೂಡ ನಿಷ್ಠಾವಂತ ಗ್ರಾಹಕರಿಗೆ ಕನಿಷ್ಠ ಪಕ್ಷ ದೂರವಾಣಿ ಕರೆ ಮಾಡಿ ವಿಚಾರಿಸದಿರುವುದು ಆಘಾತಕಾರಿಯಾಗಿದೆ’ ಎಂದು ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ.

‘ಇದು ಹೊಚ್ಚಹೊಸ ಕಾರು. ಖರೀದಿಸಿದ 15 ದಿನಗಳಲ್ಲೇ ಸಮಸ್ಯೆ ಎದುರಾಗಿದೆ. ಈ ರೀತಿ ಇನ್ನೂ ಎರಡು ಕಾರುಗಳಲ್ಲಿ ದೋಷ ಉಂಟಾಗಿರುವ ಬಗ್ಗೆ ಕೇಳಿದ್ದೇನೆ. ಹೀಗಿದ್ದರೂ ಈ ಕಾರುಗಳು ವಿಶ್ವಾಸಾರ್ಹವೇ’ ಎಂದು ಕೇಳಿದ್ದರು.

ಭಾರತದಲ್ಲಿ ಲ್ಯಾಂಬೊರ್ಗಿನಿ ರೆವಲ್ಟೊ ಬೆಲೆ ಅಂದಾಜು ₹8.89 ಕೋಟಿ ಇದೆ.

ಮುಂಬೈ ಧಾರಣೆ

ಶೇಂಗಾ ಎಣ್ಣೆ (10 ಕೆಜಿಗೆ)

28-10-2024

ಕಚ್ಚಾ (ತೆರಿಗೆ ಬಿಟ್ಟು)	1550 (1530)
ಒಂದು ವಾರದ ಡೆಲಿವರಿ	1545 (1525)
ಪಾಮ್ ವಾರದ ಡೆಲಿವರಿ	1308 (1298)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1250)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ ₹12500-13500

ತಿಪಟೂರು ₹13000-14100

ಸಂಕ್ಷಿಪ್ತ ಸುದ್ದಿ

ಪಿಎನ್‌ಬಿ ಲಾಭ ₹4,306 ಕೋಟಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) 2024–25ರ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹4,306 ಕೋಟಿ ನಿವ್ವಳ ಲಾಭ ಗಳಿಸಿದೆ.

2023–24ರ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹1,756 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣ ಎರಡು ಪಟ್ಟಿಗಿಂತಲೂ ಹೆಚ್ಚು ಹೆಚ್ಚಳವಾಗಿದೆ ಎಂದು ಬ್ಯಾಂಕ್ ಸೋಮವಾರ ತಿಳಿಸಿದೆ.

ಕಳೆದ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹29,383 ಕೋಟಿ ವರಮಾನ ಗಳಿಸಿತ್ತು. ಪ್ರಸಕ್ತ ಅವಧಿಯಲ್ಲಿ ₹34,447 ಕೋಟಿ ವರಮಾನ ಗಳಿಸಿದೆ ಎಂದು ತಿಳಿಸಿದೆ.

ಬಡ್ಡಿ ವರಮಾನವು ₹29,875 ಕೋಟಿ ಸಂಗ್ರಹಿಸಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣ ಶೇ 6.96ರಿಂದ ಶೇ 4.48ಕ್ಕೆ ಇಳಿದಿದೆ.

ನಿವ್ವಳ ಎನ್‌ಪಿಎ ಶೇ 1.47 ರಿಂದ ಶೇ 0.46ಕ್ಕೆ ಕುಸಿದಿದೆ ಎಂದು ಬ್ಯಾಂಕ್ ತಿಳಿಸಿದೆ.

ಇಂಡಿಯನ್ ಬ್ಯಾಂಕ್ ಲಾಭ ಶೇ 36ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಇಂಡಿಯನ್ ಬ್ಯಾಂಕ್ 2024–25ರ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದ ಲಾಭದಲ್ಲಿ ಶೇ 36ರಷ್ಟು ಏರಿಕೆಯಾಗಿದ್ದು, ₹2,707 ಕೋಟಿ ಲಾಭ ಗಳಿಸಿದೆ.

2023–24ರ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹1,988 ಕೋಟಿ ಲಾಭ ಗಳಿಸಿತ್ತು ಎಂದು ಬ್ಯಾಂಕ್ ಷೇರುಪೇಟೆಗೆ ಸೋಮವಾರ ತಿಳಿಸಿದೆ.

ಒಟ್ಟು ವರಮಾನವು ₹17,770 ಕೋಟಿ ಇದ್ದರೆ, ಕಳೆದ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹15,736 ಕೋಟಿ ವರಮಾನ ಗಳಿಸಿತ್ತು.

ನಿವ್ವಳ ಬಡ್ಡಿ ವರಮಾನದಲ್ಲಿ ಶೇ 8ರಷ್ಟು ಏರಿಕೆಯಾಗಿದ್ದು, ₹6,194 ಕೋಟಿ ಆಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 4.97ರಿಂದ ಶೇ 3.48ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.60ರಿಂದ ಶೇ 0.27ಕ್ಕೆ ಕುಸಿದಿದೆ.

ಸಮರ್ಪಕ ಬಂಡವಾಳ ಅನುಪಾತ (ಸಿಎಆರ್) ಶೇ 15.53ರಿಂದ ಶೇ 16.55ಕ್ಕೆ ಏರಿಕೆಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಬಿಎಚ್‌ಇಎಲ್ ಲಾಭ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ (ಬಿಎಚ್‌ಇಎಲ್) 2024–25ರ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹106 ಕೋಟಿ ನಿವ್ವಳ ಲಾಭ ಗಳಿಸಿದೆ.

2023–24ರ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹63 ಕೋಟಿ ನಷ್ಟ ದಾಖಲಿಸಿತ್ತು. ವರಮಾನ ಹೆಚ್ಚಳದಿಂದ ಲಾಭದ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಕಂಪನಿಯು ಷೇರುಪೇಟೆಗೆ ಸೋಮವಾರ ತಿಳಿಸಿದೆ.

ಒಟ್ಟು ವರಮಾನವು ₹6,695 ಕೋಟಿ ಇದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ₹5,305 ಕೋಟಿ ವರಮಾನ ಗಳಿಸಿತ್ತು ಎಂದು ಕಂಪನಿ ತಿಳಿಸಿದೆ.

ಕೆಎಫ್‌ಸಿ ನಷ್ಟ ₹34 ಕೋಟಿ

ಚೆನ್ನೈ (ರಾಯಿಟರ್ಸ್): ದೇಶದಲ್ಲಿ ಪಿಜ್ಜಾ ಹಟ್ ಹಾಗೂ ಕೆಎಫ್‌ಸಿ ರೆಸ್ಟೋರೆಂಟ್‌ಗಳನ್ನು ನಡೆಸುವ ಸಫೈರ್ ಫುಡ್ಸ್ ಇಂಡಿಯಾ ಲಿಮಿಟೆಡ್, ಸೆ. 30ಕ್ಕೆ ಕೊನೆಗೊಂಡ ಎರಡನೇ ತ್ರೈಮಾಸಿಕದಲ್ಲಿ ₹34 ಕೋಟಿ ನಷ್ಟ ದಾಖಲಿಸಿದೆ.

ಕಳೆದ ವರ್ಷ ₹15.34 ಕೋಟಿ ಲಾಭ ಗಳಿಸಿದ್ದ ಕಂಪನಿಯು, ಪ್ರಸಕ್ತ ತ್ರೈಮಾಸಿಕದಲ್ಲಿ ₹95 ಲಕ್ಷ ಲಾಭ ಗಳಿಸುವ ಗುರಿಯನ್ನು ಹೊಂದಿತ್ತು.

ಜಾಗತಿಕ ಕಂಪನಿಗಳಾದ ಮೆಕ್‌ಡೊನಾಲ್ಡ್ಸ್, ಡೊಮಿನಾಸ್‌ಗೆ ಪೈಪೋಟಿ ಒಡ್ಡಲು ಕೆಎಫ್‌ಸಿ ಈ ಹಿಂದಿನ ತ್ರೈಮಾಸಿಕಗಳಲ್ಲಿ ರಿಯಾಯಿತಿ ದರದಲ್ಲಿ ತನ್ನ ಉತ್ಪನ್ನಗಳನ್ನು ಪೂರೈಸಿದೆ. ಕೆಎಫ್‌ಸಿ ರೆಸ್ಟೋರೆಂಟ್‌ಗಳಲ್ಲಿ ಶೇ 8ರಷ್ಟು ವಹಿವಾಟು ಕುಸಿತಗೊಂಡಿದ್ದರೆ, ಪಿಜ್ಜಾ ಹಟ್‌ಗಳಲ್ಲಿನ ವಹಿವಾಟು ಶೇ 3ರಷ್ಟು ಕುಸಿತಗೊಂಡಿದೆ.

ಉತ್ತರ ಗಾಜಾದ ಆಸ್ಪತ್ರೆಯೊಂದರ ಮೇಲೆ ದಾಳಿ

ಹಮಾಸ್‌ನ 100 ಶಂಕಿತ ಉಗ್ರರ ಬಂಧನ: ಇಸ್ರೇಲ್ ಸೇನೆ

ಜೆರುಸಲೇಂ/ ಬಾಗ್ದಾದ್/ ಮಾಸ್ಕೊ (ಎಪಿ): ಉತ್ತರ ಗಾಜಾದ ಆಸ್ಪತ್ರೆಯೊಂದರ ಮೇಲೆ ವಾರಾಂತ್ಯದಲ್ಲಿ ದಾಳಿ ನಡೆಸಿ, ಹಮಾಸ್‌ನ 100 ಶಂಕಿತ ಉಗ್ರರನ್ನು ಬಂಧಿಸಿರುವುದಾಗಿ ಇಸ್ರೇಲ್ ಸೇನೆ ಹೇಳಿದೆ.

ಆದರೆ, ಬೀಟ್ ಲಾಹಿಯಾದಲ್ಲಿರುವ ಕಮಲ್ ಅಡ್ವಾನ್ ಆಸ್ಪತ್ರೆ ಮೇಲೆ ಶುಕ್ರವಾರ ದಾಳಿ ನಡೆಸಿದ ಇಸ್ರೇಲ್ ಪಡೆಗಳು ಆಸ್ಪತ್ರೆಯ 44 ಸಿಬ್ಬಂದಿಯನ್ನು ಬಂಧಿಸಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ತಿಳಿಸಿದೆ.

200ಕ್ಕೂ ಹೆಚ್ಚು ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದ ಆಸ್ಪತ್ರೆ ಮೇಲೆ ಇಸ್ರೇಲ್ ಪಡೆಗಳು ದಾಳಿ ನಡೆಸಿದ್ದು, ಹೆಚ್ಚಿನ ಹಾನಿಯಾಗಿದೆ ಎಂದು ಪ್ಯಾಲೆಸ್ಟೀನ್ ವೈದ್ಯಕೀಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ವರ್ಷದಿಂದ ನಡೆಯುತ್ತಿರುವ ಯುದ್ಧದ ಭಾಗವಾಗಿ ಇಸ್ರೇಲ್, ಗಾಜಾದಲ್ಲಿನ ಹಲವು ಆಸ್ಪತ್ರೆಗಳ ಮೇಲೆ ದಾಳಿ ನಡೆಸಿದೆ. ಹಮಾಸ್ ಬಂಡುಕೋರರು ಮತ್ತು ಇತರ ಉಗ್ರರು ಅಲ್ಲಿ ಆಶ್ರಯ ಪಡೆದಿದ್ದಾರೆ ಎಂದು ಇಸ್ರೇಲ್ ಆರೋಪಿಸಿದೆ. ಆದರೆ ಈ ಆರೋಪಗಳನ್ನು ಪ್ಯಾಲೆಸ್ಟೀನ್ ವೈದ್ಯ ಅಧಿಕಾರಿಗಳು ಅಲ್ಲಗಳೆದಿದ್ದಾರೆ.

ತೈಲ ಬೆಲೆಯಲ್ಲಿ ಇಳಿಕೆ: ಇರಾನ್ ಸೇನಾ ನೆಲೆಗಳನ್ನು ಗುರಿಯಾಗಿಸಿ ಇಸ್ರೇಲ್ ವಾರಾಂತ್ಯದಲ್ಲಿ ದಾಳಿ ನಡೆಸಿದ ಬಳಿಕ ಜಾಗತಿಕ ತೈಲ ಬೆಲೆಗಳಲ್ಲಿ ಸೋಮವಾರ ಕುಸಿತವಾಗಿದೆ. ಅಕ್ಟೋಬರ್ 2ರಂದು ಇಸ್ರೇಲ್ ಮೇಲೆ ಇರಾನ್ 200 ಕ್ಷಿಪಣಿಗಳನ್ನು ಹಾರಿಸಿದ ಬಳಿಕ ಜಾಗತಿಕವಾಗಿ ಕಚ್ಚಾ ಬೆಲೆಗಳು ಹೆಚ್ಚಾಗಿದ್ದವು.

ಇರಾನ್ ವಿಶ್ವದ ಏಳನೇ ಅತಿದೊಡ್ಡ ತೈಲ ಉತ್ಪಾದಕ ದೇಶವಾಗಿದೆ. ಆದರೆ ಸಂಘರ್ಷವು ಮಧ್ಯಪ್ರಾಚ್ಯದಾದ್ಯಂತ ವಿಸ್ತರಿಸಿದರೆ, ಅದು ವಿಶ್ವದ ದೊಡ್ಡ ತೈಲ ಉತ್ಪಾದಕರನ್ನೂ ಸೆಳೆಯಬಹುದು ಎಂದು ಅಂದಾಜಿಸಲಾಗಿದೆ. ಅಮೆರಿಕವು ವಿಶ್ವದ ಅತಿದೊಡ್ಡ ಕಚ್ಚಾ ತೈಲ ಉತ್ಪಾದಕವಾಗಿದೆ.

ಅಮೆರಿಕ ಬೆಂಚ್‌ಮಾರ್ಕ್ ಮತ್ತು ಅಂತರರಾಷ್ಟ್ರೀಯ ಬ್ರೆಂಟ್ ಕಚ್ಚಾ ಬೆಲೆಯು ಸೋಮವಾರ ಶೇ 6ರಷ್ಟು ಕುಸಿದಿದೆ.

ವಿಶ್ವಸಂಸ್ಥೆಗೆ ಇರಾಕ್ ದೂರು: ವಾರಾಂತ್ಯದಲ್ಲಿ ಇರಾನ್ ಮೇಲೆ ದಾಳಿ ನಡೆಸಿದ ಇಸ್ರೇಲ್ ತನ್ನ ವಾಯುಪ್ರದೇಶವನ್ನು ಉಲ್ಲಂಘಿಸಿದೆ ಎಂದು ಇರಾಕ್ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತು ಭದ್ರತಾ ಮಂಡಳಿಗೆ ದೂರು ಸಲ್ಲಿಸಿದೆ. ಇಸ್ರೇಲ್‌ನ ವಿಮಾನಗಳು ಇರಾಕ್‌ನ ವಾಯುಪ್ರದೇಶ ಮತ್ತು ಸಾರ್ವಭೌಮತ್ವವನ್ನು ಉಲ್ಲಂಘಿಸಿವೆ ಎಂದು ಅದು ದೂರಿದೆ.

ಇರಾನ್ ಮೇಲೆ ಇಸ್ರೇಲ್ ದಾಳಿಯ ಬಳಿಕ ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಳ್ಳುವುದನ್ನು ತಡೆಯಲು ಮಾಸ್ಕೊ ಎಲ್ಲ ರೀತಿಯ ಪ್ರಯತ್ನ ಮಾಡುತ್ತಿದೆ ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್ ತಿಳಿಸಿದ್ದಾರೆ.

‘ಐರನ್‌ಬೀಮ್’ ಲೇಸರ್ ರಕ್ಷಣಾ ವ್ಯವಸ್ಥೆಗೆ 53 ಕೋಟಿ ಡಾಲರ್ ವ್ಯಯ



ಜೆರುಸಲೇಂ(ಎಎಫ್‌ಪಿ): ಲೇಸರ್ ಕಿರಣದ ಮೂಲಕ ವಾಯುದಾಳಿಯಿಂದ ರಕ್ಷಣೆ ಪಡೆಯಲು ಅಭಿವೃದ್ಧಿಪಡಿಸಿರುವ ‘ಐರನ್ ಬೀಮ್’ ವ್ಯವಸ್ಥೆಗೆ 53 ಕೋಟಿ ಡಾಲರ್ (₹4,455 ಕೋಟಿ) ವ್ಯಯಿಸಲಾಗಿದೆ ಎಂದು ಇಸ್ರೇಲ್ ರಕ್ಷಣಾ ಇಲಾಖೆಯು ಸೋಮವಾರ ತಿಳಿಸಿದೆ.

ಲೆಬನಾನ್‌ನ ಹಿಜ್ಬುಲ್ಲಾ, ಪ್ಯಾಲೆಸ್ಟೀನ್‌ನ ಹಮಾಸ್ ಬಂಡುಕೋರರು ಗಾಜಾದಲ್ಲಿ ನಡೆಸಿದ ಡ್ರೋನ್, ಕ್ಷಿಪಣಿ ದಾಳಿಗಳನ್ನು ತಡೆಯಲು ಈ ವ್ಯವಸ್ಥೆಯು ನೆರವಾಗಿದೆ.

ಇಸ್ರೇಲ್ ಸೇನೆಯು ಕ್ಷಿಪಣಿ ದಾಳಿ ತಡೆಯಲು ಈ ಹಿಂದೆ ‘ಐರನ್ ಡೋಮ್’ ಅಳವಡಿಸಿಕೊಂಡಿತ್ತು. ಐರನ್‌ಬೀಮ್ ತಂತ್ರಜ್ಞಾನವು ಹೆಚ್ಚುವರಿ ವೈಮಾನಿಕ ರಕ್ಷಣಾ ಕವಚವಾಗಿದೆ.

ಅಮೆರಿಕದ ರಫೇಲ್, ಎಲ್ಬಿಟ್ ಕಂಪನಿಗಳ ಜತೆ ಇಸ್ರೇಲ್‌ನ ರಕ್ಷಣಾ ಇಲಾಖೆಯು ಜತೆಗೂಡಿ ಕೆಲಸ ಮಾಡಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಮಳಿಗೆ



ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್‌ನ ನೂತನ ಮಳಿಗೆಯನ್ನು ನಟಿ ಶ್ರೀನಿಧಿ ಶೆಟ್ಟಿ ಹಾಗೂ ಟಿ.ದಾಸರಹಳ್ಳಿ ಶಾಸಕ ಎಸ್. ಮುನಿರಾಜು ಉದ್ಘಾಟಿಸಿದರು. ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು ಮತ್ತು ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ. ಅಹಮದ್ ಇತರರು ಉಪಸ್ಥಿತರಿದ್ದರು.

ಬೆಂಗಳೂರು: ನಗರದ ಹೆಸರಘಟ್ಟ ಮುಖ್ಯ ರಸ್ತೆಯಲ್ಲಿ ಜಾಗತಿಕ ಆಭರಣ ಚಿಲ್ಲರೆ ಮಾರಾಟ ಸಂಸ್ಥೆ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್‌ನ ನೂತನ ಮಳಿಗೆ ಅ.26 ರಂದು ಆರಂಭಗೊಂಡಿದೆ.

ಬೆಂಗಳೂರಿನ 19ನೇ ಮತ್ತು ಕರ್ನಾಟಕದ 37ನೇ ಶೋರೂಂ ಇದಾಗಿದ್ದು, ಇದರ ಉದ್ಘಾಟನೆಯನ್ನು ಖ್ಯಾತ ಚಿತ್ರನಟಿ ಶ್ರೀನಿಧಿ ಶೆಟ್ಟಿ ಹಾಗೂ ಟಿ.ದಾಸರಹಳ್ಳಿ ಶಾಸಕ ಎಸ್. ಮುನಿರಾಜು ಅವರು ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಮಲಬಾರ್ ಗೋಲ್ಡ್ – ಡೈಮಂಡ್ಸ್ (ಕರ್ನಾಟಕ) ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು ಹಾಗೂ ಸಂಸ್ಥೆ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ. ಅಹಮದ್ ಅವರು ಮಾತನಾಡಿ, ‘ಹೆಸರಘಟ್ಟ ಮುಖ್ಯರಸ್ತೆಯಲ್ಲಿ ಹೊಸ ಮಳಿಗೆ ಆರಂಭಿಸಿರುವುದು ನಮಗೆ ಸಂತಸ ತಂದಿದೆ. ಬೆಂಗಳೂರಿನ ಗ್ರಾಹಕರಿಗೆ ಅತ್ಯುನ್ನತ ಚಿನ್ನಾಭರಣಗಳನ್ನು ಒದಗಿಸುವುದು ನಮ್ಮ ಬದ್ಧತೆ. ಅದರ ಪ್ರತೀಕ ಈ ಶೋರೂಮ್. ಗ್ರಾಹಕ ಸಮುದಾಯ ನಮ್ಮ ಮೇಲಿಟ್ಟಿರುವ ವಿಶ್ವಾಸ ಮತ್ತು ಬೆಂಬಲಕ್ಕೆ ತಕ್ಕಂತ ಮೌಲ್ಯವನ್ನು ನಾವು ನೀಡಲಿದ್ದೇವೆ. ಇದರ ಜತೆ ಗ್ರಾಹಕರಿಗೆ ಸರಿಸಾಟಿಯಿಲ್ಲದ ಶಾಪಿಂಗ್ ಅನುಭವವನ್ನು ನೀಡುತ್ತೇವೆ’ ಎಂದರು. ಎಂಇಐ ಲೇಔಟ್, ಬಾಗಲಗುಂಟೆಯಲ್ಲಿ ತೆರೆದಿರುವ ಈ ಮಳಿಗೆ ಮುಖ್ಯವಾಗಿ ವಜ್ರಾಭರಣಗಳಿಗೆ ವಿಶೇಷವಾಗಿದ್ದು, ಇಲ್ಲಿ ಎರಾ ಅನ್‌ಕಟ್ ಡೈಮಂಡ್, ಡಿವೈನ್ ಹೆರಿಟೇಜ್, ಎಥ್ನಿಕ್ ಹ್ಯಾಂಡ್ ಕ್ರಾಫ್ಟೆಡ್, ಪ್ರೆಸಿಯಾ ಪ್ರಿಶಿಯಸ್ ಜೆಮ್‌ಸ್ಟೋನ್ ಮತ್ತು ವಿರಾಝ್ ರಾಯಲ್ ಪೋಲ್ಕಿ ಜ್ಯುವೆಲರಿ ಸೇರಿದಂತೆ, ಮಲಬಾರ್ ಅತ್ಯುತ್ತಮ ಬ್ರ್ಯಾಂಡ್‌ಗಳ ಸಂಗ್ರಹಗಳಿವೆ.

ಆಕರ್ಷಕ ಉಡುಗೊರೆ: ಹಬ್ಬದ ಸೀಸನ್ ಅಂಗವಾಗಿ 50 ಸಾವಿರ ಮೌಲ್ಯದ ಡೈಮಂಡ್ಸ್ ಆಭರಣದ ಮೇಲೆ ಆಕರ್ಷಕ ಉಡುಗೊರೆ, ಅನ್‌ಕಟ್, ಪೋಲ್ಕಿ ಮತ್ತು ಪ್ರಿಶಿಯಸ್ ಜ್ಯುವೆಲರಿ ಖರೀದಿಸುವ ಗ್ರಾಹಕರು 200 ರಿಂದ 300 ಮಿಲಿ ಗ್ರಾಂನಷ್ಟು ತೂಕದ ಚಿನ್ನದ ನಾಣ್ಯ ಪಡೆಯಲಿದ್ದಾರೆ. ಹೆಚ್‌ಡಿಎಫ್‌ಡಿ ಕ್ರೆಡಿಟ್ ಕಾರ್ಡ್ ಮೂಲಕ ₹75 ಸಾವಿರಕ್ಕಿಂತ ಹೆಚ್ಚಿನ ಮೌಲ್ಯದ ಚಿನ್ನಾಭರಣ ಖರೀದಿಸಿದರೆ ₹5,000 ಇನ್‌ಸ್ಟೆಂಟ್ ರಿಯಾಯಿತಿ ಹಾಗೂ ಆಭರಣ ಮೌಲ್ಯದ ಶೇ.10 ರಷ್ಟು ಹಣ ಪಾವತಿಸಿ ಮುಂಗಡ ಬುಕ್ಕಿಂಗ್ ಮಾಡಿಕೊಳ್ಳುವ ವ್ಯವಸ್ಥೆ ಕಲ್ಪಿಸಲಾಗಿದೆ. ಹಳೆಯ ಚಿನ್ನ ಮತ್ತು ವಜ್ರಗಳಿಗೆ ಶೇ.100 ರಷ್ಟು ವಿನಿಮಯ ಮೌಲ್ಯ, ಶೇ.100 ರಷ್ಟು ಎಚ್‌ಯುಐಡಿ ಅನುಸರಣೆ ಖಾತರಿ ಮತ್ತು ಪ್ರಮಾಣೀಕೃತ ವಜ್ರಗಳನ್ನು 28 ಹಂತದಲ್ಲಿ ಗುಣಮಟ್ಟದ ಪರೀಕ್ಷೆ ಮತ್ತು ಖರೀದಿಸುವ ಪ್ರತಿಯೊಂದು ಆಭರಣಕ್ಕೂ ಒಂದು ವರ್ಷ ಉಚಿತ ವಿಮೆ ಸೌಲಭ್ಯ ನೀಡಲಾಗುತ್ತದೆ. ಈ ಎಲ್ಲ ಕೊಡುಗೆಗಳು ನ.3, 2024ರವೆಗೆ ಲಭ್ಯವಿರುತ್ತವೆ ಎಂದು ಸಂಸ್ಥೆ ತಿಳಿಸಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ರಷ್ಯಾಕ್ಕೆ ಉತ್ತರ ಕೊರಿಯಾ ಸೇನೆ: ದೃಢಪಡಿಸಿದ ನ್ಯಾಟೊ

ಬ್ರಸೆಲ್ಸ್ (ರಾಯಿಟರ್ಸ್, ಎಪಿ): ಉಕ್ರೇನ್ ವಿರುದ್ಧ ಯುದ್ಧಕ್ಕಿಳಿದಿರುವ ರಷ್ಯಾಕ್ಕೆ ನೆರವಾಗಲು ಉತ್ತರ ಕೊರಿಯಾದ ಸೇನಾ ಪಡೆಗಳನ್ನು ಕಳುಹಿಸಲಾಗಿದೆ ಎಂದು ನ್ಯಾಟೊ ದೃಢಪಡಿಸಿದೆ.

‘ಉತ್ತರ ಕೊರಿಯಾದಿಂದ ರಷ್ಯಾಕ್ಕೆ ಕಳುಹಿಸಿರುವ ಸೇನಾ ಪಡೆಗಳನ್ನು ಕರ್ಸ್ಕ್ ಪ್ರದೇಶದಲ್ಲಿ ನಿಯೋಜಿಸಿರುವುದನ್ನು ದೃಢಪಡಿಸುತ್ತೇನೆ. ಯುದ್ಧದಲ್ಲಿ ಉತ್ತರ ಕೊರಿಯಾ ಭಾಗಿಯಾಗುತ್ತಿರುವುದು ಗಂಭೀರ ವಿಷಯ. ಇದು ರಷ್ಯಾ ಯುದ್ಧದ ಅಪಾಯಕಾರಿ ವಿಸ್ತರಣೆಯ ಬೆಳವಣಿಗೆಯಾಗಿದೆ’ ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ತಿಳಿಸಿದ್ದಾರೆ.

ಬ್ರಸೆಲ್ಸ್‌ನಲ್ಲಿರುವ ನ್ಯಾಟೊ ಕೇಂದ್ರ ಕಚೇರಿಯಲ್ಲಿ ಗುಪ್ತಚರ ಮತ್ತು ಮಿಲಿಟರಿ ಅಧಿಕಾರಿಗಳಿದ್ದ ದಕ್ಷಿಣ ಕೊರಿಯಾದ ನಿಯೋಗ ಹಾಗೂ ಹಿರಿಯ ರಾಜತಾಂತ್ರಿಕರು ಈ ಬೆಳವಣಿಗೆ ಬಗ್ಗೆ ಮಾಹಿತಿ ನೀಡಿದ ಬಳಿಕ ರುಟ್ಟೆ ಈ ಮಾಹಿತಿ ನೀಡಿದ್ದಾರೆ.

‘ಈ ಬೆಳವಣಿಗೆಗಳ ಬಗ್ಗೆ ದಕ್ಷಿಣ ಕೊರಿಯಾದ ಅಧ್ಯಕ್ಷ ಹಾಗೂ ಉಕ್ರೇನಿನ ರಕ್ಷಣಾ ಸಚಿವರೊಂದಿಗೆ ಶೀಘ್ರವೇ ಚರ್ಚಿಸುತ್ತೇನೆ’ ಎಂದು ರುಟ್ಟೆ ತಿಳಿಸಿದ್ದಾರೆ. ಉತ್ತರ ಕೊರಿಯಾದ ಸಾವಿರಾರು ಸೈನಿಕರನ್ನು ಯುರೋಪಿನ ಯುದ್ಧಕ್ಕೆ ಕಳುಹಿಸುತ್ತಿರುವುದು ಈಗಾಗಲೇ ದಣಿದಿರುವ ಉಕ್ರೇನ್ ಮೇಲೆ ಅತಿಯಾದ ಒತ್ತಡ ಬೀರಲಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಗುಪ್ತಚರ ಮಾಹಿತಿ ಆಧರಿಸಿ ಕಳೆದ ಶುಕ್ರವಾರ ಉತ್ತರ ಕೊರಿಯಾದ ಪಡೆಗಳು ಕೆಲವೇ ದಿನಗಳಲ್ಲಿ ಯುದ್ಧಭೂಮಿಗೆ ಬರಲಿವೆ ಎಂದು ತಿಳಿಸಿದ್ದರು.

ಉತ್ತರ ಕೊರಿಯಾದಿಂದ ಸುಮಾರು 10 ಸಾವಿರ ಪಡೆಗಳನ್ನು ರಷ್ಯಾದ ಸೇನೆ ಸೇರಲು ಕಳುಹಿಸಲಾಗುತ್ತಿದೆ ಎಂದು ತಮ್ಮ ಸರ್ಕಾರ ತಿಳಿಸಿದ್ದಾಗಿ ಅವರು ಹೇಳಿದ್ದರು. ಅದಕ್ಕೂ ಮುನ್ನವೇ ರಷ್ಯಾಕ್ಕೆ ಉತ್ತರ ಕೊರಿಯಾದ ಸೇನಾಪಡೆಗಳನ್ನು ಕಳುಹಿಸಿರುವ ಬಗ್ಗೆ ಸಾಕ್ಷಿಯಿದೆ ಎಂದು ಅಮೆರಿಕ ಮತ್ತು ದಕ್ಷಿಣ ಕೊರಿಯಾದ ಅಧಿಕಾರಿಗಳು ತಿಳಿಸಿದ್ದರು. ಈಗಾಗಲೇ ಉತ್ತರ ಕೊರಿಯಾದ 3,000 ಪಡೆಗಳನ್ನು ತರಬೇತಿಗಾಗಿ ರಷ್ಯಾಕ್ಕೆ ಕಳುಹಿಸಲಾಗಿದೆ ಎಂದು ಅಮೆರಿಕ ತಿಳಿಸಿದೆ.

10 ಸಾವಿರ ಪಡೆಗಳ ರವಾನೆ

ಉತ್ತರ ಕೊರಿಯಾ ಸುಮಾರು ಹತ್ತು ಸಾವಿರ ಪಡೆಗಳನ್ನು ರಷ್ಯಾಕ್ಕೆ ಕಳುಹಿಸಿದೆ ಎಂದು ಅಮೆರಿಕ ತಿಳಿಸಿದೆ.

ಗೋಪಾಲ ಜೋಶಿ ಬಿಡುಗಡೆಗೆ ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಹಣ ಸುಲಿಗೆ ಮಾಡಿದ್ದಾರೆ' ಎಂಬ ಆರೋಪದಡಿ ಪೊಲೀಸ್ ಕಸ್ಟಡಿಯಲ್ಲಿದ್ದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅಣ್ಣ ಗೋಪಾಲ ಜೋಶಿ, ಎಸ್.ಜಿ. ವಿಜಯಲಕ್ಷ್ಮಿ ಜೋಶಿ ಹಾಗೂ ಅಜಯ್ ಜೋಶಿ ವಿರುದ್ಧದ ಎಫ್ಐಆರ್‌ಗೆ ತಡೆ ನೀಡಿರುವ ಹೈಕೋರ್ಟ್, ಕೂಡಲೇ ಬಿಡುಗಡೆ ಮಾಡುವಂತೆ ಆದೇಶಿಸಿದೆ.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಆಮಿಷವೊಡ್ಡಿ ವಿಜಯಪುರ ಜಿಲ್ಲೆಯ ನಾಗಠಾಣ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ದೇವಾನಂದ್ ಫೂಲ್ ಸಿಂಗ್ ಚವ್ಹಾಣ್ ಅವರಿಂದ ₹2 ಕೋಟಿ ಸುಲಿಗೆ ಮಾಡಿದ್ದಾರೆ' ಎಂದು ಅವರ ವಿರುದ್ಧ ದೂರು ದಾಖಲಾಗಿತ್ತು.

ಎಫ್ಐಆರ್ ರದ್ದುಪಡಿಸುವಂತೆ ಕೋರಿ ಗೋಪಾಲ ಜೋಶಿ ಅವರ ಪುತ್ರ ಅಜಯ್ ಜೋಶಿ ಹಾಗೂ ಎಸ್.ಜಿ. ವಿಜಯಲಕ್ಷ್ಮಿ ಜೋಶಿ ಸಲ್ಲಿಸಿದ್ದ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಡಿ.ಆರ್.ರವಿಶಂಕರ್, 'ಈ ಪ್ರಕರಣ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ (ಪಿಎಂಎಲ್ಎ) ಆರೋಪಕ್ಕೆ ಸಂಬಂಧಿಸಿದೆ. ಕಳೆದ ಮಾರ್ಚ್, ಏಪ್ರಿಲ್, ಮೇ ಹಾಗೂ ಆಗಸ್ಟ್‌ನಲ್ಲಿ ಘಟನಾವಳಿ ನಡೆದಿವೆ ಎಂದು ಆಪಾದಿಸಲಾಗಿದೆ. ಅರ್ಜಿದಾರರು ಹಣ ಹಿಂತಿರುಗಿಸಲು ಒಪ್ಪಿದ್ದರೂ ಇದೇ 17ರಂದು ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ' ಎಂದು ಆಕ್ಷೇಪಿಸಿದರು.

'ಗೋಪಾಲ ಜೋಶಿ ಸೇರಿದಂತೆ ಒಟ್ಟು ನಾಲ್ವರನ್ನು ಬಂಧಿಸಲಾಗಿದೆ. ದುರುದ್ದೇಶಪೂರಿತವಾದ ಈ ಪ್ರಕರಣದ ಎಫ್ಐಆರ್ ಮತ್ತು ಮುಂದಿನ ಕ್ರಮಗಳಿಗೆ ತಡೆ ನೀಡಬೇಕು ಮತ್ತು ಅರ್ಜಿದಾರರ ಬಿಡುಗಡೆಗೆ ಆದೇಶಿಸಬೇಕು' ಎಂದು ಕೋರಿದರು.

ಇದಕ್ಕೆ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಈ ಕೃತ್ಯಕ್ಕೆ ಕೇಂದ್ರ ಸಚಿವರ ಕಚೇರಿಯನ್ನು ಬಳಕೆ ಮಾಡಲಾಗಿದೆ. ತನಿಖೆ ಸಂದರ್ಭದಲ್ಲಿ ಕೆಲವು ವಿಡಿಯೊ ಮತ್ತು ಆಡಿಯೊ ತುಣುಕುಗಳು ಲಭ್ಯವಾಗಿವೆ. ಆರೋಪಿಗಳು ಒಬ್ಬ ವ್ಯಕ್ತಿಯಿಂದ ಮಾತ್ರ ಹಣ ಸಂಗ್ರಹಿಸಿಲ್ಲ. ಹಣ ಕೇಳಿದಾಗ ಆರೋಪಿಗಳು ಜಾತಿ ಹೆಸರು ಹಿಡಿದು ನಿಂದನೆ ಮಾಡಿರುವ ಆರೋಪವೂ ಇದೆ. ಈ ಕುರಿತ ತನಿಖೆಯ ದಾಖಲೆಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಲಾಗಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಘಟನೆ ನಡೆದ ಆರು ತಿಂಗಳ ನಂತರ ಪ್ರಕರಣ ದಾಖಲಿಸಲಾಗಿದೆ. ಅರ್ಜಿದಾರರ ಪರ ವಕೀಲರು ಪೂರ್ಣ ಹಣ ವಾಪಸ್ ನೀಡುವುದಾಗಿ ಭರವಸೆ ನೀಡಿದ್ದಾರೆ. ಇದು ಅರ್ಜಿದಾರರು ಮತ್ತು ಪ್ರತಿವಾದಿ ನಡುವಿನ ಹಣಕಾಸಿನ ವಿಚಾರವಾಗಿದೆ. ಇದಕ್ಕೆ ಈಗ ದೌರ್ಜನ್ಯ ಕಾಯ್ದೆಯ ಬಣ್ಣ ಲೇಪಿಸಲಾಗುತ್ತಿದೆ' ಎಂಬ ಅಭಿಪ್ರಾಯವನ್ನು ಮೌಖಿಕವಾಗಿ ವ್ಯಕ್ತಪಡಿಸಿತು.

ಪಪ್ಪು ಯಾದವ್‌ಗೆ ಬೆದರಿಕೆ ಕರೆ

ಭದ್ರತೆ ಹೆಚ್ಚಿಸುವಂತೆ ಕೇಂದ್ರ ಸಚಿವ ಅಮಿತ್ ಶಾಗೆ ಪತ್ರ ಬರೆದ ಬಿಹಾರದ ಸಂಸದ

ಪಟ್ನಾ (ಪಿಟಿಐ): ಪಾತಕಿ ಬಿಷ್ಣೋಯಿ ಗ್ಯಾಂಗ್‌ನಿಂದ ಬೆದರಿಕೆ ಕರೆ ಬಂದಿದ್ದು, ಭದ್ರತೆಯನ್ನು ಹೆಚ್ಚಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಬಿಹಾರದ ಸಂಸದ ರಾಜೇಶ್ ರಂಜನ್ ಅಲಿಯಾಸ್ ಪಪ್ಪು ಯಾದವ್ ಪತ್ರ ಬರೆದಿದ್ದಾರೆ.



ಪಪ್ಪು ಯಾದವ್

ಪೂರ್ಣಿಯಾ ಲೋಕಸಭಾ ಕ್ಷೇತ್ರದ ಸಂಸದರು, ಕೇಂದ್ರ ಗೃಹ ಸಚಿವರಿಗೆ ಅ.21ರಂದು ಬರೆದಿರುವ ಎರಡು ಪುಟಗಳ ಪತ್ರವನ್ನು ಸೋಮವಾರ ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದು, ಇದರ ಪ್ರತಿಗಳನ್ನು ಬಿಹಾರದ ಮುಖ್ಯಮಂತ್ರಿ ಹಾಗೂ ಉನ್ನತ ಅಧಿಕಾರಿಗಳಿಗೂ ಕಳಿಸಿದ್ದಾರೆ.

ಬಿಷ್ಣೋಯಿ ಅವರ ಸಹಾಯಕನು ದುಬೈನ ಸಂಖ್ಯೆಯಿಂದ ಮಾಡಿರುವ ಫೋನ್ ಕರೆಯ ಆಡಿಯೊ ತುಣುಕನ್ನು ಮಾಧ್ಯಮವೊಂದು ಬಿತ್ತರಿಸಿದೆ.

'ನಾನು ಕೊಲೆಯಾದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಕೆಟ್ಟ ಆಪಾದನೆ ಬರಲಿದೆ. ಆದ್ದರಿಂದ ಇದೀಗ ನನಗಿರುವ 'ವೈ' ಶ್ರೇಣಿಯ ಭದ್ರತೆಯನ್ನು 'ಝಡ್' ಶ್ರೇಣಿಗೆ ಉನ್ನತೀಕರಿಸುವ ಜೊತೆಗೆ, ಬಿಹಾರದಲ್ಲಿ ಹಾಜರಾಗುವ ಎಲ್ಲ ಕಾರ್ಯಕ್ರಮಗಳಿಗೂ ಪೊಲೀಸ್ ಬೆಂಗಾವಲು ಪಡೆಯನ್ನು ಒದಗಿಸುವಂತೆ' ಪತ್ರದಲ್ಲಿ ಪಪ್ಪು ಉಲ್ಲೇಖಿಸಿದ್ದಾರೆ.

'ಕಾನೂನು ಅನುಮತಿಸಿದರೆ, ಕೊಲೆಯ ಹಿಂದಿರುವ ಬಿಷ್ಣೋಯಿ ಗ್ಯಾಂಗ್‌ನ ಜಾಲವನ್ನು ಸಂಪೂರ್ಣ ನಾಶ ಮಾಡಲಾಗುವುದು' ಎಂದು ಎನ್‌ಸಿಪಿ ಮುಖಂಡ ಬಾಬಾ ಸಿದ್ದೀಕಿ ಹತ್ಯೆಯ ನಂತರ ಪಪ್ಪು ಯಾದವ್ 'ಎಕ್ಸ್'ನಲ್ಲಿ ಹೇಳಿಕೆಯೊಂದನ್ನು ಪೋಸ್ಟ್ ಮಾಡಿದ್ದರು.

'ಸಂಸದರ ಪತ್ರದ ಬಗ್ಗೆ ಮಾಧ್ಯಮಗಳಿಂದ ತಿಳಿದಿದ್ದೇವೆ. ಅವರಿಗೆ ಒದಗಿಸಿರುವ ಭದ್ರತೆಗೆ ಅನುಗುಣವಾಗಿ ಅವರ ಸುರಕ್ಷತೆಗಾಗಿ ಕ್ರಮ ಕೈಗೊಳ್ಳಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುತ್ತೇವೆ' ಎಂದು ಪೂರ್ಣಿಯಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕೇಯ ಶರ್ಮಾ ಹೇಳಿದ್ದಾರೆ.

60 ವಿಮಾನಗಳಿಗೆ ಬೆದರಿಕೆ

ನವದೆಹಲಿ (ಪಿಟಿಐ): ಭಾರತೀಯ ವಿಮಾನಯಾನ ಕಂಪನಿಗಳಿಗೆ ಸೇರಿದ 60ಕ್ಕೂ ಹೆಚ್ಚು ವಿಮಾನಗಳಿಗೆ ಸೋಮವಾರ ಬಾಂಬ್ ಬೆದರಿಕೆ ಸಂದೇಶಗಳು ಬಂದಿವೆ ಎಂದು ಮೂಲಗಳು ತಿಳಿಸಿವೆ.

ಕಳೆದ 15 ದಿನಗಳಲ್ಲಿ ಭಾರತೀಯ ವಿಮಾನಯಾನ ಕಂಪನಿಗಳಿಗೆ ಸೇರಿದ 410 ವಿಮಾನ ಗಳಿಗೆ ಬಾಂಬ್ ಬೆದರಿಕೆಯ ಹುಸಿ ಸಂದೇಶಗಳು ಬಂದಿವೆ. ಇಂತಹ ಸಂದೇಶಗಳು ದೇಶದ ಒಳಗೆ ಸಂಚರಿಸುವ ಹಾಗೂ ಅಂತರ ರಾಷ್ಟ್ರೀಯ ಮಾರ್ಗಗಳಲ್ಲಿ ಸಂಚರಿಸುವ ವಿಮಾನಗಳಿಗೆ ಬಂದಿವೆ. ಬಹುತೇಕ ಸಂದೇಶಗಳನ್ನು ಸಾಮಾಜಿಕ ಜಾಲತಾಣಗಳನ್ನು ಬಳಸಿ ಕಳುಹಿಸಲಾಗಿದೆ. ಏರ್ ಇಂಡಿಯಾ ಮತ್ತು ಇಂಡಿಗೊ ಕಂಪನಿಗಳ ತಲಾ 21 ವಿಮಾನಗಳಿಗೆ, ವಿಸ್ತಾರಾ ಕಂಪನಿಯ 20 ವಿಮಾನಗಳಿಗೆ ಸೋಮವಾರ ಬೆದರಿಕೆ ಸಂದೇಶಗಳು ಬಂದಿವೆ ಎಂದು ಮೂಲಗಳು ಹೇಳಿವೆ.

ಬೆದರಿಕೆ ಸಂದೇಶ ಬಂದ ನಂತರದಲ್ಲಿ 'ಸಂಬಂಧಪಟ್ಟ ಅಧಿ ಕಾರಿಗಳಿಗೆ ಮಾಹಿತಿ ನೀಡಲಾಯಿತು, ಎಲ್ಲ ಭದ್ರತಾ ಪ್ರಕ್ರಿಯೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಯಿತು' ಎಂದು ಏರ್ ಇಂಡಿಯಾ ಕಂಪನಿ ವಕ್ತಾರರು ತಿಳಿಸಿದ್ದಾರೆ.

ನಿದ್ರೆಗೆ ಭಂಗ: ಪುತ್ರನನ್ನೇ ಕೊಂದ ತಂದೆ

ಬಾಂದಾ (ಉತ್ತರ ಪ್ರದೇಶ) (ಪಿಟಿಐ): ನಿದ್ರೆ ಮಾಡುವಾಗ ಜೋರಾಗಿ ಅಳುವ ಮೂಲಕ ಅಡಚಣೆ ಉಂಟುಮಾಡಿದ ಎಂಬ ಕ್ಷುಲ್ಲಕ ಕಾರಣಕ್ಕೆ ವ್ಯಕ್ತಿಯೊಬ್ಬ ತನ್ನ ಐದು ವರ್ಷದ ಪುತ್ರನನ್ನೇ ಕೊಲೆಗೈದಿದ್ದಾನೆ. ಬಳಿಕ ತಾನೂ ಬೆಂಕಿ ಹಚ್ಚಿಕೊಂಡು ಆತ್ಯಹತ್ಯೆಗೆ ಯತ್ನಿಸಿದ್ದಾನೆ.

ಉತ್ತರ ಪ್ರದೇಶದ ಚಿತ್ರಕೂಟ ಜಿಲ್ಲೆಯಲ್ಲಿ ಭಾನುವಾರ ರಾತ್ರಿ ಈ ಘಟನೆ ಜರುಗಿದ್ದು, ಪ್ರಕರಣ ಸಂಬಂಧ ರಾಜ್‌ಕುಮಾರ್ ನಿಷಾದ್(35) ಎಂಬಾತನನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ. ಮೃತ ಬಾಲಕನನ್ನು ಸತ್ಯಂ ಎಂದು ಗುರುತಿಸಲಾಗಿದೆ.

'ಭಾನುವಾರ ರಾತ್ರಿ ನಿದ್ರಿಸುವಾಗ ಪುತ್ರ ಜೋರಾಗಿ ಅತ್ತು, ತೊಂದರೆ ಕೊಡುತ್ತಿದ್ದ. ಹಾಗಾಗಿ, ಕೊಡಲಿಯಿಂದ ಆತನ ಶಿರವನ್ನು ಕತ್ತರಿಸಿದೆ' ಎಂದು ಆರೋಪಿಯು ತಪ್ಪೊಪ್ಪಿಕೊಂಡಿದ್ದಾನೆ. ಕೊಲೆ ಬಳಿಕ ದಿಗ್ಭ್ರಮೆಗೊಂಡ ಆತ, ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಅಷ್ಟರಲ್ಲಿ ಗ್ರಾಮಸ್ಥರು ಆತನನ್ನು ರಕ್ಷಿಸಿ, ಪೊಲೀಸ್ ವಶಕ್ಕೆ ನೀಡಿದ್ದಾರೆ. ಬಂಧಿತನಿಂದ ಕೊಲೆಗೆ ಬಳಸಲಾದ ಕೊಡಲಿ ವಶಪಡಿಸಿಕೊಳ್ಳಲಾಗಿದೆ ಎಂದು ಡಿವೈಎಸ್ಪಿ ರಾಜಕರಣ್ ತಿಳಿಸಿದ್ದಾರೆ.

ಅಪರಾಧ ಸುದ್ದಿ

ಅನಾಥಾಶ್ರಮದ ಬಾಲಕಿ ಮೇಲೆ ಅತ್ಯಾಚಾರ

ಠಾಣೆ (ಪಿಟಿಐ): ನವಿ ಮುಂಬೈನ ಅನಾಥಾಶ್ರಮವೊಂದರಲ್ಲಿ ಆಶ್ರಯ ಪಡೆದಿದ್ದ 13 ವರ್ಷದ ಬಾಲಕಿ ಮೇಲೆ ನಡೆದ ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ.

'ಅನಾಥಾಶ್ರಮದ ಸಿಬ್ಬಂದಿಯೊಬ್ಬರು ಬಾಲಕಿ ಉಳಿದುಕೊಂಡಿದ್ದ ಕೊಠಡಿಯ ಕಿಟಕಿ ಬಾಗಿಲ ಮೂಲಕ ನುಗ್ಗಿ ಅತ್ಯಾಚಾರ ಎಸಗಿದ್ದಾರೆ. ಈ ಘಟನೆ ಜುಲೈನಲ್ಲಿ ನಡೆದಿದೆ. ಸೆಪ್ಟೆಂಬರ್‌ನಲ್ಲಿ ಮತ್ತೊಬ್ಬ ವ್ಯಕ್ತಿ ಇದೇ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಈ ಎರಡೂ ಘಟನೆಗಳ ಕುರಿತು ಗೊತ್ತಿದ್ದರೂ ಆಶ್ರಯಮ ಮೇಲ್ವಿಚಾರಕಿಯು ಪೊಲೀಸರಿಗೆ ದೂರು ನೀಡಿಲ್ಲ' ಎಂದು ಪೊಲೀಸರು ಸೋಮವಾರ ವಿವರಿಸಿದರು.

ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 64 (ಅತ್ಯಾಚಾರ), 74 (ಮಹಿಳೆಯ ಗೌರವಕ್ಕೆ ಧಕ್ಕೆ ತರುವ ಉದ್ದೇಶದಿಂದ ಎಸಗಿದ ದೌರ್ಜನ್ಯ) ಹಾಗೂ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ. ಈ ಸಂಬಂಧ ಯಾರನ್ನೂ ಪೊಲೀಸರು ಬಂಧಿಸಿಲ್ಲ.

'ನನ್ನ ಹತ್ಯೆಗೆ ಸಂಚು'

ನ್ಯೂಯಾರ್ಕ್ (ರಾಯಿಟರ್ಸ್): 'ವಿದೇಶಿ ನೆಲದಲ್ಲಿರುವ ಭಾರತ ವಿರೋಧಿ ಧ್ವನಿಗಳನ್ನು ಹತ್ತಿಕ್ಕಲು ಯತ್ನಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ವಿರುದ್ಧ ಕೆನಡಾ ಮತ್ತು ಅಮೆರಿಕ ಒಗ್ಗಟ್ಟಾಗಿ ಕಠಿಣ ನಿಲುವು ಹೊಂದಬೇಕು' ಎಂದು ಸಿಖ್ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ಆರೋಪಿಸಿದ್ದಾರೆ.

'ನನ್ನನ್ನು ಹತ್ಯೆ ಮಾಡಲು ಭಾರತ ಸಂಚು ರೂಪಿಸಿದೆ' ಎಂದು ರಾಯಿಟರ್ಸ್ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಪನ್ನೂ ಆರೋಪಿಸಿದ್ದಾರೆ.

ಒಳಮೀಸಲು: ಮತ್ತೆ ಆಯೋಗ

ಒಂದನೇ ಪುಟದಿಂದ...

'ಪರಿಶಿಷ್ಟ ಜಾತಿಯ ಎಡ, ಬಲ, ಬೋವಿ, ಲಂಬಾಣಿ ಸಮುದಾಯವರು ಒಳಮೀಸಲಾತಿ ಜಾರಿ ಬಗ್ಗೆ ಒಮ್ಮತ ಹೊಂದಿದ್ದಾರೆ. ಈ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಈಗಾಗಲೇ ಹಲವು ಸಭೆ, ಸಮಾರಂಭಗಳಲ್ಲಿ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಳಮೀಸಲಾತಿಗಾಗಿ 30 ವರ್ಷಗಳಿಂದ ನಡೆದುಕೊಂಡು ಬಂದಿದ್ದ ಹೋರಾಟಕ್ಕೆ ಫಲ ಇಂದು ಸಿಕ್ಕಿದೆ. ವಿಧಾನಸಭಾ ಚುನಾವಣೆ ವೇಳೆಯಲ್ಲಿ ಒಳಮೀಸಲಾತಿ ಜಾರಿ ಮಾಡುವ ಬಗ್ಗೆ ಆಶ್ವಾಸನೆ ನೀಡಿದ್ದೆವು. ಅದನ್ನು ಈಗ ಸಾಕಾರಗೊಳಿಸಲು ಹೊರಟಿದ್ದೇವೆ. ಇದು ಐತಿಹಾಸಿಕ ಹೆಜ್ಜೆ' ಎಂದು ವ್ಯಾಖ್ಯಾನಿಸಿದರು. ಇವತ್ತಿನ ಸಂಪುಟ ಸಭೆಯಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆ ವಿಷಯ ಪ್ರಸ್ತಾಪವಾಗಲಿಲ್ಲ ಎಂದು ಎಚ್.ಕೆ.ಪಾಟೀಲ ಹೇಳಿದರು. ಸಚಿವರಾದ ಕೆ.ಎಚ್. ಮುನಿಯಪ್ಪ, ಆರ್.ಬಿ.ತಿಮ್ಮಾಪುರ, ಶಿವರಾಜ ತಂಗಡಗಿ, ಕಾಂಗ್ರೆಸ್ ನಾಯಕ ಎಲ್.ಹನುಮಂತಯ್ಯ, ಮಾಜಿ ಸಚಿವ ಎಚ್.ಆಂಜನೇಯ ಉಪಸ್ಥಿತರಿದ್ದರು.

ಭೂಮಿ ಕಳೆದುಕೊಂಡವರ ಬದಲು ಅನ್ಯರಿಗೆ ಹಣ

ಒಂದನೇ ಪುಟದಿಂದ...

ಮುಖ್ಯಾಂಶಗಳು
- ಮೂವರಿಗೆ ಸೇರಿದ ಜಂಟಿ ಖಾತೆಗೆ ಪರಿಹಾರ ಹಣ ಜಮಾ
- ಸಂತ್ರಸ್ತನಲ್ಲದ ವ್ಯಕ್ತಿಯ ಖಾತೆಗೆ ₹11 ಲಕ್ಷ ವರ್ಗಾವಣೆ
- ಐವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು

ಇದರಲ್ಲಿ ಪಾತಾಪೂರು ಗ್ರಾಮದ ಶ್ರೀದೇವಿ ಮಲ್ಲಯ್ಯ ಸ್ವಾಮಿ ಅವರಿಗೆ ಸೇರಿದ್ದ ₹43,47,310 ಮನೆಯ ಪರಿಹಾರ ಹಣ ಹಾಗೂ ಉಟಗನೂರು ಬಸವಲಿಂಗ ತಾತಾ ದೇವಸ್ಥಾನ ಪರಿಹಾರ ಹಣವನ್ನು ತೆಗೆದುಕೊಂಡಿರುವುದು ಪೊಲೀಸ್ ವಿಚಾರಣೆಯ ಸಂದರ್ಭದಲ್ಲಿ ಬಹಿರಂಗವಾಗಿದೆ.

ಇದರಲ್ಲಿ ಅವಾರ್ಡ್ ಪುಸ್ತಕದಂತೆ ಸಿದ್ದನಗೌಡ ಅವರು ಶೇ 10ರಷ್ಟು ಟಿಡಿಎಸ್ ಹೊರತುಪಡಿಸಿ ₹67 ಲಕ್ಷ ತೆಗೆದುಕೊಳ್ಳಬೇಕಾಗಿತ್ತು. ಆದರೆ, ಹಣ ಜಂಟಿ ಖಾತೆಗೆ ವರ್ಗಾವಣೆಯಾದ ಮರುದಿನವೇ ಶ್ರೀದೇವಿ ಮಲ್ಲಯ್ಯ ಸ್ವಾಮಿ ಅವರಿಗೆ ಸೇರಿದ ಪರಿಹಾರ ಹಣ ಸೇರಿ ಒಟ್ಟು ₹95 ಲಕ್ಷ ಹಣವನ್ನು ತನ್ನ ಖಾಸಗಿ ಖಾತೆಗೆ ವರ್ಗಾಯಿಸಿಕೊಂಡಿದ್ದಾರೆ. ಅಲ್ಲದೆ ರಾಜಶೇಖರ ತೋರಗಲ್ ಎನ್ನುವವರಿಗೂ ₹11.66 ಲಕ್ಷ ವರ್ಗಾಯಿಸಿದ್ದಾರೆ. ಹೀಗಾಗಿ ರಾಜಶೇಖರ ತೋರಗಲ್, ಹಣ ವರ್ಗಾಯಿಸಿದ ಅಂದಿನ ವಿಶೇಷ ಭೂಸ್ವಾಧೀನ ಅಧಿಕಾರಿ ಹರ್ಷಾ ಶೆಟ್ಟಿ ಸೇರಿ ತಪ್ಪಿತಸ್ಥರ ವಿರುದ್ಧವೂ ಪ್ರಕರಣ ದಾಖಲು ಮಾಡಲು ಇಲಾಖೆ ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ.

ಹಣ ಕೊಡದಿರುವ ಬಗ್ಗೆ ತಕರಾರು ಬಂದಾಗ ವಿಶೇಷ ಭೂಸ್ವಾಧೀನ ಅಧಿಕಾರಿ ರಾಜಕುಮಾರ ಜಾಧವ ಅವರು ಹೆಚ್ಚುವರಿಯಾಗಿ ಪಡೆದ ಹಣವನ್ನು ಕಾರ್ಯಾಲಯಕ್ಕೆ ಮರಳಿ ನೀಡುವಂತೆ ಜಂಟಿ ಖಾತೆದಾರರಿಗೆ ಸೂಚಿಸಿದರೂ ವಾಪಸ್ ನೀಡಿಲ್ಲ.

ವಿಶೇಷ ಭೂ-ಸ್ವಾಧೀನ ಅಧಿಕಾರಿಗಳು ವಿಚಾರಣೆ ನಂತರ ಹಣವನ್ನು ಹಿಂದಿರುಗಿಸುವಂತೆ ಆದೇಶಿಸಿ ಒಂದು ವಾರದೊಳಗಾಗಿ ಹಣ ಕಾರ್ಯಾಲಯಕ್ಕೆ ನೀಡುವಂತೆ ಸಿರವಾರ ತಹಶೀಲ್ದಾರ್ ಮೂಲಕ ನೋಟಿಸ್ ಜಾರಿ ಮಾಡಿದ್ದಾರೆ. ಹಣ ಪಡೆದವರು ಇದಕ್ಕೆ ಪ್ರತಿಕ್ರಿಯಿಸದ ಕಾರಣ ವಂಚನೆ ಪ್ರಕರಣ ದಾಖಲಾಗಿದೆ.

'ವಿಶೇಷ ಭೂ ಸ್ವಾಧೀನ ಅಧಿಕಾರಿ ಹರ್ಷಾ ಶೆಟ್ಟಿ ಅವಾರ್ಡ್ ಮಾಡಿರುವುದು ಲೋಪಗಳಿಂದ ಕೂಡಿದ್ದಲ್ಲದೆ ಜೆಎಂಸಿ ಸರ್ವೆ ಮಾಡದೆ ಇರುವುದರಿಂದ ಇಷ್ಟೆಲ್ಲ ಗೊಂದಲಕ್ಕೆ ಕಾರಣವಾಗಿದೆ. 2013 ಭೂ ಸ್ವಾಧೀನ ಹೊಸ ಕಾಯ್ದೆಯ ಪ್ರಕಾರ ಜೆಎಂಸಿ (ಜಂಟಿ ಭೂ-ಮಾಪನಾ ಸರ್ವೆ) ವರದಿಯಾಧರಿಸಿ ಪರಿಹಾರ ಹಣ ನೀಡಬೇಕು ಎಂಬ ಕಾಯ್ದೆಯನ್ನು ಉಲ್ಲಂಘಿಸಲಾಗಿದೆ. ಡಿಶಾಂಕ್ ಎಂಬ ಖಾಸಗಿ ಆ್ಯಪ್ ಬಳಸಿ ಹಣ ಪಾವತಿಸಲಾಗಿದೆ' ಎಂದು ಶ್ರೀದೇವಿ ಮಲ್ಲಯ್ಯ ಸ್ವಾಮಿ ದೂರಿದ್ದಾರೆ.

'ಹೆದ್ದಾರಿ ವಿಸ್ತರಣೆ ಕಾರಣಕ್ಕೆ ಮನೆ ತೆರವುಗೊಳಿಸಲಿದ್ದೇವೆ. ಸರ್ಕಾರದಿಂದ ಬಿಡುಗಡೆಯಾದ ಪರಿಹಾರದ ಹಣವನ್ನು ಜಂಟಿ ಖಾತೆದಾರ ಸಿದ್ದನಗೌಡರು ತೆಗೆದುಕೊಂಡಿದ್ದಾರೆ ಎಂದು ತಿಳಿಸಿದ ಮೇಲೆಯೇ ನನಗೆ ವಿಷಯ ಗೊತ್ತಾಗಿದೆ. ಜಿಲ್ಲಾಡಳಿತ ನಿಜವಾದ ಸಂತ್ರಸ್ತರಿಗೆ ಪರಿಹಾರ ಕೊಡಿಸಬೇಕು' ಎಂದು ಮನವಿ ಮಾಡಿದ್ದಾರೆ.

ಭಾರತದಲ್ಲಿ ಸ್ಥಾಪನೆಯಾದ ಮೊದಲ ಖಾಸಗಿ ಸೇನಾ ವಿಮಾನ ತಯಾರಿಕಾ ಘಟಕ

ಟಾಟಾ ಏರ್‌ಕ್ರಾಫ್ಟ್ ಕಾಂಪ್ಲೆಕ್ಸ್ ಉದ್ಘಾಟನೆ

ವಡೋದರಾ (ಪಿಟಿಐ): ಸಿ–295 ಸೇನಾ ವಿಮಾನಗಳ ತಯಾರಿಕೆಗಾಗಿ ವಡೋದರಾದಲ್ಲಿ ನಿರ್ಮಾಣವಾಗಿರುವ 'ಟಾಟಾ ಏರ್‌ಕ್ರಾಫ್ಟ್ ಕಾಂಪ್ಲೆಕ್ಸ್' ಅನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಸ್ಪೇನ್‌ನ ಪ್ರಧಾನಿ ಪೆಡ್ರೊ ಸ್ಯಾಂಚೆಸ್ ಅವರು ಸೋಮವಾರ ಉದ್ಘಾಟಿಸಿದರು.

ಇದು ಸೇನಾ ವಿಮಾನ ತಯಾರಿಕೆಗೆ ಭಾರತದಲ್ಲಿ ಸ್ಥಾಪನೆಯಾದ ಮೊದಲ ಖಾಸಗಿ ಘಟಕವಾಗಿದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ ಮೋದಿ ಅವರು, 'ಭಾರತ–ಸ್ಪೇನ್ ನಡುವಿನ ಪಾಲುದಾರಿಕೆಯು ಹೊಸ ದಿಕ್ಕನ್ನು ಪಡೆದಿದೆ. ಈ ಯೋಜನೆಯು ಉಭಯ ರಾಷ್ಟ್ರಗಳ ನಡುವಿನ ಬಾಂಧವ್ಯ ವೃದ್ಧಿಸುವುದು ಮಾತ್ರವಲ್ಲದೆ, 'ಜಗತ್ತಿಗಾಗಿ ಭಾರತದಲ್ಲಿಯೇ ತಯಾರಿಸಿ' ಎಂಬ ಧ್ಯೇಯಕ್ಕೆ ಮತ್ತಷ್ಟು ಬಲ ತಂದುಕೊಡಲಿದೆ' ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಏರ್‌ಬಸ್ ಮತ್ತು ಟಾಟಾ ಸಂಸ್ಥೆಗಳಿಗೆ ಅವರು ಅಭಿನಂದನೆ ಸಲ್ಲಿಸಿದರು. ಇತ್ತೀಚೆಗೆ ನಿಧನರಾದ ರತನ್ ಟಾಟಾ ಅವರಿಗೆ ಗೌರವ ನಮನ ಸಲ್ಲಿಸಿದರು.

'ಸಿ–295 ಸೇನಾವಿಮಾನ ತಯಾರಿಕಾ ಘಟಕವು ಭಾರತದ ನೂತನ ಕಾರ್ಯಶೈಲಿಯ ಪ್ರತಿಬಿಂಬ. ಯಾವುದೇ ಯೋಜನೆಯನ್ನು ಶೀಘ್ರವಾಗಿ ಕಾರ್ಯಗತಗೊಳಿಸುವ ಭಾರತದ ಬದ್ಧತೆಗೆ ಈ ಕಾರ್ಖಾನೆಯೇ ಸಾಕ್ಷಿ. ಇಲ್ಲಿ ತಯಾರಾದ ವಿಮಾನಗಳನ್ನು ಒಂದು ದಿನ ರಫ್ತು ಮಾಡುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಭಾರತದ ರಕ್ಷಣಾ ತಯಾರಿಕಾ ವ್ಯವಸ್ಥೆಯು ಹೊಸ ಎತ್ತರಕ್ಕೆ ಬೆಳೆಯುತ್ತಿದೆ. ಹತ್ತು ವರ್ಷಗಳ ಹಿಂದೆ ಪುಟ್ಟ ಹೆಜ್ಜೆ ಇಡದಿದ್ದರೆ ಈ ಹಂತಕ್ಕೆ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಭಾರತದಲ್ಲಿ ಇಷ್ಟು ದೊಡ್ಡ ತಯಾರಿಕಾ ಘಟಕದ ಸ್ಥಾಪನೆ ಸಾಧ್ಯ ಎಂದು ಆಗ ಯಾರೂ ಊಹಿಸಿರಲಿಲ್ಲ. ನಮ್ಮ ಸರ್ಕಾರವು, ಹೊಸ ಹಾದಿಯಲ್ಲಿ ನಡೆಯುತ್ತಾ, ಹೊಸದಾದ ಗುರಿಗಳನ್ನು ಹೊಂದಲು ನಿರ್ಧರಿಸಿತು. ಅದರ ಪ್ರತಿಫಲವೇ ಈ ಕಾರ್ಖಾನೆ' ಎಂದು ಹೇಳಿದರು.

ಸರಿಯಾದ ಯೋಜನೆ ಮತ್ತು ಸಹಭಾಗಿತ್ವವು ಪ್ರಗತಿಗೆ ಮುನ್ನುಡಿ ಎಂಬುದಕ್ಕೆ ಭಾರತದ ರಕ್ಷಣಾ ವಲಯದ ರೂಪಾಂತರವೇ ಸಾಕ್ಷಿ ಎಂದು ಹೇಳಿದರು.

ಉದ್ಯೋಗ ಸೃಷ್ಟಿ: ಟಾಟಾ ಏರ್‌ಬಸ್ ಕಾರ್ಖಾನೆಯು ಸಾವಿರಾರು ಉದ್ಯೋಗ ಸೃಷ್ಟಿಸುತ್ತದೆ. 18,000 ವಿಮಾನಗಳ ಬಿಡಿ ಭಾಗಗಳ ದೇಶೀಯ ಉತ್ಪಾದನೆಗೆ ಕಾರ್ಖಾನೆ ಬೆಂಬಲ ನೀಡುತ್ತದೆ. ಭಾರತದಾದ್ಯಂತ ಇರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ (ಎಂಎಸ್‌ಎಂಇ) ಅಗಾಧ ಅವಕಾಶ ನೀಡುತ್ತದೆ ಎಂದು ಪ್ರಧಾನಿ ಹೇಳಿದರು.

ಒಪ್ಪಂದದ ಅನುಸಾರ ಟಾಟಾ ಏರ್‌ಕ್ರಾಫ್ಟ್ ಕಾಂಪ್ಲೆಕ್ಸ್‌ನಲ್ಲಿ 40 ವಿಮಾನಗಳನ್ನು ತಯಾರಿಸಲಾಗುತ್ತದೆ. ಉಳಿದ 16 ಯುದ್ಧ ವಿಮಾನಗಳನ್ನು 'ಏರ್‌ಬಸ್' ರವಾನಿಸಲಿದೆ.

ಟಾಟಾ ಏರ್‌ಕ್ರಾಫ್ಟ್ ಕಾಂಪ್ಲೆಕ್ಸ್ ನಿರ್ಮಾಣಕ್ಕಾಗಿ ಅಕ್ಟೋಬರ್ 2022ರಲ್ಲಿ ಪ್ರಧಾನಿ ಮೋದಿ ಶಂಕುಸ್ಥಾಪನೆ ನೆರವೇರಿಸಿದ್ದರು.



ವಡೋದರಾದಲ್ಲಿ ಸೋಮವಾರ ನಡೆದ 'ಟಾಟಾ ಏರ್‌ಕ್ರಾಫ್ಟ್ ಕಾಂಪ್ಲೆಕ್ಸ್' ಉದ್ಘಾಟನೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಸ್ಪೇನ್‌ನ ಪ್ರಧಾನಿ ಪೆಡ್ರೊ ಸ್ಯಾಂಚೆಸ್ ಭಾಗಿಯಾಗಿದ್ದರು ಪಿಟಿಐ ಚಿತ್ರ

> **ನೂತನ ಕಾರ್ಖಾನೆಯು ಭಾರತ ಮತ್ತು ಜಗತ್ತಿನ ಅಗತ್ಯಗಳಿಗೆ ಅನುಗುಣವಾಗಿ ನಾಗರಿಕ ವಿಮಾನಗಳ ವಿನ್ಯಾಸದಿಂದ ಹಿಡಿದು ತಯಾರಿಕೆಯವರೆಗೆ ಪ್ರಮುಖ ಪಾತ್ರ ವಹಿಸಲಿದೆ**
> **ನರೇಂದ್ರ ಮೋದಿ,** ಪ್ರಧಾನಿ

ಮೋದಿ–ಪೆಡ್ರೊ ರೋಡ್ ಷೋ

ಪ್ರಧಾನಿ ನರೇಂದ್ರ ಮೋದಿ ಮತ್ತು ಸ್ಪೇನ್‌ನ ಪ್ರಧಾನಿ ಪೆಡ್ರೊ ಸ್ಯಾಂಚೆಸ್ ಅವರು ಗುಜರಾತ್‌ನ ವಡೋದರಾದಲ್ಲಿ ಸೋಮವಾರ ಬೆಳಿಗ್ಗೆ ರೋಡ್ ಷೋ ನಡೆಸಿದರು.

ಉಭಯ ದೇಶಗಳ ನಾಯಕರು ತೆರೆದ ಜೀಪಿನಲ್ಲಿ ಸಾಗುತ್ತಾ, ವಿಮಾನ ನಿಲ್ದಾಣದಿಂದ ಟಾಟಾ ಏರ್‌ಕ್ರಾಫ್ಟ್ ಕಾಂಪ್ಲೆಕ್ಸ್‌ವರೆಗೆ, ಸುಮಾರು 2.5 ಕಿ.ಮೀ ಉದ್ದಕ್ಕೂ ಎರಡೂ ಬದಿಯಲ್ಲಿ ನೆರೆದಿದ್ದ ಜನರತ್ತ ಕೈಬೀಸಿದರು.

ಹಲವು ಕಲಾವಿದರು ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಪ್ರದರ್ಶನಗಳನ್ನು ನೀಡಿ ಉಭಯ ನಾಯಕರನ್ನು ಸ್ವಾಗತಿಸಿದರು.

ಉಭಯ ನಾಯಕರ ದ್ವಿಪಕ್ಷೀಯ ಸಭೆ

ನರೇಂದ್ರ ಮೋದಿ ಮತ್ತು ಪೆಡ್ರೊ ಸ್ಯಾಂಚೆಸ್ ಅವರು ವಡೋದರಾದ ದರ್ಬಾರ್ ಸಭಾಂಗಣದಲ್ಲಿರುವ ಲಕ್ಷ್ಮಿ ವಿಲಾಸ ಅರಮನೆಯಲ್ಲಿ ದ್ವಿಪಕ್ಷೀಯ ಸಭೆ ನಡೆಸಿದರು.

ಪೆಡ್ರೊ ಅವರು ಇದೇ ಮೊದಲ ಬಾರಿಗೆ ಭಾರತಕ್ಕೆ ಭೇಟಿ ನೀಡಿದ್ದಾರೆ.

ಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ ಅವರು, 'ಪೆಡ್ರೊ ಅವರ ಭೇಟಿಯು ಉಭಯ ದೇಶಗಳ ನಡುವಿನ ಬಾಂಧವ್ಯಕ್ಕೆ ಹೊಸ ಶಕ್ತಿ ಮತ್ತು ಉತ್ಸಾಹ ತುಂಬಿದೆ' ಎಂದು ಹೇಳಿದರು.

'ಉಭಯ ದೇಶಗಳ ಬಾಂಧವ್ಯವು ಶತಮಾನಗಳಷ್ಟು ಹಳೆಯದಾಗಿದ್ದು, ಈ ಸಹಭಾಗಿತ್ವದ ಹೊಸ ಅಧ್ಯಾಯವು ಆರಂಭವಾಗಿದೆ. ಪ್ರಜಾಪ್ರಭುತ್ವದ ಮೇಲಿನ ನಂಬಿಕೆಯು ನಮ್ಮ ಬಂಧ ಬೆಸೆದಿದೆ' ಎಂದರು.

'ಉಭಯ ದೇಶಗಳು ಆರ್ಥಿಕತೆ, ರಕ್ಷಣೆ, ಫಾರ್ಮಾ, ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ಹೊಂದಿವೆ. ಉಭಯ ದೇಶಗಳು ಜಾಗತಿಕ ಶಾಂತಿ, ಸಮೃದ್ಧಿ ಮತ್ತು ಸಹಕಾರಕ್ಕೆ ಮಹತ್ವ ನೀಡುತ್ತವೆ. ಸ್ಪೇನ್‌ನಲ್ಲಿ ಯೋಗ ಜನಪ್ರಿಯ, ಇಲ್ಲಿನವರಿಗೆ ಸ್ಪೇನ್‌ನ ಫುಟ್‌ಬಾಲ್ ಮೆಚ್ಚು' ಎಂದು ಹೇಳಿದರು.

ಭಾರತವು ಈ ವರ್ಷ ಬಾರ್ಸಿಲೋನಾದಲ್ಲಿ ನೂತನ ರಾಯಭಾರ ಕಚೇರಿ ತೆರೆಯಲಿದೆ ಎಂದು ಹೇಳಿದ ಅವರು, ಬೆಂಗಳೂರಿನಲ್ಲಿ ಹೊಸ ರಾಯಭಾರ ಕಚೇರಿ ಸ್ಥಾಪಿಸುವ ಸ್ಪೇನ್‌ನ ನಿರ್ಧಾರವನ್ನು ಅವರು ಸ್ವಾಗತಿಸಿದರು.

ಒಗ್ಗಟ್ಟಿನಿಂದ ಪ್ರಭಾವ ದ್ವಿಗುಣ: ಪೆಡ್ರೊ

ಭಾರತ–ಸ್ಪೇನ್ ಒಟ್ಟಾಗಿ ಕೆಲಸ ಮಾಡಿದಲ್ಲಿ ಉಭಯ ದೇಶಗಳ ಪ್ರಭಾವ ದ್ವಿಗುಣವಾಗುತ್ತದೆ ಎಂದು ಸ್ಪೇನ್ ಪ್ರಧಾನಿ ಪೆಡ್ರೊ ಅಭಿಪ್ರಾಯಪಟ್ಟರು.

ಹೂಡಿಕೆ, ರೈಲ್ವೆ, ಸಾಂಸ್ಕೃತಿಕ ವಿನಿಮಯ ಸೇರಿದಂತೆ ಹಲವು ಕ್ಷೇತ್ರಗಳಿಗೆ ಸಂಬಂಧಿಸಿದ ಒಪ್ಪಂದಕ್ಕೆ ಸಹಿ ಮಾಡಿದ್ದೇವೆ ಎಂದು ತಿಳಿಸಿದರು.

ಹವಾಮಾನ ವೈಪರೀತ್ಯ, ಬಡತನದ ವಿರುದ್ಧದ ಹೋರಾಟ ಮತ್ತು ಸಮಾನತೆಯಂತಹ ಸವಾಲುಗಳು ರಾಜಕೀಯ ಇಚ್ಛಾಶಕ್ತಿ ಬಯಸುತ್ತವೆ. ಈ ಹೋರಾಟಕ್ಕೆ ಭಾರತದ ನಾಯಕತ್ವದ ಅಗತ್ಯವಿದೆ ಎಂದು ಅವರು ಹೇಳಿದರು.

ಸಿ–295 ವಿಮಾನ ಎಂದರೇನು?

ಸಿ–295 ಎಂಬುದು ಮಧ್ಯಮಗಾತ್ರದ ಸೇನಾ ಸರಕು ಸಾಗಣೆ ವಿಮಾನ. ಇದನ್ನು ವಿನ್ಯಾಸ ಮಾಡಿರುವುದು ಮತ್ತು ಮೊದಲು ತಯಾರಿಸುತ್ತಿದ್ದುದು ಸ್ಪೇನ್‌ನ ವಿಮಾನಯಾನ ಸಂಸ್ಥೆ ಸಿಎಎಸ್‌ಎ. ಸದ್ಯ ಇದು ಯುರೋಪಿಯನ್ ಮಲ್ಟಿನ್ಯಾಷನಲ್ ಏರ್‌ಬಸ್ ಡಿಫೆನ್ಸ್ ಮತ್ತು ಸ್ಪೇಸ್ ಡಿವಿಷನ್‌ನ ಭಾಗವಾಗಿದೆ.

ಸಿ–295 ವಿಮಾನವನ್ನು ವೈದ್ಯಕೀಯ ಸ್ಥಳಾಂತರ, ವಿಪತ್ತು ಪ್ರತಿಕ್ರಿಯೆ ಮತ್ತು ಕಡಲತಡಿಯ ಗಸ್ತು ಕರ್ತವ್ಯಕ್ಕೆ ಬಳಸಲಾಗುತ್ತದೆ.

'ಭಾರತ–ಚೀನಾ ಒಪ್ಪಂದ ಸಕಾರಾತ್ಮಕ ಬೆಳವಣಿಗೆ'

ನವದೆಹಲಿ (ಪಿಟಿಐ): ಗಡಿ ವಿಚಾರವಾಗಿ ಚೀನಾ-ಭಾರತ ನಡುವಿನ ದ್ವಿಪಕ್ಷೀಯ ಒಪ್ಪಂದವು ಸಕಾರಾತ್ಮಕ ಬೆಳವಣಿಗೆ ಎಂದು ಭಾರತದಲ್ಲಿನ ರಷ್ಯಾ ರಾಜತಾಂತ್ರಿಕ ಅಧಿಕಾರಿ ಡೆನಿಸ್ ಅಲಿಪೊವ್ ಸೋಮವಾರ ಹೇಳಿದರು.

ಬ್ರಿಕ್ಸ್ ಶೃಂಗಸಭೆ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ–ಜಿನ್‌ಪಿಂಗ್ ಅವರೊಂದಿಗೆ ನಡೆದ ಮಾತುಕತೆಯನ್ನು ಅವರು ಸ್ವಾಗತಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬ್ರಿಕ್ಸ್ ಒಕ್ಕೂಟವು ಪಾಶ್ಚಿಮಾತ್ಯ ರಾಷ್ಟ್ರಗಳ ವಿರೋಧಿಯಲ್ಲ. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಒಳಗೊಂಡಿಲ್ಲ' ಎಂದು ಹೇಳಿದರು.

ಆಯುಷ್ಮಾನ್ ಭಾರತ ಆರೋಗ್ಯ ವಿಮೆಯ ವ್ಯಾಪ್ತಿ ವಿಸ್ತರಣೆ

ನವದೆಹಲಿ (ಪಿಟಿಐ): 'ಆಯುಷ್ಮಾನ್ ಭಾರತ' ಆರೋಗ್ಯ ವಿಮಾ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು 70 ವರ್ಷ ಹಾಗೂ ಅದಕ್ಕಿಂತ ಹೆಚ್ಚು ವಯಸ್ಸಾದ ಎಲ್ಲ ಹಿರಿಯ ನಾಗರಿಕರಿಗೆ ಮಂಗಳವಾರ ವಿಸ್ತರಿಸಲಿದ್ದಾರೆ. ಅಲ್ಲದೆ, ಸುಮಾರು ₹12,850 ಕೋಟಿ ಮೌಲ್ಯದ ವಿವಿಧ ಯೋಜನೆಗಳಿಗೆ ಹಸಿರು ನಿಶಾನೆ ತೋರಲಿದ್ದಾರೆ.

ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಈ ಮಹತ್ವದ ಯೋಜನೆಯ ವ್ಯಾಪ್ತಿಯನ್ನು ಆಯುರ್ವೇದ ದಿನಾಚರಣೆಯಂದು ಮೋದಿ ಅವರು ವಿಸ್ತರಿಸಲಿದ್ದಾರೆ. ಆಯುರ್ವೇದ ದಿನವು ಔಷಧಗಳ ದೇವ ಎಂದು ನಂಬಲಾಗಿರುವ ಧನ್ವಂತರಿಯ ಜನ್ಮದಿನವೂ ಹೌದು.

ಪ್ರತ್ಯೇಕ ಕಾರ್ಯಕ್ರಮವೊಂದರಲ್ಲಿ ಮೋದಿ ಅವರು ಕೇಂದ್ರ ಸರ್ಕಾರದ ಉದ್ಯೋಗ ಮೇಳದ ಭಾಗವಾಗಿ, 51 ಸಾವಿರ ಮಂದಿಗೆ ನೇಮಕಾತಿ ಪತ್ರ ವಿತರಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಇರುವ ಅಖಿಲ ಭಾರತ ಆಯುರ್ವೇದ ಇನ್‌ಸ್ಟಿಟ್ಯೂಟ್‌ನ ಎರಡನೆಯ ಹಂತಕ್ಕೆ ಕೂಡ ಮೋದಿ ಅವರು ಚಾಲನೆ ನೀಡಲಿದ್ದಾರೆ. ಎರಡನೆಯ ಹಂತದಲ್ಲಿ ಪಂಚಕರ್ಮ ಆಸ್ಪತ್ರೆ, ಆಯುರ್ವೇದ ಔಷಧ ತಯಾರಿಕೆಗೆ ಔಷಧಾಲಯ, ಕೇಂದ್ರೀಯ ಗ್ರಂಥಾಲಯ ಸೌಲಭ್ಯ ಇರಲಿವೆ.

ಬೇರೆ ಬೇರೆ ಏಮ್ಸ್ ಸಂಸ್ಥೆಗಳಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಅವರು ಉದ್ಘಾಟಿಸಲಿದ್ದಾರೆ. ಮಧ್ಯಪ್ರದೇಶದ ಶಿವಪುರಿ, ರತಲಾಂ, ಖಂಡವಾ, ರಾಜಗಢ, ಮಂದಸೌರ್‌ನಲ್ಲಿ ನರ್ಸಿಂಗ್ ಕಾಲೇಜುಗಳಿಗೆ ಅವರು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಕರ್ನಾಟಕ ಸೇರಿದಂತೆ ಒಟ್ಟು 21 ಕಡೆಗಳಲ್ಲಿ ಆರೈಕೆ ಘಟಕಗಳಿಗೆ ಅವರು ಶಂಕುಸ್ಥಾಪನೆ ನಡೆಸಲಿದ್ದಾರೆ.

ಕರ್ನಾಟಕದ ಬೊಮ್ಮಸಂದ್ರ ಮತ್ತು ನರಸಾಪುರದಲ್ಲಿ ಹಾಗೂ ಬೇರೆ ಬೇರೆ ರಾಜ್ಯಗಳಲ್ಲಿ ನಿರ್ಮಿಸಿರುವ ಇಎಸ್‌ಐಸಿ ಆಸ್ಪತ್ರೆಗಳನ್ನು ಉದ್ಘಾಟಿಸಲಿದ್ದಾರೆ.

11 ಸಂಸ್ಥೆಗಳಲ್ಲಿ ಆರೋಗ್ಯ ಸೇವೆಯನ್ನು ಒದಗಿಸಲು ಡ್ರೋನ್‌ಗಳ ಬಳಕೆಗೆ ಅವರು ಚಾಲನೆ ನೀಡಲಿದ್ದಾರೆ. ರಿಷಿಕೇಶದ ಏಮ್ಸ್‌ನಲ್ಲಿ ಹೆಲಿಕಾಪ್ಟರ್ ಮೂಲಕ ತುರ್ತು ವೈದ್ಯಕೀಯ ಸೇವೆ ಒದಗಿಸುವ ಸೌಲಭ್ಯವನ್ನು ಕೂಡ ಅವರು ಉದ್ಘಾಟಿಸಲಿದ್ದಾರೆ.

ಪೊಲೀಸರ ಸಹಕಾರದಿಂದ ಹಣ ಕಳೆದುಕೊಳ್ಳದೆ ಸುರಕ್ಷಿತವಾಗಿ ಪಾರಾದ ಐ.ಟಿ ಉದ್ಯೋಗಿ

ವಂಚಕರಿಂದ 30 ತಾಸು ಡಿಜಿಟಲ್ ಅರೆಸ್ಟ್

ಹೈದರಾಬಾದ್ (ಪಿಟಿಐ): ಸೈಬರ್ ಅಪರಾಧಿಗಳಿಂದ ಹಣ ಅಕ್ರಮ ವರ್ಗಾವಣೆಯ ನಕಲಿ ಪ್ರಕರಣದಲ್ಲಿ ಸುಮಾರು 30 ತಾಸು 'ಡಿಜಿಟಲ್ ಅರೆಸ್ಟ್' ಆಗಿದ್ದ 44 ವರ್ಷದ ಐ.ಟಿ ಉದ್ಯೋಗಿಯೊಬ್ಬರು, ಪೊಲೀಸರ ನೆರವಿನಿಂದ ಯಾವುದೇ ಹಣ ಕಳೆದುಕೊಳ್ಳದೆ ಸುರಕ್ಷಿತವಾಗಿ ಪಾರಾಗಿದ್ದಾರೆ.

ವಂಚಕರು ಮುಂಬೈ ಪೊಲೀಸ್ ಅಧಿಕಾರಿಗಳ ಸೋಗಿನಲ್ಲಿ ಸಂತ್ರಸ್ತನನ್ನು ಅ. 26ರ ನಸುಕಿನಿಂದ ಅ.27ರವರೆಗೆ ಡಿಜಿಟಲ್ ಬಂಧನದಲ್ಲಿರಿಸಿದ್ದರು. ಮೆಸೇಜಿಂಗ್ ಆ್ಯಪ್‌ನಲ್ಲಿ ವಿಡಿಯೊ ಕಾಲ್ ಮಾಡಿ, ಸಂತ್ರಸ್ತನಿಗೆ ಕರೆ ಸಂಪರ್ಕ ಸ್ಥಗಿತಗೊಳಿಸದಂತೆ ನಿರ್ದೇಶನ ನೀಡಿದ್ದರು ಎಂದು ಸೋಮವಾರ ಪೊಲೀಸರು ತಿಳಿಸಿದ್ದಾರೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸಂತ್ರಸ್ತನನ್ನು ಬಂಧಿಸುವುದಾಗಿ ಬೆದರಿಸಿ, ₹40 ಲಕ್ಷ ಹಣಕ್ಕೆ ಬೇಡಿಕೆ ಇರಿಸಿದ್ದರು. ಅ.27ರಂದು ಬೆಳಿಗ್ಗೆ ಸೈಬರ್ ವಂಚಕರ ಕರೆ ಕಡಿತಗೊಂಡ ನಂತರ ಸಂತ್ರಸ್ತ ಹೈದರಾಬಾದ್‌ನ ಸೈಬರ್ ಅಪರಾಧ ಪೊಲೀಸ್ ಠಾಣೆಗೆ ವಂಚಕರ ಬಗ್ಗೆ ಮಾಹಿತಿ ನೀಡಿದ್ದಾರೆ.

ಪ್ರಕರಣ ನಡೆದಿದ್ದು ಹೇಗೆ?: ಹಣ ಅಕ್ರಮ ವರ್ಗಾವಣೆ ಪ್ರಕರಣ ಮುಂಬೈನಲ್ಲಿ ದಾಖಲಾಗಿರುವುದಾಗಿ ಆತನ ಆಧಾರ್ ಮತ್ತು ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಅ.25ರಂದು ರಾತ್ರಿ ಮೊಬೈಲ್‌ಗೆ ಸಂದೇಶ ಕಳುಹಿಸಿದ್ದರು. ಆಗ, ಸಂತ್ರಸ್ತ ಆ ಸಂದೇಶ ನಿರ್ಲಕ್ಷಿಸಿದ್ದರು. ಆದಾಗ್ಯೂ ವಂಚಕರು, ಮುಂಬೈ ಪೊಲೀಸ್ ಅಧಿಕಾರಿಗಳ ಸೋಗಿನಲ್ಲಿ ಅ.26ರಂದು ನಸುಕಿನ 3 ಗಂಟೆಯಲ್ಲಿ ವಿಡಿಯೊ ಕಾಲ್ ಮಾಡಿ, ತಾವು ಬಹು ಕೋಟಿ ಹಣ ಅಕ್ರಮ ವರ್ಗಾವಣೆಯಲ್ಲಿ ನಂಟು ಹೊಂದಿರುವುದರಿಂದ ತಮ್ಮನ್ನು ಬಂಧಿಸುವುದಾಗಿ ಬೆದರಿಸಿದ್ದರು.



ಈ ಮಾಹಿತಿಯನ್ನು ಕುಟುಂಬದವರು ಮತ್ತು ಬೇರೆ ಯಾರಿಗೂ ತಿಳಿಸದಂತೆ ಎಚ್ಚರಿಸಿ, ಎಫ್‌ಐಆರ್, ಕೋರ್ಟ್ ಮೊಕದ್ದಮೆ ಹಾಗೂ ವಾರಂಟ್ ನೋಟಿಸ್ ಬಗ್ಗೆ ನಕಲಿ ದಾಖಲೆ ಸೃಷ್ಟಿಸಿ ಸಂತ್ರಸ್ತನಿಗೆ ಕಳುಹಿಸಿ, ಹೆದರಿಸಿದ್ದರು.

ಪ್ರಕರಣದಲ್ಲಿ ಬಂಧಿಸಬಾರದೆಂದರೆ ಹಣ ಕೊಡಬೇಕೆಂದು ಬೇಡಿಕೆ ಇರಿಸಿದ್ದಲ್ಲದೆ, ಸಂತ್ರಸ್ತ ಬ್ಯಾಂಕ್ ಖಾತೆಗಳಲ್ಲಿ ಹೊಂದಿರುವ ಹಣದ ಬಗ್ಗೆ ಮಾಹಿತಿ ಕಲೆಹಾಕಿದ್ದರು. ಉಳಿತಾಯ ಖಾತೆ ಮತ್ತು ಎಫ್‌ಡಿ ಇಟ್ಟಿರುವ ಹಣ ಸೇರಿ ₹25 ಲಕ್ಷ ಇರುವುದಾಗಿ ಸಂತ್ರಸ್ತ ವಂಚಕರಿಗೆ ಮಾಹಿತಿ ನೀಡಿದ. ನಂತರ ವಂಚಕರು, ಸಂತ್ರಸ್ತನಿಗೆ ಮನೆಯಿಂದ ಹೊರಬಂದು ಹೋಟೆಲ್ ಅಥವಾ ಲಾಡ್ಜ್‌ನಲ್ಲಿ ಉಳಿಯುವಂತೆ ಸೂಚಿಸಿ, ಮನೆಯಲ್ಲಿದ್ದರೆ ಪೊಲೀಸರು ಬಂಧಿಸುತ್ತಾರೆ ಎಂದೂ ಹೆದರಿಸಿದ್ದರು. ಸಂತ್ರಸ್ತ ಮಿಯಾಪುರ ಪ್ರದೇಶದಲ್ಲಿರುವ ತನ್ನ ಮನೆಯಿಂದ ಹೊರಬಂದು 15 ಕಿ.ಮೀ. ದೂರದ ಅಮೀರ್‌ಪೇಟೆ ಪ್ರದೇಶಕ್ಕೆ ಬೈಕ್‌ನಲ್ಲಿ ಹೋಗಿ ಅ.26ರಂದು ಲಾಡ್ಜ್‌ನಲ್ಲಿ ಕೊಠಡಿ ಬಾಡಿಗೆ ಪಡೆದು ವಾಸ್ತವ್ಯ ಮಾಡುವವರೆಗೂ ವಂಚಕರು ಕರೆ ಸ್ಥಗಿತಗೊಳಿಸದೆ ನಿರಂತರ ಕಣ್ಗಾವಲಿರಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಇದು ಪರಿಶೀಲನೆಯ ಪ್ರಕ್ರಿಯೆ, ಅ.28ರಂದು ಕೂಡ ಮುಂದುವರಿಯಲಿದೆ. ಆರ್‌ಟಿಜಿಎಸ್ ಮೂಲಕ ಹಣ ಸಂದಾಯವಾದ ನಂತರ ಬಿಡುಗಡೆ ಮಾಡುವುದಾಗಿ ಹೇಳಿ ಸಂತ್ರಸ್ತನನ್ನು ನಂಬಿಸಿದ್ದರು. ಅ. 27ರ ಬೆಳಿಗ್ಗೆ 4 ಗಂಟೆ ಸುಮಾರಿಗೆ ವಂಚಕರ ಕರೆ ಕಡಿತವಾಗಿದೆ. ಆಗ ಸಂತ್ರಸ್ತ ಸೈಬರ್ ಪೊಲೀಸರಿಗೆ ಕರೆ ಮಾಡಿ ನೆರವು ಕೇಳಿದರು. ಕರೆ ಸ್ವೀಕರಿಸಿದ ಕಾನ್‌ಸ್ಟೆಬಲ್ ಎಂ. ಗಣೇಶ್ ಸಂತ್ರಸ್ತನಿಗೆ ಇದೊಂದು ವಂಚನೆ ಕರೆ, ಹೆದರುವ ಅಗತ್ಯವಿಲ್ಲವೆಂದು ಧೈರ್ಯ ತುಂಬಿದರು. ನಂತರ ವಂಚಕರ ಸಂಖ್ಯೆ ನಿರ್ಬಂಧಿಸಲು ಸೂಚಿಸಿ, ಸಂತ್ರಸ್ತನನ್ನು ಅವರ ನೆರೆಹೊರೆಯವರ ಮೂಲಕ ಸುರಕ್ಷಿತವಾಗಿ ಮನೆ ಸೇರುವಂತೆ ಮಾಡಿದ್ದಾರೆ.



ಶುದ್ಧೀಕರಣ... ನವದೆಹಲಿಯಲ್ಲಿ ಸೋಮವಾರ ಜಲಮಂಡಳಿ ಕೆಲಸಗಾರರು ಮುಂಬರುವ ಛತ್ ಪೂಜಾ ಕಾರ್ಯಕ್ರಮಕ್ಕಾಗಿ, ಯಮುನಾ ನದಿಯಲ್ಲಿನ ಕಾಲಿಂದಿ ಕುಂಜ್ ಸಮೀಪ ಮಾಲಿನ್ಯದಿಂದ ಉಂಟಾಗಿರುವ ಭಾರಿ ನೊರೆಯನ್ನು ನಿವಾರಿಸುವ ಕೆಲಸದಲ್ಲಿ ತೊಡಗಿದ್ದರು ಪಿಟಿಐ ಚಿತ್ರ

'ಪ್ರತಿ ಮನೆಗೂ ಸಂಘದ ಸಂದೇಶ ತಲುಪಿಸಿ'

ಮಥುರಾ (ಉ.ಪ್ರದೇಶ): 'ಹಿಂದೂ ಸಮಾಜದಲ್ಲಿ ತಳಮಟ್ಟದಿಂದ ಸಾಮಾಜಿಕ ಸಾಮರಸ್ಯ ತರುವ ನಿಟ್ಟಿನಲ್ಲಿ 'ಪ್ರಚಾರಕ'ರು ಸಂಘದ ಸಂದೇಶಗಳನ್ನು ಮನೆ ಮನೆಗೂ ತಲುಪಿಸಬೇಕು' ಎಂದು ಆರ್‌ಎಸ್‌ಎಸ್ ಮುಖಂಡರು ತಿಳಿಸಿದರು.

ಇಲ್ಲಿನ ಪರಖಾಮ್ ಗ್ರಾಮದ ದೀನದಯಾಳ್ ಉಪಾಧ್ಯಾಯ ಗೋವು ವಿಜ್ಞಾನ ಸಂಶೋಧನಾ ಹಾಗೂ ತರಬೇತಿ ಕೇಂದ್ರದಲ್ಲಿ ನಡೆದ ಅಖಿಲ ಭಾರತ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

'ಮುಂದಿನ ವರ್ಷದಲ್ಲಿ ಪ್ರಾಂತವಾರು ಮಾಡಬೇಕಾದ ಕೆಲಸಗಳ ಕುರಿತಂತೆ 'ಪ್ರಚಾರಕ'ರಿಗೆ (ಪೂರ್ಣಾವಧಿ ಸ್ವಯಂಸೇವಕರು) ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಗುರಿ ನಿಗದಿಪಡಿಸಿದ್ದಾರೆ' ಎಂದು ಆರ್‌ಎಸ್‌ಎಸ್ ಮೂಲಗಳು ತಿಳಿಸಿವೆ.



ಐದು ಪರಿವರ್ತನೆಗಳ ಮೂಲಕ ಹಿಂದೂ ಸಮಾಜದಲ್ಲಿ ಸಾಮಾಜಿಕ ಸಾಮರಸ್ಯ ತರಬೇಕು. ಇದರ ಜವಾಬ್ದಾರಿಯನ್ನು ಪ್ರಚಾರಕರು ತೆಗೆದುಕೊಳ್ಳಬೇಕು ಎಂದು 11 ಪ್ರದೇಶಗಳ 46 ಪ್ರಾಂತ್ಯಗಳ ಪ್ರಚಾರಕರಿಗೆ ಆರ್‌ಎಸ್‌ಎಸ್ ಮುಖ್ಯಸ್ಥ ಭಾಗವತ್, ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಸೂಚಿಸಿದರು.

ಕಾರ್ಯಕರ್ತರ ಮೂಲಕ ಸಂಘದ ಸಂದೇಶವನ್ನು ಮನೆಮನೆಗೂ ತಲುಪಿಸಲು ಕ್ರಮ ಕೈಗೊಳ್ಳಲು ಕಾರ್ಯಕಾರಿಣಿ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

'ಕುಟುಂಬಗಳಲ್ಲಿ ವಿಚಾರ ವಿನಿಮಯ, ಪರಿಸರ ಸಂರಕ್ಷಣೆ, ಸ್ವದೇಶಿ ಜೀವನಪದ್ಧತಿ, ಸಾಮಾಜಿಕ ಸಾಮರಸ್ಯ ಹಾಗೂ ಗ್ರಾಮ ಹಾಗೂ ಪಟ್ಟಣಗಳಲ್ಲಿ ಪ್ರತಿಯೊಬ್ಬರೂ ನಾಗರಿಕ ಕರ್ತವ್ಯದ ಅರಿವು ಮೂಡಿಸುವಂತೆ ನೋಡಿಕೊಳ್ಳಬೇಕು' ಎಂದು ತಿಳಿಸಲಾಗಿದೆ.

ನೂರನೇ ವರ್ಷಾಚರಣೆಗೆ ಸಿದ್ಧತೆ: ಮುಂದಿನ ವರ್ಷ 'ವಿಜಯದಶಮಿ' ವೇಳೆಗೆ ಆರ್‌ಎಸ್‌ಎಸ್ ಸ್ಥಾಪನೆಗೊಂಡು 100ನೇ ವರ್ಷ ಪೂರ್ಣಗೊಳ್ಳಲಿದ್ದು, ಸಂಘಟನಾತ್ಮಕವಾಗಿ ಮತ್ತಷ್ಟು ವಿಸ್ತರಿಸಲು ಗುರಿ ನಿಗದಿಪಡಿಸಲಾಗಿದೆ. ಈ ಕುರಿತು ಪ್ರಚಾರಕರಿಗೆ ಹಲವು ವಿಧಾನಗಳನ್ನು ತಿಳಿಸಿಕೊಡಲಾಗಿದೆ' ಎಂದು ಆರ್‌ಎಸ್‌ಎಸ್ ಮೂಲಗಳು ತಿಳಿಸಿವೆ.

ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಪ್ರಕರಣ ವರ್ಗಾವಣೆ ಸಾಧ್ಯತೆ

ರಶೀದ್ ಜಾಮೀನು ಅರ್ಜಿ: ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ನವದೆಹಲಿ (ಪಿಟಿಐ): ಜೈಲಿನಲ್ಲಿರುವ ಸಂಸದ ಎಂಜಿನಿಯರ್ ರಶೀದ್ ಅವರ ಜಾಮೀನು ಅರ್ಜಿಯ ತೀರ್ಪನ್ನು ಕಾಯ್ದಿರಿಸಿರುವ ದೆಹಲಿ ಹೈಕೋರ್ಟ್, ರಶೀದ್ ಸಂಸದರಾಗಿರುವ ಕಾರಣ ಈ ಪ್ರಕರಣವನ್ನು ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಬೇಕಾಗಬಹುದು' ಎಂದು ಹೇಳಿದೆ.

'ರಶೀದ್ ಪ್ರಸ್ತುತ ಸಂಸದರು ಆಗಿರುವುದರಿಂದ ಅವರ ವಿರುದ್ಧದ ಪ್ರಕರಣವು ಇದೇ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಬೇಕಾ ಅಥವಾ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ವರ್ಗಾವಣೆ ಆಗಬೇಕಾ ಎಂಬುವುದನ್ನು ಮೊದಲು ನಿರ್ಧರಿಸಬೇಕು' ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಛಂದರ್ ಜೀತ್ ಸಿಂಗ್ ಅವರು ಹೇಳಿದ್ದಾರೆ.

'ನ್ಯಾಯಾಲಯದ ವ್ಯಾಪ್ತಿಯ ಬಗ್ಗೆ ನಿರ್ಧಾರವಾಗುವವರೆಗೆ ಜಾಮೀನು ಅರ್ಜಿ ತೀರ್ಪನ್ನು ಕಾಯ್ದಿರಿಸಲಾಗುವುದು' ಎಂದು ತಿಳಿಸಿದ್ದಾರೆ.

ರಶೀದ್ ಪ್ರಕರಣಯಾವ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತದೆ ಎಂಬ ಬಗ್ಗೆ ನವೆಂಬರ್ 13ರಂದು ವಿಚಾರಣೆ ನಡೆಯಲಿದ್ದು, ನವೆಂಬರ್ 19ರಂದು ಜಾಮೀನು ಅರ್ಜಿಯ ತೀರ್ಪು ಪ್ರಕಟವಾಗುತ್ತದೆ.

ಮಧ್ಯಂತರ ಜಾಮೀನು ಅವಧಿ ಪೂರ್ಣಗೊಂಡ ಕಾರಣ, ಬಾರಾಮುಲ್ಲಾ ಸಂಸದ ಅಬ್ದುಲ್ ರಶೀದ್ ಅವರು ಸೋಮವಾರ ತಿಹಾರ್ ಜೈಲಿನ ಅಧಿಕಾರಿಗಳ ಮುಂದೆ ಹಾಜರಾಗಿದ್ದರು.

ಭಯೋತ್ಪಾದಕರಿಗೆ ಹಣಕಾಸಿನ ನೆರವು ನೀಡಿದ ಆರೋಪದಡಿ ರಶೀದ್ 2019ರಿಂದ ತಿಹಾರ್ ಜೈಲಿನಲ್ಲಿದ್ದಾರೆ.

ಸೆ.10ರಂದು ರಶೀದ್‌ಗೆ ನ್ಯಾಯಾಲಯವು ಮಧ್ಯಂತರ ಜಾಮೀನು ನೀಡಿ, ಜಮ್ಮು–ಕಾಶ್ಮೀರ ವಿಧಾನಸಭಾ ಚುನಾವಣೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿತ್ತು. ಬಳಿಕ ಅವರ ತಂದೆಯ ಆರೋಗ್ಯ ಪರಿಸ್ಥಿತಿ ಹದಗೆಟ್ಟ ಕಾರಣ ಮಧ್ಯಂತರ ಜಾಮೀನು ಅವಧಿಯನ್ನು ಅ.28ರವರೆಗೆ ವಿಸ್ತರಿಸಲಾಗಿತ್ತು.

ಮಣಿಪುರ: ಕಾಲೇಜು ಬಳಿ ಗ್ರೆನೇಡ್ ಪತ್ತೆ

ಮಣಿಪುರ (ಪಿಟಿಐ): ರಾಜ ಭವನದ 100 ಮೀಟರ್‌ಗೂ ಕಡಿಮೆ ಅಂತರದಲ್ಲಿರುವ ಜಿಪಿ ಮಹಿಳಾ ಕಾಲೇಜಿನ ಗೇಟಿನ ಸಮೀಪ ಸೋಮವಾರ ಬೆಳಿಗ್ಗೆ ಗ್ರೆನೇಡ್ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಘಟನೆಯು ದಾರಿಹೋಕರಲ್ಲಿ ಭಯ ಹುಟ್ಟಿಸಿತ್ತು. ಗ್ರೆನೇಡ್ ಪತ್ತೆಯಾದ ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು ಆ ಪ್ರದೇಶಕ್ಕೆ ಯಾರೂ ತೆರಳದಂತೆ ಕ್ರಮ ವಹಿಸಿದ್ದರು. ಬಳಿಕ ಬಾಂಬ್ ನಿಷ್ಕ್ರಿಯ ದಳವು ಬಾಂಬ್ ತೆರವುಗೊಳಿಸಿ, ನಿಷ್ಕ್ರಿಯಗೊಳಿಸಿತು.

ರಾಜಭವನದಿಂದ 100 ಮೀಟರ್ ಮತ್ತು ಮುಖ್ಯಮಂತ್ರಿ ಅಧಿಕೃತ ನಿವಾಸ ಹಾಗೂ ಮಣಿಪುರ ಪೊಲೀಸ್ ಪ್ರಧಾನ ಕಚೇರಿಯಿಂದ 300 ಮೀಟರ್‌ಗೂ ಕಡಿಮೆ ಅಂತರದಲ್ಲಿ ಈ ಕಾಲೇಜು ಇದೆ. ಸ್ಥಳದಲ್ಲಿ 'ಶ್ರಮಜೀವಿ ವಿದ್ಯಾರ್ಥಿಗಳಿಗೆ ಕೀರ್ತಿ' ಎಂಬ ಕೈಬರಹವಿದ್ದ ಚೀಟಿ ಲಭ್ಯವಾಗಿದೆ.

ಘಟನೆ ಖಂಡಿಸಿ ಕಾಲೇಜು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಘಟನೆ ವಿರುದ್ಧ ಭಿತ್ತಿಪತ್ರ ಪ್ರದರ್ಶಿಸಿ ಘೋಷಣೆಗಳನ್ನು ಕೂಗಿದರು. ಘಟನೆಗೆ ಕಾರಣರಾದ ದುಷ್ಕರ್ಮಿಗಳನ್ನು ಬಂಧಿಸಬೇಕು ಎಂದು ಕಾಲೇಜಿನ ವಿದ್ಯಾರ್ಥಿ ಥಾಕ್ಚೊಮ್ ಯೈಫಾಬಿ ಚಾನು ಆಗ್ರಹಿಸಿದರು.

ಜೆಪಿಸಿ ಸಭೆ: ಹೊರನಡೆದ ಸದಸ್ಯರು

ನವದೆಹಲಿ (ಪಿಟಿಐ): ವಕ್ಫ್ ತಿದ್ದುಪಡಿ ಮಸೂದೆಯ ಪರಿಶೀಲನೆ ನಡೆಸುತ್ತಿರುವ ಸಂಸತ್ತಿನ ಜಂಟಿ ಸಮಿತಿಯ (ಜೆಪಿಸಿ) ಸಭೆಯಲ್ಲಿ ದೆಹಲಿ ವಕ್ಫ್ ಮಂಡಳಿ ಮಂಡಿಸಿದ ವಿಷಯಗಳ ಬಗ್ಗೆ ಪ್ರತಿಭಟನೆ ದಾಖಲಿಸಲು, ವಿರೋಧ ಪಕ್ಷಗಳ ಸದಸ್ಯರು ಸೋಮವಾರ ಸಭೆಯಿಂದ ಹೊರನಡೆದರು.

ದೆಹಲಿ ವಕ್ಫ್ ಮಂಡಳಿಯ ಪರವಾಗಿ ಸಭೆಗೆ ಬಂದಿದ್ದ ಮಂಡಳಿಯ ಆಡಳಿತಾಧಿಕಾರಿಯು, ದೆಹಲಿ ಸರ್ಕಾರದ ಗಮನಕ್ಕೆ ತಾರದೆಯೇ ಕೆಲವು ವಿಷಯಗಳನ್ನು ಬದಲಾವಣೆ ಮಾಡಿದ್ದಾರೆ ಎಂದು ವಿರೋಧ ಪಕ್ಷಗಳ ಸದಸ್ಯರು ಆರೋಪಿಸಿದರು.

ಎಎಪಿ ಸದಸ್ಯ ಸಂಜಯ್ ಸಿಂಗ್, ಡಿಎಂಕೆ ಸದಸ್ಯ ಮೊಹಮ್ಮದ್ ಅಬ್ದುಲ್ಲಾ, ಕಾಂಗ್ರೆಸ್ಸಿನ ನಾಸೀರ್ ಹುಸೇನ್ ಮತ್ತು ಮೊಹಮ್ಮದ್ ಜಾವೆದ್ ಮತ್ತಿತರರು ಸಭೆಯಿಂದ ಹೊರನಡೆದರು.

ಆಡಳಿತಾಧಿಕಾರಿ ಅಶ್ವಿನಿ ಕುಮಾರ್ ಅವರು ಮಂಡಳಿಯ ಮೊದಲ ವರದಿಯನ್ನು ದೆಹಲಿ ಮುಖ್ಯಮಂತ್ರಿಯ ಅನುಮತಿ ಪಡೆಯದೆಯೇ ಸಂಪೂರ್ಣವಾಗಿ ಬದಲಾಯಿಸಿದ್ದಾರೆ ಎಂದು ಸದಸ್ಯರು ದೂರಿದ್ದಾರೆ.

ಮುಸ್ಲಿಂ ಕವಿಗಳಿಂದ ಉರ್ದು ರಾಮಾಯಣ ವಾಚನ

ಜೈಪುರ (ಪಿಟಿಐ): ದೀಪಾವಳಿ ಅಂಗವಾಗಿ ಸದ್ಭಾವನೆಯನ್ನು ಮೂಡಿಸುವ ಉದ್ದೇಶದಿಂದ ಬೀಕಾನೆರ್‌ನ ಮುಸ್ಲಿಂ ಕವಿಗಳು ರಾಮಾಯಣದ ಉರ್ದು ಆವೃತ್ತಿಯನ್ನು ವಾಚಿಸಿದ್ದಾರೆ.

ಭಾನುವಾರ ನಡೆದ ಸಮಾರಂಭದಲ್ಲಿ ಉರ್ದು ಕವಿ ಹಾಗೂ ಶಿಕ್ಷಕರೂ ಆಗಿರುವ ಜಿಯಾ ಉಲ್ ಹಸನ್ ಖಾದ್ರಿ ಅವರು ಇತರ ಇಬ್ಬರು ಮುಸ್ಲಿಂ ಕವಿಗಳ ಜತೆ ಉರ್ದು ರಾಮಾಯಣ ಪಠಿಸಿದರು. 'ಸಾಮರಸ್ಯ ಮತ್ತು ಸಹೋದರತ್ವದ ಸಂದೇಶ ರವಾನಿಸುವುದು ಈ ಕಾರ್ಯಕ್ರಮದ ಉದ್ದೇಶ' ಎಂದು ಖಾದ್ರಿ ಹೇಳಿದ್ದಾರೆ.

'ಪರ್ಯಟನ್ ಲೇಖಕ್ ಸಂಘ' ಮತ್ತು 'ಮೆಹಫಿಲ್ ಎ ಆದಾಬ್' ಸಂಸ್ಥೆಗಳು ಬೀಕಾನೆರ್‌ನಲ್ಲಿ 2012ರಿಂದ ಪ್ರತಿ ವರ್ಷವೂ 'ಉರ್ದು ರಾಮಾಯಣ ವಚನ' ಕಾರ್ಯಕ್ರಮ ಆಯೋಜಿಸುತ್ತಾ ಬಂದಿದೆ.

ಭಗವಾನ್ ರಾಮನ ವನವಾಸ, ರಾವಣನ ವಿರುದ್ಧದ ಗೆಲುವು ಮತ್ತು ಅಯೋಧ್ಯೆಗೆ ಹಿಂದಿರುಗುವುದು ಸೇರಿದಂತೆ ರಾಮಾಯಣದಲ್ಲಿ ಬರುವ ಪ್ರಸಂಗಗಳನ್ನು ಉರ್ದುವಿನಲ್ಲಿ ವಾಚಿಸಲಾಗಿದೆ ಎಂದು ಖಾದ್ರಿ ತಿಳಿಸಿದ್ದಾರೆ.

ಬೀಕಾನೆರ್‌ನ ಮೌಲವಿ ಬಾದ್‌ಶಾ ಹುಸೇನ್ ರಾಣಾ ಲಖ್ನವಿ ಅವರು 1935ರಲ್ಲಿ ರಾಮಾಯಣದ ಉರ್ದು ಆವೃತ್ತಿಯನ್ನು ರಚಿಸಿದ್ದಾರೆ. ಬನಾರಸ್ ಹಿಂದೂ ವಿಶ್ವವಿದ್ಯಾಲಯವು ತುಳಸೀದಾಸ್ ಅವರ ಜನ್ಮಶತಮಾನೋತ್ಸವ ಅಂಗವಾಗಿ ಆಯೋಜಿಸಿದ್ದ ಸ್ಪರ್ಧೆಯೊಂದರಲ್ಲಿ ಪಾಲ್ಗೊಂಡು ಅವರು ಇದನ್ನು ರಚಿಸಿದ್ದರು.

ಅಶ್ರಫ್ ಹತ್ಯೆ: ಬಿಜೆಪಿ ಕಾರ್ಯಕರ್ತರಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಸಿಪಿಎಂ ಕಾರ್ಯಕರ್ತರೊಬ್ಬರ ಕೊಲೆ ಪ್ರಕರಣದಲ್ಲಿ ಆರ್‌ಎಸ್‌ಎಸ್–ಬಿಜೆಪಿಯ ನಾಲ್ವರು ಕಾರ್ಯಕರ್ತರಿಗೆ ಕೇರಳದ ಕಣ್ಣೂರು ಜಿಲ್ಲೆಯ ತಲಶ್ಶೇರಿಯ ನ್ಯಾಯಾಲಯವೊಂದು ಜೀವಾವಧಿ ಶಿಕ್ಷೆ ವಿಧಿಸಿದೆ.

ಸಿಪಿಎಂ ಕಾರ್ಯಕರ್ತ ಸಿ. ಅಶ್ರಫ್ ಅವರನ್ನು ರಾಜಕೀಯ ವೈಷಮ್ಯದ ಕಾರಣಕ್ಕೆ 2011ರ ಮೇ 19ರಂದು ಕೊಲೆ ಮಾಡಲಾಗಿತ್ತು. ಎಂ. ಪ್ರನುಬಾಬು, ವಿ. ಶಿಜಿಲ್, ಆರ್. ವಿ. ನಿಧೀಶ್, ಕೆ. ಉಜೇಶ್ ಅವರಿಗೆ ಶಿಕ್ಷೆ ವಿಧಿಸಲಾಗಿದೆ. ಅಲ್ಲದೆ ಅಪರಾಧಿಗಳಿಗೆ ತಲಾ ₹80 ಸಾವಿರ ದಂಡ ಕೂಡ ವಿಧಿಸಲಾಗಿದೆ. ಈ ಹಣವನ್ನು ಮೃತ ಅಶ್ರಫ್ ಅವರ ಕುಟುಂಬದ ಸದಸ್ಯರಿಗೆ ನೀಡಬೇಕಿದೆ.

ಕೊಲೆ ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರು ಎಂಟು ಮಂದಿಯ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಈ ಪೈಕಿ ಇಬ್ಬರು ಈಗಾಗಲೇ ಮೃತಪಟ್ಟಿದ್ದಾರೆ. ಇನ್ನಿಬ್ಬರನ್ನು ದೋಷಮುಕ್ತಗೊಳಿಸಲಾಗಿದೆ.

ರಣಜಿ ಟ್ರೋಫಿ: ನಾಯಕ ಮಯಂಕ್ ಶತಕ • ಬಿಹಾರ ವಿರುದ್ಧ 144 ರನ್ ಮುನ್ನಡೆ

ಗೆಲುವಿನತ್ತ ಕರ್ನಾಟಕದ ಆಸೆಗಣ್ಣು

ಪ್ರಜಾವಾಣಿ ವಾರ್ತೆ

ಪಟ್ನಾ: ನಾಯಕ ಮಯಂಕ್ ಅಗರವಾಲ್ ಅವರ ಬಿರುಸಿನ ಶತಕದ ಬಲದಿಂದ ಕರ್ನಾಟಕ ತಂಡ ರಣಜಿ ಟ್ರೋಫಿ 'ಸಿ' ಗುಂಪಿನ ಪಂದ್ಯದಲ್ಲಿ ಬಿಹಾರ ವಿರುದ್ಧ ಮೊದಲ ಇನಿಂಗ್ಸ್ ಮುನ್ನಡೆ ಪಡೆದಿದೆ. ಪ್ರತಿಕೂಲ ಹವಾಮಾನದ ನಡುವೆಯೂ ಪಂದ್ಯದಲ್ಲಿ ಮೇಲುಗೈ ಪಡೆದಿರುವ ಕರ್ನಾಟಕ ಈಗ ಆತಿಥೇಯ ತಂಡದ ಮೇಲೆ ಒತ್ತಡ ಹೇರುವ ಸ್ಥಿತಿಯಲ್ಲಿದೆ.

ಮೊದಲ ದಿನ 59 ಓವರುಗಳ ಆಟ ಸಾಧ್ಯವಾಗಿತ್ತು. ಮಳೆ ಮತ್ತು ಮೈದಾನ ತೇವಗೊಂಡಿದ್ದ ಕಾರಣ ಮೊಯಿನ್ ಉಲ್ ಹಕ್ ಕ್ರೀಡಾಂಗಣದಲ್ಲಿ ಎರಡನೇ ದಿನ ಒಂದೂ ಎಸೆತ ಸಾಧ್ಯವಾಗಿರಲಿಲ್ಲ. ಮೂರನೇ ದಿನವಾದ ಸೋಮವಾರವೂ ಪಂದ್ಯ ತಡವಾಗಿ ಆರಂಭವಾಯಿತು. ಇಡೀ ದಿನ ಸಾಧ್ಯವಾಗಿದ್ದು 48 ಓವರುಗಳ ಆಟ ಮಾತ್ರ.

ಮೊದಲ ದಿನ ಬಿಹಾರ 143 ರನ್‌ಗಳಿಗೆ ಉರುಳಿದ್ದು, ಕರ್ನಾಟಕ 3 ಓವರುಗಳಲ್ಲಿ ವಿಕೆಟ್ ಕಳೆದುಕೊಳ್ಳದೇ 16 ರನ್ ಗಳಿಸಿತ್ತು. ಮೂರನೇ ದಿನದ ಕೊನೆಗೆ ಕರ್ನಾಟಕ 7 ವಿಕೆಟ್‌ಗೆ 287 ರನ್‌ಗಳೊಡನೆ ಆಟ ಪೂರೈಸಿತು. ಸದ್ಯ 144 ರನ್‌ಗಳ ಮುನ್ನಡೆ ಪಡೆದಿದೆ.

ಗರಿಷ್ಠ ಪಾಯಿಂಟ್ ಗಳಿಸಲು ಕರ್ನಾಟಕಕ್ಕೆ ಮೂರನೇ ದಿನ ವೇಗವಾಗಿ ರನ್ ಗಳಿಸುವುದೊಂದೇ ದಾರಿಯಾಗಿತ್ತು. ಅದಕ್ಕೆ ತಕ್ಕಂತೆ ನಾಯಕ ಮಯಂಕ್ ಸ್ವತಃ ಮುಂಚೂಣಿಯಲ್ಲಿ ನಿಂತು 131 ಎಸೆತಗಳಲ್ಲಿ 105 ರನ್ ಹೊಡೆದು ಎದುರಾಳಿಗಳ ಮೇಲೆ ಒತ್ತಡ ಹೇರಿದರು. ಉಪನಾಯಕ ಮನಿಷ್ ಪಾಂಡೆ ಕೂಡ ಬಿರುಸಿನ ಆಟಕ್ಕಿಳಿದು 55 ಎಸೆತಗಳಲ್ಲಿ 56 ರನ್ (4x5, 6x2) ಬಾರಿಸಿದರು. ರನ್ ವೇಗ ಹೆಚ್ಚಿಸುವ ಭರದಲ್ಲಿ ಕೊನೆಯ ಅವಧಿಯಲ್ಲಿ ಕರ್ನಾಟಕ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ತಂಡದ ಮುನ್ನಡೆ ಹಿಗ್ಗಿಸಿ, ಎದುರಾಳಿ ತಂಡವನ್ನು ಎರಡನೇ ಇನಿಂಗ್ಸ್‌ನಲ್ಲಿ ಬೇಗ ಆಲ್‌ಔಟ್ ಮಾಡಿ ಇನಿಂಗ್ಸ್ ಜಯದ ಯೋಜನೆ ಕರ್ನಾಟಕ ತಂಡದ್ದು.



ಮಯಂಕ್ ಅಗರವಾಲ್ —ಪ್ರಜಾವಾಣಿ ಸಂಗ್ರಹ ಚಿತ್ರ

ನಾಕೌಟ್ ಪ್ರವೇಶದ ದೃಷ್ಟಿಯಿಂದ ಕರ್ನಾಟಕಕ್ಕೆ ಈ ಪಂದ್ಯವನ್ನು ಗೆಲ್ಲುವುದು ಅಗತ್ಯವಾಗಿದೆ. ಮೊದಲೆರಡು ಪಂದ್ಯಗಳಲ್ಲಿ (ಕ್ರಮವಾಗಿ ಮಧ್ಯಪ್ರದೇಶ ಮತ್ತು ಕೇರಳ ವಿರುದ್ಧ) ಮಳೆ ಮತ್ತು ಮೈದಾನ ಆಡಲು ಯೋಗ್ಯವಾಗಿಲ್ಲದ ಒಟ್ಟು ಎರಡು ಪಾಯಿಂಟ್‌ಗಳಷ್ಟೇ ಬಂದಿದೆ.

ಮಿಂಚಿದ ರಿಂಕು, ನಿತೀಶ್-ಉತ್ತರ ಪ್ರದೇಶ ಮೇಲುಗೈ: ಮುಲ್ಲನ್‌ಪುರ (ಪಿಟಿಐ): ರಿಂಕು ಸಿಂಗ್ (68) ಮತ್ತು ನಿತೀಶ್ ರಾಣಾ (66) ಅವರ ಅರ್ಧ ಶತಕಗಳ ನೆರವಿನಿಂದ ಉತ್ತರ ಪ್ರದೇಶ ತಂಡ, ರಣಜಿ ಟ್ರೋಫಿ ಸಿ ಗುಂಪಿನ ಪಂದ್ಯದ ಮೂರನೇ ದಿನವಾದ ಸೋಮವಾರ ಪಂಜಾಬ್ ವಿರುದ್ಧ ಬಿಗಿ ಹಿಡಿತ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಂಜಾಬ್: 210; ಉತ್ತರ ಪ್ರದೇಶ: 141.1 ಓವರುಗಳಲ್ಲಿ 9 ವಿಕೆಟ್‌ಗೆ 556 ಡಿ. (ಮಾಧವ ಕೌಶಿಕ್ 162, ಸೌರಭ್ ಕುಮಾರ್ 69, ರಿಂಕು ಸಿಂಗ್ 68, ನಿತೀಶ್ ರಾಣಾ 55, ಶಿವಂ ಶರ್ಮಾ ಔಟಾಗದೇ 50). ಎರಡನೇ ಇನಿಂಗ್ಸ್: ಪಂಜಾಬ್: 19 ಓವರುಗಳಲ್ಲಿ 1 ವಿಕೆಟ್‌ಗೆ 49;

ಇಂದೋರ್‌ನಲ್ಲಿ: ಮೊದಲ ಇನಿಂಗ್ಸ್: ಮಧ್ಯಪ್ರದೇಶ: 308; ಹರಿಯಾಣ: 150.5 ಓವರುಗಳಲ್ಲಿ 9ಕ್ಕೆ 431 (ಲಕ್ಷಯ್ ದಲಾಲ್ 105, ಧೀರು ಸಿಂಗ್ 94, ಹಿಮಾಂಶು ರಾಣಾ 90, ಹರ್ಷಲ್ ಪಟೇಲ್ ಔಟಾಗದೇ 72; ಕುಮಾರ ಕಾರ್ತಿಕೇಯ 117ಕ್ಕೆ4).

ಕೋಲ್ಕತ್ತದಲ್ಲಿ: ಕೇರಳ: ಮೊದಲ ಇನಿಂಗ್ಸ್: 102 ಓವರುಗಳಲ್ಲಿ 7 ವಿಕೆಟ್‌ಗೆ 267 (ಜಲಜ್ ಸಕ್ಸೇನಾ 84, ಸಲ್ಮಾನ್ ನಿಝರ್ ಬ್ಯಾಟಿಂಗ್ 64, ಮೊಹಮ್ಮದ್ ಅಜರುದ್ದೀನ್ ಬ್ಯಾಟಿಂಗ್ 30; ಇಶಾನ್ ಪೊರೆಲ್ 83ಕ್ಕೆ5) ವಿರುದ್ಧ ಬಂಗಾಳ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಬಿಹಾರ: 143 (55.5 ಓವರುಗಳಲ್ಲಿ): ಕರ್ನಾಟಕ: 7 ವಿಕೆಟ್‌ಗೆ 287 (51 ಓವರುಗಳಲ್ಲಿ): (ಭಾನುವಾರ: ವಿಕೆಟ್ ನಷ್ಟವಿಲ್ಲದೇ 16)

ನಿಕಿನ್ ಬಿ ಸಕಿಬ್ ಹುಸೇನ್ 16 (32ಎ, 4x2)
ಸುಜಯ್ ಸಿ ಸೂರ್ಯವಂಶಿ ಬಿ ಸಕಿಬ್ ಹುಸೇನ್ 10 (19ಎ, 4x1)
ಮಯಂಕ್ ಸ್ಟಂ ಸೌರಭ್ ಬಿ ಹಿಮಾಂಶು 105 (131ಎ, 4x12)
ಸ್ಮರಣ್ ಸಿ ಸಕಿಬ್ ಬಿ ಸೂರ್ಯವಂಶಿ 37 (50ಎ, 4x4)
ಮನೀಷ್ ಸಿ ಸಬ್ (ಎ.ಬಿ.ರಾಜ್) ಬಿ ಹಿಮಾಂಶು 56 (55ಎ, 4x5 6x2)
ಅಭಿನವ್ ಸಿ ವೀರಪ್ರತಾಪ್ ಬಿ ಹಿಮಾಂಶು 37 (30ಎ, 4x6, 6x1)
ಶ್ರೇಯಸ್ ಔಟಾಗದೇ 1 (1ಎ)
ವೈಶಾಖ ಬಿ ಹಿಮಾಂಶು 0 (1)

ಇತರೆ: 25 (ಲೆಗ್‌ಬೈ 5, ನೋಬಾಲ್ 13, ವೈಡ್ 2, ದಂಡ 5)

ವಿಕೆಟ್ ಪತನ: 1–30 (ಸುಜಯ್ ಸತೇರಿ, 5.1), 2–41 (ನಿಕಿನ್ ಜೋಸ್, 9.5), 3–121 (ಸ್ಮರಣ್, 26.6), 4–221 (ಮನೀಷ್ ಪಾಂಡೆ, 42.3), 5–286 (ಅಭಿನವ್ ಮನೋಹರ್, 50.2), 6–287 (ಮಯಂಕ್ ಅಗರವಾಲ್, 50.5), 7–287 (ವೈಶಾಖ, 50.6).

ಬೌಲಿಂಗ್: ವೀರಪ್ರತಾಪ್ ಸಿಂಗ್ 7–1–28–0; ಅನುಜ್ ರಾಜ್ 9–0–60–0; ಸಕಿಬ್ ಹುಸೇನ್ 11–0–86–2; ಸಕಿಬುಲ್ ಗನಿ 7–1–22–0; ಹಿಮಾಂಶು ಸಿಂಗ್ 12–0–51–4; ವೈಭವ್ ಸೂರ್ಯವಂಶಿ 4–0–21–1; ಶರ್ಮನ್ ನಿಗ್ರೋಧ್ 1–0–9–0

ಬ್ಯಾಟರ್‌ಗಳ ಮೇಲೆ ಹೆಚ್ಚಿದ ನಿರೀಕ್ಷೆ

ಭಾರತ– ನ್ಯೂಜಿಲೆಂಡ್ ಮೂರನೇ ಏಕದಿನ ಪಂದ್ಯ ಇಂದು

ಅಹಮದಾಬಾದ್ (ಪಿಟಿಐ): ಭಾರತ ಮತ್ತು ನ್ಯೂಜಿಲೆಂಡ್ ಮಹಿಳಾ ತಂಡಗಳ ನಡುವಣ ಮೂರನೇ ಹಾಗೂ ಅಂತಿಮ ಏಕದಿನ ಕ್ರಿಕೆಟ್ ಪಂದ್ಯ ಮಂಗಳವಾರ ಇಲ್ಲಿ ನಡೆಯಲಿದೆ. ಆತಿಥೇಯ ತಂಡವು ಈ ನಿರ್ಣಾಯಕ ಪಂದ್ಯದಲ್ಲಿ ಬ್ಯಾಟಿಂಗ್ ವಿಭಾಗದಲ್ಲಿನ ತೊಡಕುಗಳನ್ನು ಸರಿಪಡಿಸುವ ವಿಶ್ವಾಸದಲ್ಲಿದೆ.

ಸರಣಿಯ ಮೊದಲ ಪಂದ್ಯದಲ್ಲಿ ಭಾರತ 59 ರನ್‌ಗಳಿಂದ ಜಯಗಳಿಸಿತ್ತು, ನಿಜ. ಆದರೆ ಬ್ಯಾಟರ್‌ಗಳು ಉತ್ತಮ ಆರಂಭ ಪಡೆದರೂ, ಅದನ್ನು ದೊಡ್ಡ ಮೊತ್ತವಾಗಿ ಬೆಳೆಸುವಲ್ಲಿ ವಿಫಲರಾಗಿದ್ದು ಎದ್ದುಕಂಡಿತ್ತು. ಎರಡನೇ ಪಂದ್ಯದಲ್ಲೂ ಅದು ಮುಂದುವರಿದಿತ್ತು. ತಂಡ 260 ರನ್ ಬೆನ್ನಟ್ಟುವ ಹಾದಿಯಲ್ಲಿ 183 ರನ್ನಿಗೆ ಉರುಳಿತ್ತು.

ರಾಧಾ ಯಾದವ್ ಮತ್ತು ಸೈಮಾ ಠಾಕೂರ್ ನಡುವಣ ಒಂಬತ್ತನೇ ವಿಕೆಟ್‌ಗೆ ದಾಖಲೆಯ 70 ರನ್ ಜೊತೆಯಾಟದಿಂದ ಭಾರತದ ಮೊತ್ತಕ್ಕೆ ಗೌರವದ ಲೇಪ ಒದಗಿತ್ತು.

ಎರಡನೇ ಪಂದ್ಯವನ್ನು ಸೋಫಿ ಡಿವೈನ್ ಪಡೆ ಗೆದ್ದ ನಂತರ ಮೂರು ಪಂದ್ಯಗಳ ಸರಣಿ ಈಗ 1–1ರಲ್ಲಿ ಸಮನಾಗಿದೆ.

ಭಾರತದ ಆಟಗಾರ್ತಿಯರಲ್ಲಿ ಯಾರೂ ಮೊದಲೆರಡು ಪಂದ್ಯಗಳಲ್ಲಿ ಅರ್ಧ ಶತಕ ಗಳಿಸಿಲ್ಲ. ಎರಡನೇ ಪಂದ್ಯದಲ್ಲಿ ರಾಧಾ ಗಳಿಸಿದ 48 ರನ್‌ಗಳು ಗರಿಷ್ಠ ವೈಯಕ್ತಿಕ ಮೊತ್ತವೆನಿಸಿದೆ. ಹೀಗಾಗಿ ತಂಡದ ಪ್ರಮುಖ ಬ್ಯಾಟರ್‌ಗಳಾದ ಸ್ಮೃತಿ ಮಂದಾನ, ಶಫಾಲಿ ವರ್ಮಾ ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ ಉತ್ತಮ ಮೊತ್ತ ಗಳಿಸಬೇಕಾಗಿದೆ. ಇವರು ವಿಫಲರಾಗುವುದರಿಂದ ಮಧ್ಯಮ ಕ್ರಮಾಂಕದಲ್ಲಿ ಜೆಮಿಮಾ ರಾಡ್ರಿಗಸ್, ದೀಪ್ತಿ ಶರ್ಮಾ ಮತ್ತು ತೇಜಲ್ ಹಸಬ್ನಿಸ್ ಮೇಲೆ ಒತ್ತಡ ಹೆಚ್ಚುತ್ತಿದೆ.

ಮಂದಾನ ಅವರಂತೂ ಲಯದಲ್ಲಿಲ್ಲ. ನ್ಯೂಜಿಲೆಂಡ್ ವಿರುದ್ಧ ಎರಡೂ ಪಂದ್ಯಗಳಲ್ಲಿ ವಿಫಲರಾಗಿದ್ದಾರೆ.

ಬ್ಯಾಟರ್‌ಗಳ ಕಥೆ ಹೀಗಾದರೆ, ಬೌಲರ್‌ಗಳು ಪ್ರದರ್ಶನ ಉತ್ತಮವಾಗಿದೆ. ಎರಡನೇ ಪಂದ್ಯದಲ್ಲಿ ಪ್ರವಾಸಿ ತಂಡ ಒಂದು ಹಂತದಲ್ಲಿ 14 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 87 ರನ್ ಗಳಿಸಿದರೂ, ನಂತರ ಆತಿಥೇಯ ಬೌಲರ್‌ಗಳು ಕಡಿವಾಣ ಹಾಕಿದ್ದರು. ಹೀಗಾಗಿ ಪ್ರವಾಸಿ ತಂಡ 289–300 ರನ್ ಪೇರಿಸುವ ಸಾಧ್ಯತೆ ದೂರವಾಯಿತು.

ಎಡಗೈ ಸ್ಪಿನ್ನರ್ ರಾಧಾ ಯಾದವ್ ಸ್ಫೂರ್ತಿಯುತ ಪ್ರದರ್ಶನ ನೀಡಿದ್ದಾರೆ. ಮೊದಲೆರಡು ಪಂದ್ಯಗಳಲ್ಲಿ ಕ್ರಮವಾಗಿ ಮೂರು ಮತ್ತು ನಾಲ್ಕು ವಿಕೆಟ್‌ಗಳನ್ನು ಪಡೆದಿದ್ದಾರೆ. ಅವರಿಂದ ಮತ್ತೆ ಉತ್ತಮ ಪ್ರದರ್ಶನ ನಿರೀಕ್ಷಿಸಲಾಗಿದೆ.



ರಾಧಾ ಯಾದವ್ —ಎಕ್ಸ್ ಚಿತ್ರ

ನ್ಯೂಜಿಲೆಂಡ್ ತಂಡ ಅನುಭವಿ ವೇಗಿ ಲಿಯಾ ತಹುಹು ಅವರ ಸೇರ್ಪಡೆಯಿಂದ ಇನ್ನಷ್ಟು ಬಲಗೊಂಡಿದೆ. ಅವರು ಎರಡನೇ ಪಂದ್ಯದಲ್ಲಿ ಗಾಯಾಳು ಮೊಲಿ ಪೆನ್‌ಫೋಲ್ಡ್ ಸ್ಥಾನದಲ್ಲಿ ಆಡಿದ್ದು, ಮೂರು ವಿಕೆಟ್‌ಗಳೊಡನೆ ತಮ್ಮ ಅಸ್ತಿತ್ವ ಸಾರಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಪ್ಯಾರಾ ಈಜು: ಪುನೀತ್‌ಗೆ 3 ಪದಕ

ಬೆಂಗಳೂರು: ಕರ್ನಾಟಕದ ಪುನೀತ್ ನಂದಕುಮಾರ್ ಅವರು ಗೋವಾದ ಪಣಜಿಯಲ್ಲಿ ಈಚೆಗೆ ನಡೆದ 24ನೇ ರಾಷ್ಟ್ರೀಯ ಪ್ಯಾರಾ ಈಜು ಚಾಂಪಿಯನ್‌ಷಿಪ್‌ನಲ್ಲಿ ಎರಡು ಚಿನ್ನ ಸೇರಿದಂತೆ ಮೂರು ಪದಕಗಳನ್ನು ಜಯಿಸಿದ್ದಾರೆ.



ಬೆಂಗಳೂರಿನ ಪುನೀತ್ ಅವರು 50 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಚಿನ್ನ, 100 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಚಿನ್ನ ಮತ್ತು 200 ಮೀಟರ್ ವೈಯಕ್ತಿಕ ಮೆಡ್ಲೆನಲ್ಲಿ ಬೆಳ್ಳಿ ಪದಕ ಗೆದ್ದಿದ್ದಾರೆ.

ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿ

ಪ್ರಖರ್ ಶತಕ, ಕರ್ನಾಟಕ ಮೇಲುಗೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಖರ್ ಚತುರ್ವೇದಿ ಅವರ ಅಜೇಯ ಶತಕದ (108*, 226ಎ, 4x11, 6x2) ನೆರವಿನಿಂದ ಕರ್ನಾಟಕ ತಂಡ, ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ (23 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಮಹಾರಾಷ್ಟ್ರ ವಿರುದ್ಧ ಮೊದಲ ಇನಿಂಗ್ಸ್ ಮುನ್ನಡೆಯತ್ತ ಹೆಜ್ಜೆಯಿಟ್ಟಿದೆ.

ಮಹಾರಾಷ್ಟ್ರದ 263 ರನ್‌ಗಳಿಗೆ ಉತ್ತರವಾಗಿ ಕರ್ನಾಟಕ ನಾಲ್ಕು ದಿನಗಳ ಈ ಪಂದ್ಯದ ಎರಡನೇ ದಿನವಾದ ಸೋಮವಾರ ಆಟ ಮುಗಿದಾಗ 81 ಓವರುಗಳಲ್ಲಿ 5 ವಿಕೆಟ್‌ಗೆ 242 ರನ್ ಗಳಿಸಿದೆ. ಆರಂಭ ಆಟಗಾರರಾದ ಚತುರ್ವೇದಿ ಮತ್ತು ಮೆಕ್ನೀಲ್ ನೊರೊನಾ (57, 109ಎ) ಮೊದಲ ವಿಕೆಟ್‌ಗೆ 122 ರನ್‌ಗಳ ಜೊತೆಯಾಟವಾಡಿದರು. ಆದರೆ ಮುಂದಿನ 14 ರನ್ ಸೇರುವಷ್ಟರಲ್ಲಿ ವಿಶಾಲ್ ಓನತ್ (7) ಮತ್ತು ನಾಯಕ ಅನೀಶ್ವರ ಗೌತಮ್ (1) ಬೇಗ ನಿರ್ಗಮಿಸಿದರು.

ಆದರೆ ಚತುರ್ವೇದಿ ಜೊತೆಗೂಡಿದ ಹರ್ಷಿಲ್ ದರ್ಮಾನಿ (36) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿದ್ದರಿಂತ ತಂಡ ಚೇತರಿಸಿತು. ನಂತರ ಚತುರ್ವೇದಿ, ಧ್ರುವ್ ಪ್ರಭಾಕರ್ (22) ಅವರೊಂದಿಗೆ 45 ರನ್ ಜೊತೆಯಾಟವಾಡಿದ್ದರಿಂದ ತಂಡ ಮುನ್ನಡೆಯತ್ತ ಕಾಲಿಟ್ಟಿತು.



ಪ್ರಖರ್ ಚತುರ್ವೇದಿ

ಮಹಾರಾಷ್ಟ್ರ ಪರ ವಿಕಿ ಓಸ್ವಾಲ್ 81 ರನ್ನಿಗೆ 4 ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮಹಾರಾಷ್ಟ್ರ 93.1 ಓವರುಗಳಲ್ಲಿ 263 (ಎ.ಎಸ್.ನಲವಡೆ 42, ದಿಗ್ವಿಜಯ ಪಾಟೀಲ್ 39, ಕೌಶಲ್ ಎಸ್.ತಾಂಬೆ 32, ಎ.ಎ.ಪವಾರ್ 47, ವಿಕಿ ಒಸ್ವಾಲ್ 64, ಧನುಷ್ ಗೌಡ 38ಕ್ಕೆ2, ಯಶೋವರ್ಧನ ಪರಂತಾಪ್ 50ಕ್ಕೆ4, ಶಶಿ ಕುಮಾರ್ ಕೆ. 75ಕ್ಕೆ3); ಕರ್ನಾಟಕ: 81 ಓವರುಗಳಲ್ಲಿ 5 ವಿಕೆಟ್‌ಗೆ 242 (ಮೆಕ್ನೀಲ್ ನೊರೊನಾ 57, ಪ್ರಖರ್ ಚತುರ್ವೇದಿ ಬ್ಯಾಟಿಂಗ್ 108, ಹರ್ಷಿಲ್ ಧರ್ಮಾನಿ 36; ವಿಕಿ ಒಸ್ವಾಲ್ 81ಕ್ಕೆ4).

ವಿಶ್ವ 23 ವರ್ಷದೊಳಗಿನವರ ಕುಸ್ತಿ: ಭಾರತಕ್ಕೆ 9 ಪದಕ

ಚಿನ್ನ ಜಯಿಸಿದ ಚಿರಾಗ್ ಚಿಕ್ಕರ

ಟಿರಾನಾ (ಅಲ್ಬೇನಿಯಾ): ಚಿರಾಗ್ ಚಿಕ್ಕರ, ವಿಶ್ವ 23 ವರ್ಷದೊಳಗಿನವರ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ಮೂರನೇ ಭಾರತೀಯ ಎನಿಸಿದರು. ಭಾರತ ಈ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಒಂದು ಚಿನ್ನ, ಒಂದು ಬೆಳ್ಳಿ ಸೇರಿದಂತೆ 9 ಪದಕಗಳೊಡನೆ ಉತ್ತಮ ಸಾಧನೆ ಪ್ರದರ್ಶಿಸಿತು.

ಪುರುಷರ 57 ಕೆ.ಜಿ. ಫ್ರೀಸ್ಟೈಲ್ ವಿಭಾಗದಲ್ಲಿ ಸ್ಪರ್ಧಿಸಿದ ಚಿರಾಗ್, ಮುಕ್ತಾಯಕ್ಕೆ ಕೆಲವೇ ಸೆಕೆಂಡುಗಳಿರುವಾಗ ಕಿರ್ಗಿಸ್ತಾನದ ಅಬ್ದಿಮಲಿಕ್ ಕರಾಚೊವ್ ಅವರನ್ನು 4–3 ಅಲ್ಪ ಅಂತರದಿಂದ ಮಣಿಸಿದರು.

ಅವರು ಪುರುಷರ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆದ ಭಾರತದ ಎರಡನೇ ಪೈಲ್ವಾನ್ ಎನಿಸಿದರು. ಪ್ಯಾರಿಸ್ ಒಲಿಂಪಿಕ್ಸ್ ನಲ್ಲಿ ಕಂಚಿನ ಪದಕ ಗೆದ್ದಿದ್ದ ಅಮನ್ ಸೆಹ್ರಾವತ್ ಈ ಹಿಂದೆ, 2022ರಲ್ಲಿ 23 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದರು. ಮಹಿಳೆಯರ ವಿಭಾಗದಲ್ಲಿ ರಿತಿಕಾ ಹೂಡಾ ಹೋದ ವರ್ಷ 76 ಕೆ.ಜಿ. ವಿಭಾಗದಲ್ಲಿ ಸ್ವರ್ಣ ಜಯಿಸಿದ್ದರು.



ಚಿರಾಗ್ ಚಿಕ್ಕರ

ಚಿಕ್ಕರ ಇದಕ್ಕೆ ಮೊದಲಿನ ಮೂರು ಸೆಣಸಾಟಗಳಲ್ಲಿ ಸುಲಭ ಜಯ ಸಾಧಿಸಿದ್ದರು. ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ 6–1 ರಿಂದ ಗಾವುಕೊಟೊ ಓಝೂವಾ ಅವರನ್ನು, ಎಂಟರ ಘಟ್ಟದಲ್ಲಿ ಇನುಸ್ ಇವಾಬಟಿರೋವ್ ಅವರನ್ನು ಮತ್ತು ಸೆಮಿಫೈನಲ್‌ನಲ್ಲಿ ಅಲನ್ ಒರಾಲ್ಬೆಕ್ ಅವರನ್ನು 8–0 ಯಿಂದ ಮಣಿಸಿದ್ದರು.

ಒಟ್ಟಾರೆ ಈ ಕೂಟದ ರ‍್ಯಾಂಕಿಂಗ್‌ನಲ್ಲಿ ಭಾರತ 82 ಪಾಯಿಂಟ್ಸ್ ಸಂಗ್ರಹಿಸಿ ನಾಲ್ಕನೇ ಸ್ಥಾನ ಗಳಿಸಿತು. ಇರಾನ್ (158), ಜಪಾನ್ (102) ಮತ್ತು ಅಜರ್‌ಬೈಜಾನ್ (100) ತಂಡಗಳು ಕ್ರಮವಾಗಿ ಮೊದಲ ಮೂರು ಸ್ಥಾನ ಗಳಿಸಿದವರು.

ಪುರುಷರ ಫ್ರೀಸ್ಟೈಲ್‌ನಲ್ಲಿ ಭಾರತ ಇನ್ನೆರಡು ಕಂಚಿನ ಪದಕ ಗೆದ್ದುಕೊಂಡಿತು. ಪುರುಷರ 97 ಕೆ.ಜಿ. ವಿಭಾಗದಲ್ಲಿ ವಿಕಿ, 20 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನ ಮಾಜಿ ಬೆಳ್ಳಿ ವಿಜೇತ ಇವಾನ್ ಪ್ರಿಮಾಚೆಂಕೊ (ಉಕ್ರೇನ್) ಅವರನ್ನು ಸೋಲಿಸಿ ಕಂಚಿನ ಪದಕ ತಮ್ಮದಾಗಿಸಿಕೊಂಡರು. ಇದು ಭಾರತ ಪದಕ ಗೆದ್ದ ಗರಿಷ್ಠ ತೂಕ ವಿಭಾಗ.

70 ಕೆ.ಜಿ. ಫ್ರೀಸ್ಟೈಲ್ ವಿಭಾಗದಲ್ಲಿ ಸುಜೀತ್ ಕಲ್ಕಲ್ ಅವರಿಗೆ ಸ್ವಲ್ಪದರಲ್ಲೇ ಫೈನಲ್ ಪ್ರವೇಶ ತಪ್ಪಿತು. ಆದರೆ ಕಂಚಿನ ಪದಕಕ್ಕೆ ನಡೆದ ಸ್ಪರ್ಧೆಯಲ್ಲಿ ಅವರು 0–4 ಹಿನ್ನಡೆಯಿಂದ ಚೇತರಿಸಿ 13–4 ರಿಂದ ತಾಜಿಕಿಸ್ತಾನದ ಮುಸ್ತಾಫೊ ಅಖಾಮೆಡೊವ್ ಅವರನ್ನು ಮಣಿಸಿದರು.

ರಾಣಿ ಸಾಧನೆ: ಮೋದಿ ಶ್ಲಾಘನೆ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಈಚೆಗೆ ನಿವೃತ್ತಿ ಘೋಷಿಸಿದ ಭಾರತ ಮಹಿಳಾ ಹಾಕಿ ತಂಡದ ಮಾಜಿ ನಾಯಕಿ ರಾಣಿ ರಾಂಪಾಲ್ ಅವರ ಸಾಧನೆಯನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ.



ರಾಣಿ ರಾಂಪಾಲ್

29 ವರ್ಷ ವಯಸ್ಸಿನ ರಾಣಿ ಅವರು 16 ವರ್ಷಗಳ ಹಾಕಿ ವೃತ್ತಿಜೀವನಕ್ಕೆ ಗುರುವಾರ ವಿದಾಯ ಹೇಳಿದರು. ಅವರ ನೇತೃತ್ವದಲ್ಲಿ ಭಾರತ ತಂಡವು 2021ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿತ್ತು. ಫಾರ್ವರ್ಡ್ ಆಟಗಾರ್ತಿಯಾಗಿದ್ದ ಅವರು, 254 ಪಂದ್ಯಗಳಲ್ಲಿ 205 ಗೋಲು ಗಳಿಸಿದ್ದಾರೆ.

'ಭಾರತ ಮಹಿಳಾ ಹಾಕಿಯಲ್ಲಿ ನಿಮ್ಮ ಜರ್ಸಿ ಸಂಖ್ಯೆ '28' ಸಾಟಿಯಿಲ್ಲದ ಕೌಶಲ ಮತ್ತು ತಡೆಯಲಾಗದ ಗೋಲುಗಳಿಗೆ ಸಮನಾಗಿದೆ. ದೇಶದ ದಿಗ್ಗಜ ಆಟಗಾರರ ಸಾಲಿನಲ್ಲಿ ನೀವು ಸ್ಥಾನ ಪಡೆದಿದ್ದೀರಿ' ಎಂಬ ಮೋದಿ ಹೊಗಳಿದ್ದಾರೆ.

ಬ್ಯಾಸ್ಕೆಟ್‌ಬಾಲ್: ಜೆಎಸ್‌ಸಿಗೆ ಗೆಲುವು

ಬೆಂಗಳೂರು: ಜೆಎಸ್‌ಸಿ ತಂಡವು ರಾಜ್ಯ 'ಎ' ಡಿವಿಷನ್ ಪುರುಷರ ಬ್ಯಾಸ್ಕೆಟ್‌ಬಾಲ್ ಲೀಗ್ ಟೂರ್ನಿಯಲ್ಲಿ 79–51ರಿಂದ ವಿವೇಕ್ಸ್ ಎಸ್.ಸಿ ತಂಡವನ್ನು ಸೋಲಿಸಿತು.

ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಮತ್ತೊಂದು ಪಂದ್ಯದಲ್ಲಿ ಡಿವೈಇಎಸ್ ಬೆಂಗಳೂರು 83–71ರಿಂದ ಜಿಎಸ್‌ಟಿ ಅಂಡ್ ಕಸ್ಟಮ್ಸ್ ತಂಡವನ್ನು ಸೋಲಿಸಿತು.

ಹರಿಯಾಣ ಆಲ್‌ರೌಂಡ್ ಆಟ

ಹೈದರಾಬಾದ್: ಐದಕ್ಕೂ ಹೆಚ್ಚು ಬಾರಿ ದೊರೆತ ಸೂಪರ್ ಟ್ಯಾಕಲ್ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡ ಹರಿಯಾಣ ಸ್ಟೀಲರ್ಸ್, ಆಲ್‌ರೌಂಡ್ ಪ್ರದರ್ಶನದ ಬಲದಿಂದ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಸೋಮವಾರ ದಬಾಂಗ್ ಡೆಲ್ಲಿ ತಂಡವನ್ನು 41–34 ರಿಂದ ಮಣಿಸಿತು.

ಇದರೊಂದಿಗೆ ಹಾಲಿ ಟೂರ್ನಿಯಲ್ಲಿ ಸತತ ಎರಡನೇ ಜಯ ದಾಖಲಿಸಿದ ಹರಿಯಾಣ ಸ್ಟೀಲರ್ಸ್ ಹತ್ತು ಅಂಕಗಳನ್ನು ಕಲೆಹಾಕಿತು. ರೇಡರ್ ಅಶು ಮಲಿಕ್ ಏಕಾಂಗಿ ಹೋರಾಟದ ಹೊರತಾಗಿಯೂ ದಬಾಂಗ್ ಡೆಲ್ಲಿ ಎರಡನೇ ಸೋಲಿಗೆ ಗುರಿಯಾಯಿತು.

ಗಚ್ಚಿಬೌಲಿ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ಒಮ್ಮೆಯೂ ಮುನ್ನಡೆ ಬಿಟ್ಟುಕೊಡಲಿಲ್ಲ. ಸ್ಟೀಲರ್ಸ್ ಪರ ಶಿವಂ ಪತರೆ (8 ಅಂಕ), ಮೊಹಮ್ಮದ್‌ರೇಝಾ ಶಾಡ್ಲುಯಿ (10), ಜೈದೀಪ್ (5) ಅಂಕ ಗಳಿಸಿ ಮಿಂಚಿದರು.

ದಬಾಂಗ್ ಡೆಲ್ಲಿ ಪರ ಅಶು ಮಲಿಕ್ (13) ಏಕಾಂಗಿಯಾಗಿ ಹೋರಾಟ ನಡೆಸಿದರು. ಪಂದ್ಯ ಮುಕ್ತಾಯಕ್ಕೆ ಐದು ನಿಮಿಷಗಳು ಬಾಕಿ ಇರುವಾಗ 37-29 ರಲ್ಲಿ ಎಂಟು ಅಂಕಗಳ ಮುನ್ನಡೆ ಕಾಯ್ದುಕೊಂಡ ಹರಿಯಾಣ ನಂತರ ಎಚ್ಚರಿಕೆ ಆಟಕ್ಕೆ ಒತ್ತು ನೀಡಿತು.



ದಬಾಂಗ್ ಡೆಲ್ಲಿ ವಿರುದ್ಧ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡದ ರೇಡರ್ ಮೊಹಮ್ಮದ್‌ರೇಝಾ ಶಾಡ್ಲುಯಿ ಯಶಸ್ವಿಯಾಗಿ ಗೆರೆ ಮುಟ್ಟಿದರು.

PRO KABADDI

ಆಲ್‌ರೌಂಡರ್ ಮೊಹಮ್ಮದ್ ರೇಝಾ ಎದುರಾಳಿ ರೇಡರ್‌ಗಳನ್ನು ಪದೇ ಪದೇ ತಮ್ಮ ಆ್ಯಂಕಲ್ ಹೋಲ್ಡ್‌ನಲ್ಲಿ ಬಂಧಿಯಾಗಿಸಿ ಗಮನ ಸೆಳೆದರು.

ದಿನದ ಮತ್ತೊಂದು ಪಂದ್ಯದಲ್ಲಿ ತೆಲುಗು ಟೈಟನ್ಸ್ ತಂಡವು 28–26 ಅಂತರದಿಂದ ಪಟ್ನಾ ಪೈರೇಟ್ಸ್ ತಂಡವನ್ನು ಸೋಲಿಸಿತು.

ಜೊಶುವಾ ಹ್ಯಾಟ್ರಿಕ್: ಬಿಎಫ್‌ಸಿಗೆ ಗೆಲುವು

ಬೆಂಗಳೂರು: ಜೊಶುವಾ ಡಿಸಿಲ್ವ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಬಿಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಸೋಮವಾರ 4–0 ಗೋಲುಗಳಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಜೊಶುವಾ 1ನೇ, 3ನೇ ಮತ್ತು 64ನೇ ನಿಮಿಷದಲ್ಲಿ ಗೋಲು ಗಳಿಸಿದರು. ಮತ್ತೊಂದು ಗೋಲನ್ನು ಸೋಹಂ ವಾರ್ಷ್ಣೇಯ (49ನೇ) ದಾಖಲಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು 1–0ಯಿಂದ ಚಿಕ್ಕಮಗಳೂರು ಎಫ್‌ಸಿ ತಂಡವನ್ನು ಸೋಲಿಸಿತು. ಸ್ಪೋರ್ಟಿಂಗ್ ಕ್ಲಬ್ ಪರ ವಿ.ವಿಘ್ನೇಶ್ (45ನೇ) ಗೋಲು ದಾಖಲಿಸಿದರು.

ಇಂದಿನ ಪಂದ್ಯಗಳು
ರೂಟ್ಸ್ ಎಫ್‌ಸಿ– ಪರಿಕ್ರಮ ಎಫ್‌ಸಿ (ಮಧ್ಯಾಹ್ನ 12.45)
ಸೌತ್ ಯುನೈಟೆಡ್ ಎಫ್‌ಸಿ– ಬೆಂಗಳೂರು ಇಂಡಿಪೆಂಡೆಂಟ್ಸ್ (3.45)

ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ

ಅಥರ್ವ, ತನಿಷ್ಕಾಗೆ ಪ್ರಶಸ್ತಿ ಡಬಲ್

ಪ್ರಜಾವಾಣಿ ವಾರ್ತೆ

ಧಾರವಾಡ: ಸಹನಾ ಎಚ್. ಮೂರ್ತಿ ಅವರು ಇಲ್ಲಿನ ಕಾಸ್ಮಾಸ್ ಸೆಂಚುರಿ ಕ್ಲಬ್‌ನಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 19 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದರು.

ಸೋಮವಾರ ನಡೆದ ಫೈನಲ್‌ನಲ್ಲಿ ಸಹನಾ 3–1 (11-6, 13-11, 11-9, 11-6) ರಿಂದ ಹಿಮಾಂಶಿ ಚೌಧರಿ ಅವರನ್ನು ಮಣಿಸಿದರು.

ಸೆಮಿಫೈನಲ್‌ನಲ್ಲಿ ಸಹನಾ 3–1ರಿಂದ ತೃಪ್ತಿ ಪುರೋಹಿತ್ ಅವರನ್ನು; ಹಿಮಾಂಶಿ 3–0ಯಿಂದ ನೀತಿ ಅಗರವಾಲ್ ಅವರನ್ನು ಸೋಲಿಸಿದ್ದರು.

ಅಥರ್ವಗೆ ಡಬಲ್ ಪ್ರಶಸ್ತಿ: ಅಥರ್ವ ನವರಂಗ ಅವರು 17 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಅವರು ಫೈನಲ್‌ನಲ್ಲಿ 3–0 (11-8, 11-8 ,11-9) ಯಿಂದ ಗೌರವ್ ಗೌಡ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಅಥರ್ವ 3–1ರಿಂದ ಆರ್ಯ ಎ. ಜೈನ್ ಎದುರು; ಗೌರವ್ 3–0ಯಿಂದ ರಿಗ್ನೇಶ್ ವಿರುದ್ಧ ಗೆಲುವು ಸಾಧಿಸಿದ್ದರು.



ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಪ್ರಶಸ್ತಿಯೊಂದಿಗೆ ತನಿಷ್ಕಾ ಕಾಲಭೈರವ್, ಅಥರ್ವ ನವರಂಗ ಮತ್ತು ಸಹನಾ ಎಚ್. ಮೂರ್ತಿ

15 ವರ್ಷದೊಳಗಿನವರ ವಿಭಾಗದಲ್ಲೂ ಅಥರ್ವ ಚಾಂಪಿಯನ್ ಆದರು. ಅವರು ಫೈನಲ್‌ನಲ್ಲಿ 3–1 (11-9, 13-11, 8-11, 11-8) ರಿಂದ ಸಿದ್ಧಾಂತ್ ಧರಿವಾಲ್ ಅವರನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ ಅಥರ್ವ 3–1ರಿಂದ ಅರ್ಣವ್ ಎನ್. ಎದುರು; ಸಿದ್ಧಾಂತ್ 3–1ರಿಂದ ಗೌರವ್ ಗೌಡ ಎದುರು ಜಯ ಗಳಿಸಿದ್ದರು.

ತನಿಷ್ಕಾಗೂ ಡಬಲ್ ಕಿರೀಟ: ಭಾನುವಾರ 17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದಿದ್ದ ತನಿಷ್ಕಾ ಕಪಿಲ್ ಕಾಲಭೈರವ್ ಅವರು 15 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲೂ ಚಾಂಪಿಯನ್ ಆದರು. ಅವರು ಫೈನಲ್‌ನಲ್ಲಿ 3–0 (12-10, 11-3, 11-8)ರಿಂದ ಕೈರಾ ಬಾಳಿಗ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ತನಿಷ್ಕಾ 3–0ಯಿಂದ ಸುಮೇಧಾ ಕೆ.ಎಸ್. ಭಟ್ ವಿರುದ್ಧ; ಕೈರಾ 3–0ಯಿಂದ ಶಿವಾನಿ ಮಹೇಂದ್ರನ್ ವಿರುದ್ಧ ಜಯ ಗಳಿಸಿದ್ದರು.

ಭಾರತ ಮಹಿಳಾ ಹಾಕಿ ತಂಡಕ್ಕೆ ಸಲೀಮಾ ನಾಯಕಿ

ನವದೆಹಲಿ (ಪಿಟಿಐ): ಬಿಹಾರದ ರಾಜಗೀರ್‌ನಲ್ಲಿ ನವೆಂಬರ್ 11 ರಿಂದ 20ರವರೆಗೆ ನಡೆಯಲಿರುವ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಮಹಿಳೆಯರ ಹಾಕಿ ಟೂರ್ನಿಯಲ್ಲಿ ಭಾಗವಹಿಲಿರುವ ಭಾರತ ತಂಡಕ್ಕೆ ಸಲೀಮಾ ಟೆಟೆ ಅವರನ್ನು ನಾಯಕಿಯನ್ನಾಗಿ ಹೆಸರಿಸಲಾಗಿದೆ. 18 ಆಟಗಾರ್ತಿಯರ ತಂಡವನ್ನು ಸೋಮವಾರ ಪ್ರಕಟಿಸಲಾಗಿದೆ.

ನವನೀತ್ ಕೌರ್ ಅವರು ತಂಡದ ಉಪನಾಯಕಿಯಾಗಿದ್ದಾರೆ. ರಾಂಚಿಯಲ್ಲಿ ಕಳೆದ ವರ್ಷ ನಡೆದ ಇದೇ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಪ್ರಶಸ್ತಿ ಗೆದ್ದ ಕಾರಣ ತಂಡದ ಮೇಲೆ ನಿರೀಕ್ಷೆಗಳು ಹೆಚ್ಚು ಇವೆ.

ತಂಡದಲ್ಲಿ ಭಾರತದ ಜೊತೆಗೆ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ಚೀನಾ, ಜಪಾನ್, ದಕ್ಷಿಣ ಕೊರಿಯಾ, ಮಲೇಷ್ಯಾ ಮತ್ತು ಥಾಯ್ಲೆಂಡ್ ತಂಡಗಳು ಭಾಗವಹಿಸಲಿವೆ.

ಭಾರತ ನವೆಂಬರ್ 11ರಂದು ಮಲೇಷ್ಯಾ ವಿರುದ್ಧ ಆಡುವ ಮೂಲಕ ಅಭಿಯಾನ ಆರಂಭಿಸಲಿದೆ.

ರಾಜಗೀರ್ ಕ್ರೀಡಾಂಗಣವನ್ನು ಹೊಸದಾಗಿ ಅಭಿವೃದ್ಧಿಪಡಿಸಲಾಗಿದೆ.

'ಹಾಲಿ ಚಾಂಪಿಯನ್ ಆಗಿ ಪ್ರಮುಖ ಟೂರ್ನಿಗೆ ತಂಡವನ್ನು ಮುನ್ನಡೆಸುವುದು ಅಪೂರ್ವ ಅನುಭವ' ಎಂದು ತಂಡದ ಆಯ್ಕೆಯ ನಂತರ, ಮಿಡ್‌ಫೀಲ್ಡರ್ ಸಲಿಮಾ ಪ್ರತಿಕ್ರಿಯಿಸಿದರು.



ಸಲೀಮಾ ಟೆಟೆ

ತಂಡ ಹೀಗಿದೆ: ಗೋಲ್‌ಕೀಪರ್ಸ್: ಸವಿತಾ ಮತ್ತು ಬಿಚು ದೇವಿ ಕರಿಬಮ್. **ಡಿಫೆಂಡರ್ಸ್:** ಉದಿತಾ, ಜ್ಯೋತಿ, ವೈಷ್ಣವಿ ವಿಠ್ಠಲ ಫಾಲ್ಕೆ, ಸುಶೀಲಾ ಚಾನು ಪುಖ್ರಾಂಬಮ್, ಇಶಿಕಾ ಚೌಧರಿ. **ಮಿಡ್‌ಫೀಲ್ಡರ್ಸ್:** ನೇಹಾ, ಸಲೀಮಾ ಟೆಟೆ, ಶರ್ಮಿಲಾ ದೇವಿ, ಮನಿಷಾ ಚೌಹಾನ್, ಸುನೆಲಿಟಾ ಟೊಪ್ಪೊ, ಲಾಲ್ರೆಂಸಿಯಾಮಿ, **ಫಾರ್ವರ್ಡ್ಸ್:** ನವನೀತ್ ಕೌರ್, ಪ್ರೀತಿ ದುಬೆ, ಸಂಗಿತಾ ಕುಮಾರಿ, ದೀಪಿಕಾ, ಬ್ಯೂಟಿ ಡಂಗ್ಡಂಗ್.

HONDA

Happy Dhanteras



Scooter ಅಂದ್ರೆ ACTIVA

With H-Smart Technology

5%
ಕ್ಯಾಶ್‌ಬ್ಯಾಕ್
₹5000# ವರೆಗೆ

ಕಡಿಮೆ ಬಡ್ಡಿ ದರ
@ 7.99%**

ವೀಡಿಯೋ ಆನಂದಿಸಲು,
QR ಕೋಡ್ ಸ್ಕ್ಯಾನ್ ಮಾಡಿ.




Rebel Red Metallic


Pearl Siren Blue


Pearl Precious White


Black


Matte Axis Grey Metallic

ACTIVA OVER 3.25 CRORE* HAPPY CUSTOMERS

ಹೆಚ್ಚಿನ ಮಾಹಿತಿಗಾಗಿ
ಮಿಸ್ ಕಾಲ್ ನೀಡಿ
7230032200

IDFC FIRST Bank — Bank**/Credit Card#
HDFC BANK — Credit Card#
TATA CAPITAL Two Wheeler Loans**
SHRIRAM Finance**
L&T Finance**

ಡೀಲರ್ ವಿವರಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ

BOOK ONLINE NOW!
www.honda2wheelersindia.com

CLICK BOOK RELAX

#Cashback Offer available on all Honda two-wheeler models for EMI transactions made using HDFC Bank credit cards and IDFC FIRST Bank credit cards through Pine Labs machines only. #Customers can avail 5% Instant cashback, up to a maximum of Rs. 5000. #Valid on one transaction per card/order during the offer period. #Cashback offer valid until 30th November 2024. #The scheme is available in select outlets only. **Approval of the loan is at the sole discretion of the financiers, and additional documentation may be required. **The interest rates, down payment, and tenure options are based on the financier's assessment of the applicant's credit profile. **The offers/features may be modified or withdrawn at any time without prior intimation. Product shown in the picture may vary from actual product available in the market. Accessories shown in the picture are not part of standard equipment. *Source: Cumulative Sales figure of Brand Activa from June 2001 to June 2024 as per HMSI internal data. CBR [Click, Book, Relax] facility available at selected dealerships only.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com